ಜನಶಕ್ತಿ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 28
ಜುಲೈ 08, 2012

ಪುಟ 16 ರೂ. 5/-



ರಾಷ್ಟ್ರಪತಿ ಚುನಾವಣೆ :



ಪ್ರಣವ್‌ಗೇಕೆ ಬೆಂಬಲ?



ಭೂಸುಧಾರಣೆಯ ಪ್ರಾಣ ತೆಗೆಯಲು ಹೊರಟ ಬಿಜೆಪಿ ಸರ್ಕಾರ



ಹಗರಣ ಮುಚ್ಚಿಕೊಳ್ಳಲು ನಾಟಕ !

ಮತ್ತೆ ಬರದ ಛಾಯೆ ನೆರವಿಗೆ ಬರದ ಸರ್ಕಾರ





ಈಜಿಪ್ಟ್ : ಇಸ್ಲಾಂವಾದಿ-ಮಿಲಿಟರಿ ರಾಜಿ?

ಕೊಡುಗು: ಪೈಸಾರಿ ಜಾಗ ಮತ್ತು ನಿವೇಶನಕ್ಕೆ ಆಗ್ರಹಿಸಿ ಸಿಐಟಿಯು ನೇತೃತ್ವದಲ್ಲಿ ಪ್ರತಿಭಟನೆ.

ಅಮ್ಮತ್ತಿ ಕಂದಾಯ ಇಲಾಖೆ, ಅಮ್ಮತ್ತಿ ಗ್ರಾಮ ಪಂಚಾಯತ್ ಮತ್ತು ಕಾರ್ಮಾಡು ಗ್ರಾಮ ಪಂಚಾಯತ್



ಮುಂದೆ ನೂರಾರು ಕಾರ್ಮಿಕರು ನಿವೇಶನ ಹಕ್ಕುಪತ್ರ, ಪೈಸಾರಿ ಜಾಗ ವಶಕ್ಕೆ ಒತ್ತಾಯಿಸಿ ಜೂನ್ 18 ಮತ್ತು 19 2012 ರಂದು ಎರಡು ದಿನಗಳ ಧರಣಿ ಸತ್ಯಾಗ್ರಹವನ್ನು ಸಿಐಟಿಯು ನೇತೃತ್ವದಲ್ಲಿ ನಡೆಸಿದರು.

ಜಿಲ್ಲೆಯಲ್ಲಿ ಪೈಸಾರಿ ಜಾಗಗಳು ಸಾವಿರಾರು ಎಕರೆ ಇದ್ದರೂ ದೊಡ್ಡ ದೊಡ್ಡ ಭೂ ಮಾಲಿಕರು ಅದನ್ನು ಒತ್ತುವರಿ ಮಾಡಿಕೊಂಡು ಬಿಟ್ಟಿದ್ದಾರೆ. ಇದನ್ನು ತೆರವುಗಿಳಿಸಲು ಅಧಿಕಾರಿಗಳು ಮುಂದಾಗುತ್ತಿಲ್ಲ. ಬಡವರು, ಕೃಷಿ ಕಾರ್ಮಿಕರು, ಕಾರ್ಮಿಕರು ತುಂಡು ಭೂಮಿಯೂ ಇಲ್ಲದೇ ನಿವೇಶನವೂ ಇಲ್ಲದೇ ಇಂದಿಗೂ ಜೀತದಾಳುಗಳಾಗಿ ಕೆಲವು ತೋಟಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರಿಗೆ ಸ್ವತಂತ್ರ ಬದುಕೇ ಇಲ್ಲವಾಗಿದೆ. ಇವರ ಸಮಸ್ಯೆಗೆ ಜಿಲ್ಲಾಡಳಿತವಾಗಲಿ ಸಂಬಂಧಪಟ್ಟ ಅಧಿಕಾರಿಗಳಾಗಲಿ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಬಗ್ಗೆ ಹಿಂದೆಯೂ ಪ್ರತಿಭಟನೆ ನಡೆಸಲಾಗಿತ್ತು. ಆದರೂ ಯಾವುದೇ ಕ್ರಮ ಕೈಗೊಳ್ಳಲಿಲ್ಲ.

ಈ ಹಿನ್ನೆಲೆಯಲ್ಲಿ ಪ್ರತಿಭಟನಾಕಾರರು ಕಾರ್ಮಾಡು ಗ್ರಾಮ ಪಂಚಾಯತ್ ಕಚೇರಿ ಮುಂದೆ ಪ್ರತಿಭಟನೆ ನಡೆಸಿ ಸ್ಥಳಕ್ಕೆ ತಹಶೀಲ್ದಾರ್ ಹಾಗೂ ಜಿಲ್ಲಾಧಿಕಾರಿಗಳು ಬರಬೇಕು ಎಂದು ಆಗ್ರಹಿಸಿದರು. ಕೊನೆಗೂ ಸಂಬಂಧಪಟ್ಟ ಉನ್ನತಾಧಿಕಾರಿಗಳು ಸ್ಥಳಕ್ಕೆ ಬರಲಿಲ್ಲ. ಇನ್ನೂ ತೀವ್ರ ರೀತಿಯ ಪ್ರತಿಭಟನೆಯನ್ನು ನಡೆಸುವ ಸಲುವಾಗಿ ಆಡಳಿತಕ್ಕೆ 10 ದಿನಗಳ ಗಡುವು ನೀಡಿ ಪ್ರತಿಭಟನೆಯನ್ನು ತಾತ್ಕಾಲಿಕವಾಗಿ ಹಿಂತೆಗೆದುಕೊಳ್ಳಲಾಯಿತು.



ಇದಾಗುವ ಹೊತ್ತಿಗೆ ಕೊನೆಯಲ್ಲಿ ಕಂದಾಯ ಅಧಿಕಾರಿ ಶಿವಣ್ಣ ಆಗಮಿಸಿ ಪ್ರತಿಭಟನಾಕಾರರ ಮನವಿ ಪತ್ರವನ್ನು ತೆಗೆದುಕೊಂಡು ಕ್ರಮ ಕೈಗೊಳ್ಳಲು ಮೇಲಾಧಿಕಾರಿಗಳ ಗಮನಕ್ಕೆ ತರುತ್ತೇವೆ ಎಂದು ಹೇಳಿದರು.

ಪ್ರತಿಭಟನೆಯ ನೇತೃತ್ವವನ್ನು ಎ. ಮಹದೇವ. ಸಿಐಟಿಯು ಪ್ರಧಾನ ಕಾರ್ಯದರ್ಶಿ, ರಮೇಶ್ '.ಎಚ್.ಬಿ., ಮಹೇಶ ಸಮ್ಮದ್.

ಆದಿವಾಸಿ ಸಂಘಟನೆಯ ಮುಖಂಡರಾದ. ಗಣೇಶ, ಮುತ್ತಮ್ಮ, ಹೊನ್ನಪ್ಪ, ಇಬ್ರಾಹಿಂ, ಪಾಪಣ್ಣನವರು ವಹಿಸಿದ್ದರು.

● ವರದಿ: ರಮೇಶ್. ಎಚ್.ಬಿ.

ವೃದ್ಧಾಪ್ಯ, ವಿಧವಾ, ಸಂಧ್ಯಾ ಸುರಕ್ಷಾ ಹಾಗೂ ಅಂಗವಿಕಲರ ವೇತನ ಬಿಡುಗಡೆಗೆ ಒತ್ತಾಯಿಸಿ ಮಂಡ್ಯ ಜಿಲ್ಲಾದ್ಯಂತ ಪ್ರತಿಭಟನೆ

ಮಂಡ್ಯ ಜಿಲ್ಲೆಯಾದ್ಯಂತ ಪ್ರಾಂತ ಕೃಷಿ ಕೂಲಿಕಾರರ ಸಂಘವು ನೊಂದ ಜನಗಳಿಗೆ ನ್ಯಾಯಕ್ಕಾಗಿ ಬೀದಿಗಿಳಿದಿದೆ. ಯಾಕೆ ? ಏನು ? ಓದಿ.

ಕೆ. ಹನುಮೇಗೌಡ

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರ ಸಂಘದ ನೇತೃತ್ವದಲ್ಲಿ ವಯಸ್ಸಾದ ಮೇಲೆ ದುಡಿದು ಸಂಪಾದನೆ ಮಾಡಿ ಜೀವನ ಸಾಗಿಸಲು ಸಾಧ್ಯವಿಲ್ಲದ ವಯೋವೃದ್ಧರು, ವಿಧವೆಯರು, ಅಂಗವಿಕಲರು ಮುಂತಾದವರನ್ನು ಸಂಘಟಿಸಿ ಅವರ ಮಾಸಿಕ ವೇತನಕ್ಕಾಗಿ ಮೇ 18, 2012 ರಂದು ಜಿಲ್ಲಾ ಕೇಂದ್ರ ಮಂಡ್ಯ ಹಾಗೂ ಮಳವಳ್ಳಿ ಮದ್ದೂರು, ನಾಗಮಂಗಲ, ಶ್ರೀರಂಗಪಟ್ಟಣ, ಪಾಂಡವಪುರ ತಾಲ್ಲೂಕಿನ ಎಲ್ಲಾ ಕಛೇರಿಗಳ ಮುಂದೆ ಏಕ ಕಾಲದಲ್ಲಿ ಅನಿರ್ದಿಷ್ಟ ಧರಣಿ ಪ್ರಾರಂಭಿಸಲಾಯಿತು. ಜಿಲ್ಲೆಯ ಎಲ್ಲಾ ತಾಲ್ಲೂಕು ಕಛೇರಿಗಳ ಮುಂದೆ ಅಂಗವಿಕಲರು ಮತ್ತು ವಿಧವಾ ವೇತನ, ಸಂಧ್ಯಾ ಸುರಕ್ಷ, ವೃದ್ಧಾಪ್ಯ ವೇತನ ಫಲಾನುಭವಿಗಳು ಹಾಗೂ ಅರ್ಹರಾಗಿದ್ದರೂ ವೇತನದಿಂದ ವಂಚಿತರಾಗಿದ್ದ ನೂರಾರು ಜನರು ಧರಣಿಯಲ್ಲಿ ಭಾಗವಹಿಸಿದ್ದರು. ಈ ಎಲ್ಲ ಯೋಜನೆಗಳಿಗೆ ಹೊಸದಾಗಿ ಅರ್ಜಿಗಳನ್ನು ಸ್ವೀಕರಿಸಬೇಕು. ತಡೆಹಿಡಿದಿರುವ ವೇತನಗಳನ್ನು ತಕ್ಷಣ ಬಿಡುಗಡೆ ಮಾಡಬೇಕು. ಸಂಧ್ಯಾ ಸುರಕ್ಷಾ ಯೋಜನೆಯ ಆದೇಶ ಪ್ರತಿ ನೀಡಿರುವ ಎಲ್ಲಾ ಫಲಾನುಭವಿಗಳಿಗೆ ಹಣ ಬಿಡುಗಡೆ ಮಾಡಬೇಕು, ಕಳೆದ ಸಾಲಿನ ಬಜೆಟ್‌ನಲ್ಲಿ ಹೆಚ್ಚುವರಿ ಆದೇಶವಾಗಿರುವ 100 ರೂ ಬಾಕಿಯನ್ನು ಪಾವತಿ ಮಾಡಬೇಕು. ಈ ಎಲ್ಲಾ ಯೋಜನೆಗಳ ಹಣವನ್ನು ಪ್ರತಿ ತಿಂಗಳು 10ನೇ ತಾರೀಕಿನೊಳಗೆ ಫಲಾನುಭವಿಗಳಿಗೆ ತಲುಪಿಸಲು ಕ್ರಮ ವಹಿಸಬೇಕು ಹಾಗೂ ಈಗ ನೀಡುವ ಮಾಸಿಕ ವೇತನ 400 ರೂಗಳಿಂದ 1000 ರೂ ಗಳಿಗೆ ಹೆಚ್ಚಿಸಬೇಕೆಂದು ಜಿಲ್ಲಾಧಿಕಾರಿಗಳಿಗೆ ಹಾಗೂ ಎಲ್ಲಾ ತಾಲ್ಲೂಕು ತಹಸೀಲ್ದಾರಗಳಿಗೆ ಮನವಿ ಸಲ್ಲಿಸಲಾಯಿತು. ಮನವಿ ಸ್ವೀಕರಿಸಿದ ಜಿಲ್ಲಾಧಿಕಾರಿಗಳು ಹಾಗೂ ತಹಸಿಲ್ದಾರ್ ರವರು ನಿಮ್ಮ ಎಲ್ಲಾ ಬೇಡಿಕೆಯನ್ನು ಈಡೇರಿಸಲು ಸಮಯಾವಕಾಶ ಬೇಕಾಗಿದ್ದು ತಾವು ಅವಕಾಶ ನೀಡಬೇಕು ಎಂದು ಮನವಿ ಮಾಡಿದರು. ಕೆಲವು ಬೇಡಿಕೆಗಳು ಸರ್ಕಾರದ ಮಟ್ಟದಲ್ಲಿ ಆಗಬೇಕಾಗಿರುವುದರಿಂದ ಸರ್ಕಾರದ ಜೊತೆ ಮಾತನಾಡಿ ಬಗೆಹರಿಸಲು ಪ್ರಯತ್ನಿಸುತ್ತೇವೆ, ಒಂದು ತಿಂಗಳು ಸಮಯ



ನೀಡಿ ಎಂದು ಮನವಿ ಮಾಡಿದ್ದಾರೆ. ಹಾಗಾಗಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘವು ಅನಿರ್ದಿಷ್ಟ ಧರಣಿಯನ್ನು ವಾಪಸ್ಸು ಪಡೆಯಿತು.

ಮಂಡ್ಯ ಧರಣಿಯ ನೇತೃತ್ವವನ್ನು ಜಿಲ್ಲಾಧ್ಯಕ್ಷರಾದ ಎಂ. ಪುಟ್ಟಮಾದು, ಕೆ.ಹೆಚ್. ಪುಟ್ಟ ಮಾದೇಗೌಡ, ಸಿ. ಕುಮಾರಿ, ಅಬ್ದುಲ್ಲ, ಕುಮಾರ್, ನಾಗಮಂಗಲ ತಾಲ್ಲೂಕಿನ ಧರಣಿಯ ನೇತೃತ್ವವನ್ನು ಜಿಲ್ಲೆ ಸಹ ಕಾರ್ಯದರ್ಶಿ ಕೆ. ಹನುಮೇಗೌಡ, ಸಂಚಾಲಕಿ, ಶಾಂತಮ್ಮ, ಜವರಾಯಿ ವಹಿಸಿದ್ದರು.

ಮದ್ದೂರು ತಾಲ್ಲೂಕಿನ ಧರಣಿಯ ನೇತೃತ್ವವನ್ನು ತಾಲ್ಲೂಕು ಕಾರ್ಯದರ್ಶಿ ಬಿ. ಹನುಮೇಶ್, ಚಂದಣ್ಣ, ಕೆಂಪಮ್ಮ, ವಿಷಕಂಠೇ ಗೌಡ, ಮಂಚೇಗೌಡ, ಸುಶೀಲಮ್ಮ, ಜೆಎಂಎಸ್‌ನ ದೇವಿ, ಶೋಭಾ, ಲತಾ ಮುಂತಾದವರು, ಮಳವಳ್ಳಿ ತಾಲ್ಲೂಕಿನ ಧರಣಿ ನೇತೃತ್ವವನ್ನು ಜಿಲ್ಲಾ ಕಾರ್ಯದರ್ಶಿ ಕೆ. ಬಸವರಾಜು, ಶಿವ ಮಲ್ಲಯ್ಯ, ಸರೋಜಮ್ಮ, ಶಿವ ಬೋರಯ್ಯ , ಡಿ.ಸಿ. ಚೌಡೇಗೌಡ, ಸವಕಯ್ಯ, ಅಂಗವಿಕಲರ ಮುಖಂಡ ಮರೀಗೌಡ,, ಕೆಪಿಆರ್‌ಎಸ್‌ನ ಕೃಷ್ಣೇಗೌಡ; ಲಿಂಗರಾಜು ಶ್ರೀರಂಗ ಪಟ್ಟಣ ತಾಲ್ಲೂಕಿನ ಧರಣಿ ನೇತೃತ್ವವನ್ನು ಶಂಕರಪ್ಪ, ಲೋಕೇಶ್ ಪಾಂಡವಪುರ ತಾಲ್ಲೂಕಿನ ಧರಣಿ ನೇತೃತ್ವವನ್ನು ಕೃಷ್ಣೇಗೌಡ, ನಾಗರಾಜು ಮುಂತಾದವರು ವಹಿಸಿದ್ದರು.

ಸಂಪಾದಕೀಯ

ಅವಧಿ ಮುನ್ನ ಚುನಾವಣೆ ?

ಕರ್ನಾಟಕದ ಆಡಳಿತಾರೂಢ ಬಿಜೆಪಿಯೊಳಗಿನ ಆಂತರಿಕ ಕಿತ್ತಾಟ ಕಂಡು ಅಸಹ್ಯ ಪಟ್ಟುಕೊಳ್ಳದವರು ಯಾರೂ ಇರಲಾರರು. ಬಿಜೆಪಿ ಅಂದರೆ ಭ್ರಷ್ಟಾಚಾರ ಎಂಬ ಅನ್ವರ್ಥ ನಾಮಕ್ಕೆ ಜನ್ಮ ಕೊಟ್ಟ ಯಡಿಯೂರಪ್ಪಗೆ ತನ್ನನ್ನು ಮತ್ತು ತನ್ನ ಮಕ್ಕಳನ್ನು ನ್ಯಾಯಾಲಯದ ನೇಣಿನಿಂದ ಪಾರು ಮಾಡುವುದೊಂದೇ ಚಿಂತೆ, ಅದಕ್ಕಾಗಿ ಅವರು ಏನು ಬೇಕಾದರು ಮಾಡಲು ಸಿದ್ಧ. ಮುಖ್ಯ ಮಂತ್ರಿ ಸ್ಥಾನಕ್ಕೆ ಲಿಂಗಾಯತ ಸಮುದಾಯದವರನ್ನು ನೇಮಿಸಿದರೆ ಮುಂಬರುವ ಚುನಾವಣೆಯಲ್ಲಿ ಲಾಭವಾಗಬಹುದು ಎಂದು ಬಿಜೆಪಿ ವರಿಷ್ಠರು ಅಭಿಪ್ರಾಯ ರೂಪಿಸಿದ್ದಾರೆ ಎನ್ನಲಾಗುತ್ತಿದೆ. ಇದನ್ನೇ ಗಟ್ಟಿಯಾಗಿ ನಂಬಿರುವ ಯಡಿಯೂರಪ್ಪ ಹಿಂದೆ ತನ್ನ ವಿರುದ್ಧ ಬಂಡಾಯದ ಬಾವುಟವನ್ನು ಎತ್ತಲು ಮುಂದಾಗಿದ್ದ ಜಗದೀಶ್ ಶೆಟ್ಟರ್ ಅವರನ್ನೇ ಮುಖ್ಯ ಮಂತ್ರಿ ಮಾಡಲು ಹೊರಟಿದ್ದಾರೆ.

ಈ ನಡುವೆ ರಾಜ್ಯ ಬಿಜೆಪಿ ಅಧ್ಯಕ್ಷ ಕೆ.ಎಸ್.ಈಶ್ವರಪ್ಪ ನಾನೇಕೆ ಮುಖ್ಯ ಮಂತ್ರಿಯಾಗಬಾರದು ಎಂದು ಬಹಿರಂಗ ಸವಾಲು ಎಸೆದು ಕಾಗಿನೆಲೆಯಲ್ಲಿರುವ ಕನಕ ಗುರುಪೀಠದ ಪೀಠಾಧಿಪತಿಗಳ ಆಶೀರ್ವಾದ ಪಡೆದು ಬಂದಿದ್ದಾರೆ. ಇತ್ತ ಬೆಂಗಳೂರು ಪದವೀಧರ ಕ್ಷೇತ್ರದಿಂದ ಬಹು ಪ್ರಯಾಸಪಟ್ಟು 244 ಮತಗಳ ಅತ್ಯಲ್ಪ ಅಂತರದಿಂದ ಜಯಗಳಿಸಿರುವ ರಾಮಚಂದ್ರ ಗೌಡ ನನಗೂ ಮುಖ್ಯ ಮಂತ್ರಿ ಸ್ಥಾನ ಬೇಕು ಎಂದು ಯಾವುದೇ ಸಂಕೋಚವಿಲ್ಲದೆ ಹೇಳಿದ್ದಾರೆ.

ಅತ್ತ " ಯಾವುದೇ ಕಾರಣಕ್ಕೂ ನಾಯಕತ್ವ ಬದಲಾವಣೆ ಮಾಡಬಾರದು. ಹೈಕಮಾಂಡ್ ಅಂತಹ ಸಾಹಸಕ್ಕೆ ಕೈ ಹಾಕಿದರೆ ವಿಧಾನ ಸಭೆ ವಿಸರ್ಜನೆಗೆ ಶಿಫಾರಸ್ಸು ಮಾಡಬೇಕು ಎಂದು ಸದಾನಂದ ಗೌಡ ನೇತೃತ್ವದಲ್ಲಿ ನಡೆದ ಆಪ್ತ ಸಚಿವರ ಸಭೆಯಲ್ಲಿ ಸರ್ವಾನುಮತದ ತೀರ್ಮಾನ ತೆಗೆದುಕೊಳ್ಳಲಾಗಿದೆ " ಎನ್ನಲಾಗುತ್ತಿದೆ.

ವಿಧಾನ ಸಭೆಯನ್ನು ವಿಸರ್ಜಿಸುವ ಸಿ.ಎಂ. ಬಣದ ಬೆದರಿಕೆಯನ್ನು ಯಡಿಯೂರಪ್ಪ ಬಣ ನಿರ್ಲಕ್ಷಿಸುವ ಪರಿಸ್ಥಿತಿ ಇಲ್ಲ. ಬಿಜೆಪಿ ಹೈಕಮಾಂಡ್ ಇದೇ ರೀತಿಯ ಚಿಂತನೆಯಲ್ಲಿದೆ ಎಂಬ ಸುದ್ದಿ ಈ ಹಿಂದೆಯೇ ಹರಡಿತ್ತು. ಬಿಜೆಪಿ ವರಿಷ್ಠರಲ್ಲಿ ಯಡಿಯೂರಪ್ಪನನ್ನು ಬೆಂಬಲಿಸಬಾರದೆಂಬ ಅಭಿಪ್ರಾಯಕ್ಕೆ ಬಂದವರು ಅವಧಿ ಮುನ್ನ ಚುನಾವಣೆಗೆ ಶಿಫಾರಸ್ಸು ಮಾಡುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ.

ರಾಜ್ಯದ ಜನತೆಯ ಹಿತ ದೃಷ್ಟಿಯಿಂದಲೂ ವಿಧಾನ ಸಭೆಗೆ ಆದಷ್ಟು ಬೇಗ ಚುನಾವಣೆಗಳನ್ನು ನಡೆಸುವುದು ಸೂಕ್ತವೇ ಆಗಿದೆ. ನಾಯಕತ್ವ ಬದಲಾವಣೆಗಾಗಿ ರಾಜ್ಯ ಬಿಜೆಪಿಯೊಳಗೆ ನಡೆಯುತ್ತಿರುವ ಕಚ್ಚಾಟದಿಂದಾಗಿ ರಾಜ್ಯದಲ್ಲಿ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಸರ್ಕಾರವೇ ಇಲ್ಲದಂತಾಗಿದೆ. ಭೀಕರ ಬರ, ಕುಡಿಯುವ ನೀರಿನ ತೀವ್ರ ಅಭಾವ, ಅಗತ್ಯ ವಸ್ತುಗಳ ಭಾರೀ ಬೆಲೆ ಏರಿಕೆಯಂತಹ ಸಮಸ್ಯೆಗಳ ಸುಳಿವಿಗೆ ಸಿಕ್ಕಿಕೊಂಡು ರಾಜ್ಯದ ಜನತೆ ಪರದಾಡುವಂತಾಗಿದ್ದರೂ ತಮಗೆ ಮತ ನೀಡಿ ಅಧಿಕಾರಕ್ಕೆ ತಂದಿರುವ ಜನರನ್ನೇ ಮರೆತಿರುವ ಸರ್ಕಾರ ಇದ್ದರೇನು ಹೋದರೇನು.


ಬಿಜೆಪಿ ಸರ್ಕಾರ ತನ್ನ ಭಾರದ ಅಡಿಯಲ್ಲಿ ತಾನೇ ಕುಸಿದು ಬೀಳಲಿದೆ ಎನ್ನುವ ಮಾತಿನ ಮರ್ಮ ಈಗ ವ್ಯಕ್ತವಾಗತೊಡಗಿದೆ. ಅತ್ಯಂತ ಶಿಸ್ತಿನ ಪಕ್ಷ ಎಂದು ಹೇಳಲಾಗುತ್ತಿದ್ದ ಬಿಜೆಪಿಯಲ್ಲಿ ಒಂದು ಬಣ ಇನ್ನೊಂದು ಬಣದ ಕಾಲು ಎಳೆಯುತ್ತಿರುವುದನ್ನು ನೋಡಿದರೆ, ಈ ಸರ್ಕಾರ ಅಂತಿಮವಾಗಿ ಪತನಗೊಂಡಾಗ ಅದಕ್ಕಾಗಿ ಕಣ್ಣೀರಿಡುವವರು ಹುಡುಕಿದರೂ ಯಾರೂ ಸಿಗಲಿಕ್ಕಿಲ್ಲ. ●

ಹಗರಣ ಮುಚ್ಚಿಕೊಳ್ಳುವ ನಾಟಕ

ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ಮುಳುಗಿರುವ ಬಿಜೆಪಿಯು ಸುರೇಶ್ ಕುಮಾರ್ ಭೂ ಹಗರಣ ಪ್ರಕರಣದಲ್ಲಿ ಶುದ್ಧಚಾರಿತ್ರ್ಯ, ಪ್ರಾಮಾಣಿಕ ಎಂಬಂತಹ ಗುರಾಣಿಯಿಂದ ಮುಖ ಉಳಿಸಿಕೊಳ್ಳಲು ಹೆಣಗಿತು. ನೈತಿಕ ಅಧಃಪತನದ ಕೊಚ್ಚೆಯಲ್ಲಿರುವ ಅದಕ್ಕೆ ಕ್ಲೀನ್ ಚಿಟ್ ನೀಡಲು ಸಾಧ್ಯವಾದರೂ ಹೇಗೆ?

'ಕೊಟ್ಟ ರಾಜೀನಾಮೆಯನ್ನು ಹಿಂಪಡೆಯುವ ಪ್ರಶ್ನೆಯೇ ಇಲ್ಲ' ಎಂದು 'ಬಿಟ್ಟ ಬಾಣವನ್ನು ತಿರುಗಿ ತಾನೆಂದೂ ಹೂಡುವುದಿಲ್ಲ' ವೆಂದು ತಾಯಿ ಕುಂತಿಗೆ ಪ್ರಮಾಣ ವಚನ ನೀಡಿದ್ದ ದಾನಶೂರ ಕರ್ಣನಂತೆ ಭಾರೀ ಡೈಲಾಗ್ ಹೊಡೆದಿದ್ದ 'ಶುದ್ಧ(?!ಅ) ಚಾರಿತ್ರ್ಯ'ದ ಸಚಿವ ಸುರೇಶ್ ಕುಮಾರ್ ರಾಜೀನಾಮೆ ವಾಪಾಸು ಪಡೆದ ರೀತಿ ಎಂತಹವರೂ ಎದ್ದು ಬಿದ್ದು ನಗುವಂತಿದೆ!

ಬ್ರಹ್ಮಾಂಡ ಭ್ರಷ್ಟಾಚಾರವೇ ಮೈವೆತ್ತಂತಿರುವ ಬಿಜೆಪಿ ಸರಕಾರದಲ್ಲಿ ಕಾನೂನು ಸಚಿವರಾಗಿ ಸರ್ವ ಹಗರಣಗಳನ್ನೂ ಕಲಿತ ವಿದ್ವತ್ ಬಳಸಿ ಸಮರ್ಥಿಸುವ ಇವರು ಹೆಚ್ಚು ಮಾತನಾಡದ, ಆದರೆ ಕಾನೂನು ಪಾಲನೆಯೊಂದನ್ನು ಬಿಟ್ಟು ಸರಕಾರದ ಎಲ್ಲವನ್ನೂ ಕೇಶವಕೃಪಾದ ಅಜೆಂಡಾ-ಆಜ್ಞೆಯನ್ನು ಶಿರಸಾವಹಿಸಿ ಜಾರಿ ಮಾಡುವ ನಿಷ್ಠರು. ಒಂದರ್ಥದಲ್ಲಿ ಸದಾನಂದಗೌಡರು 19 ಖಾತೆಗಳನ್ನು ಕೈಯಲ್ಲಿಟ್ಟುಕೊಂಡು ಖಾಲಿಯಾಗಿ ಓಡಾಡುವಂತೆ ಮಾಡಿ ಉಳಿದ ರಾಜ್ಯಭಾರವನ್ನು ಸುರೇಶ್ ಕುಮಾರರಂತಹವರ ಡೆಮ್ಮಿ ಸುಪರ್ದಿಗೆ ಬಿಟ್ಟಿರುವುದು ಗುಟ್ಟೇನಲ್ಲ. ಸಂಘ ನಿಷ್ಠೆ, ಮೇಲ್ಜಾತಿ ಪ್ರತಿಭೆಗಳೇ ಇವರನ್ನು ಮುಖ್ಯಮಂತ್ರಿ ಗಾದಿಗೇರಿಸಲು ಇರುವ ವಿಶೇಷ ಅರ್ಹತೆಗಳೆಂದು ಹಲವರು ಪಟ್ಟ ಮಾಡುವುದು, ಟಿವಿ, ಪತ್ರಿಕೆಗಳು ಬೊಬ್ಬಿರಿಯುವುದೂ ಉಂಟು.



ಶುದ್ಧ ಚಾರಿತ್ರ್ಯದ ಗುರಾಣಿ

ಇಂತಹ ಮಾನ್ಯರ ಮೇಲೆ ಇದ್ದ ಆರೋಪ ಭೂ ಹಗರಣ. ತಮಗೆ ಸ್ವಂತ ಮನೆಯಿದ್ದೂ ಇಲ್ಲವೆಂದು ಪ್ರಮಾಣಪತ್ರ ನೀಡಿ ಹಲವು ಕಡೆಗಳಲ್ಲಿ ಬಿ.ಡಿ.ಎ. ನಿವೇಶನಗಳನ್ನು ಪಡೆದಿದ್ದಾರೆ. ಈ ಬಗ್ಗೆ ಬಿಜೆಪಿಯ ನಿಷ್ಠ ಕಾರ್ಯಕರ್ತನೇ ದಾಖಲೆಗಳ ಸಮೇತ ದೂರು ನೀಡಿದ್ದಾನೆ. ಇದರಲ್ಲಿ ಕಾನೂನು ಸಚಿವರು ಮನನೋಯಿಸಿಕೊಳ್ಳುವ ಅಗತ್ಯವೇನಿತ್ತು? ಅದೇ ರಾಜೀನಾಮೆಗೆ ಕಾರಣವಾಗಬೇಕಿತ್ತೆ. ಅಥವಾ ನೈತಿಕ ಹೊಣೆಯಿಂದ ರಾಜೀನಾಮೆ ಕೊಟ್ಟಿದ್ದರೆ ಅರ್ಥವಂತಿಕೆಯಾದರೂ ಬರುತ್ತಿರಲಿಲ್ಲವೇ ? ಈ ಮೇಲಾದರೂ ಮುಕ್ತ ಕಾನೂನು ತನಿಖೆಗೆ ಒಡ್ಡಿಕೊಳ್ಳಬೇಕಾಗಿತ್ತು. ಆದರೆ ಆರೋಪದ ಸತ್ಯಾ ಸತ್ಯತೆಯ ಪರಿಶೀಲನೆ ಹೆಸರಿನಲ್ಲಿ ಸರಕಾರದ ಅಡ್ವೋಕೇಟ್ ಜನರಲ್‌ರವರ ಮೂಲಕ ಕ್ಲೀನ್ ಚೀಟಿ ಪಡೆದು ಪವಿತ್ರನಾಗಿದ್ದೇನೆ ಎಂದು ರಾಜೀನಾಮೆ ಹಿಂಪಡೆದು ಶುದ್ಧ ಚಾರಿತ್ರ್ಯದ ಗುರಾಣಿ ಹಿಡಿದು ಸಚಿವ ಸ್ಥಾನದಲ್ಲಿ ಉಳಿದಿದ್ದಾರೆ ಸಚ್ಚರಿತರು!

ಎಂತಹ ನೈತಿಕತೆ?

'ಅಂತಹ ಪತ್ರ ನೀಡಿದ ಸರಕಾರದ ಅಡ್ವೋಕೇಟ್ ಜನರಲ್ ಯಾರು ? ಅವರಿಗೆ ಇರುವ ಹಕ್ಕುಗಳಾದರೂ ಏನು ? ಇವರು ಸರಕಾರ ನೇಮಿಸಿದ, ಅದರಲ್ಲೂ ಕಾನೂನು ಸಚಿವರ ಸ್ಥಾನಕ್ಕಿಂತ ಕೆಳಗೆ ಬರುವ, ಏನಿದ್ದರೂ ಸರಕಾರಕ್ಕೆ ಕಾನೂನು ವಿಷಯದಲ್ಲಿ ಸಲಹೆ, ಸೂಚನೆ ನೀಡುವ ವ್ಯಾಪ್ತಿ ಮಾತ್ರ ಅವರಿಗಿದೆ ಅಲ್ಲವೇ ? ಇಂತಹವರು ಆರೋಪಿಗೆ ಕ್ಲೀನ್ ಚಿಟ್ ನೀಡಲು ಅವರೇನು ನ್ಯಾಯಾಲವೇ ? ಅಥವಾ ನ್ಯಾಯಾಧೀಶರೇ? ಈ ಹಕ್ಕು, ಅಧಿಕಾರ ಕೊಟ್ಟವರ್ಯಾರು ? ಅಂತಹವರ ಹೇಳಿಕೆಯನ್ನೇ ನ್ಯಾಯಾಲದ ಆದೇಶದಂತೆ ವಿಜೃಂಭಿಸಿ ದೋಷ ಮುಕ್ತನೆಂದು ಸಂಭ್ರಮಿಸುವ ನೈತಿಕತೆಯಾದರೂ ಎಂತಹುದು? ಅಂದರೆ ಇಡೀ ಸರಕಾರವೇ ಆರೋಪಿಯ ರಕ್ಷಣೆಗೆ ಟೊಂಕ ಕಟ್ಟಿ ನಿಲ್ಲುವ ಸೂಚನೆಯನ್ನು ನೀಡಿದಂತಾಯಿತಲ್ಲ.

ಆರಂಭದಿಂದಲೂ ಆರೋಪ ಬಂದ ಕೂಡಲೇ ಮುಖ್ಯಮಂತ್ರಿಗಳು ಕನಿಷ್ಠ ವಿವರವಾಗಿ ಪರಿಶೀಲಿಸದೇ ರಾಜೀನಾಮೆ ಅಂಗೀಕರಿಸುವುದಿಲ್ಲವೆಂದು ಹೇಳಿದಾಗಲೇ ಆರೋಪಿಯನ್ನು ರಕ್ಷಿಸುವ, ಸಮರ್ಥಿಸುವ ಎಲ್ಲರ ಭಂಡತನವೇ ಇಲ್ಲೂ ಕಂಡಿತು. ಈ ಇಂಗಿತದಂತೆಯೇ ಅಡ್ವೋಕೇಟ್ ಜನರಲ್ ವರ್ತಿಸಿಲ್ಲವೆಂದು ಹೇಳಲು ಸಾಧ್ಯವೇ? ಈ ಪ್ರಕರಣದಲ್ಲಿ ಸುರೇಶ್ ಕುಮಾರ್ ಎಲ್ಲರಿಗಿಂತ ಭಿನ್ನ ಹೇಗಾಗುತ್ತಾರೆ? ಅವರು ಪ್ರಾಮಾಣಿಕರಾಗಿದ್ದಲ್ಲಿ ಎಂದೋ ಹೊರ

ಪುಟ 4.ಕ್ಕೆ

ಕಾರ್ಟೂನ್ ಕಾರ್ನರ್



ಆಂಧ್ರ:ಭೂಮಿ ಹಕ್ಕು ಬಿಡೆನೆಂದದ್ದಕ್ಕೆ ಐವರು ದಲಿತರ ಕಗ್ಗೊಲೆ

ಐವರು ದಲಿತರನ್ನು ಅಲ್ಲಿ ನಿರ್ದಯವಾಗಿ ಕೊಂದು ಹಾಕಲಾಯಿತು. ಮತ್ತೆಷ್ಟೋ ಜನರನ್ನು ಬಡಿದರು. ಸಮಸ್ಯೆಯ ಮೂಲ ಕಾರಣ ಏನು ?

ಮುರುಘೇಶ್ ವಿ. ಕರ್ಕಿಕಟ್ಟಿ

ಕರ್ನಾಟಕದಲ್ಲಿ ಭೂಮಿ ಹಕ್ಕಿಗಾಗಿ ಹೋರಾಟ ನಡೆಯುತ್ತಿರುವ ಸಂದರ್ಭದಲ್ಲಿ ನೆರೆಯ ರಾಜ್ಯ ಆಂಧ್ರ ಪ್ರದೇಶದ ಶ್ರೀಕಾಕುಲಂ ಜಿಲ್ಲೆಯ ಲಕ್ಷ್ಮೀಪೆಡ ಎಂಬ ಗ್ರಾಮದ ಭೂಮಿ ವಿವಾದದಲ್ಲಿ ಜೂನ್ 12, 2012 ರಂದು ಐದು ಜನ ದಲಿತ



ಯುವಕರು ದೌರ್ಜನ್ಯಕ್ಕೀಡಾಗಿ ಹತರಾಗಿದ್ದಾರೆ. 30 ಜನರು ಗಾಯಗೊಂಡಿದ್ದಾರೆ. ಅವರಲ್ಲಿ 6 ಜನರ ಸ್ಥಿತಿ ಚಿಂತಾಜನಕವಾಗಿದೆ.

ಆಂಧ್ರ ಸರ್ಕಾರದ ಮದ್ದುವಲಾಸ ಜಲಾಶಯ ಯೋಜನೆಗೆಂದು ಹತ್ತು ವರ್ಷಗಳ ಹಿಂದೆ ವಶಕ್ಕೆ ತೆಗೆದುಕೊಂಡಿದ್ದ ಗ್ರಾಮದ ಭೂಮಿಯಲ್ಲಿ 250 ಎಕರೆ ಭೂಮಿ ಯೋಜನೆಗೆ ಬಳಕೆಯಾಗದೇ ಉಳಿದಿತ್ತು. ಈ 250 ಎಕರೆ ಜಮೀನಿನಲ್ಲಿ 60 ಎಕರೆ ಭೂಮಿಯನ್ನು ದಲಿತರೂ ಉಳಿದ ಜಮೀನನ್ನು ಹಿಂದುಳಿದ ಸಮುದಾಯಕ್ಕೆ ಸೇರಿದವರು ಉಳುಮೆ ಮಾಡುತ್ತಿದ್ದರು. ಆದರೆ ಎರಡು ಸಮುದಾಯಗಳ ನಡುವೆ ನಿರಂತರವಾಗಿ ಈ ವಿಷಯವಾಗಿ ಮನಸ್ತಾಪಗಳಿದ್ದವು. ಎಲ್ಲ ಜಮೀನು ನಮಗೆ ಸೇರಬೇಕು ಎಂದು ಹಿಂದುಳಿದ ಸಮುದಾಯದ ಜನರು ಬಯಸಿದ್ದರು. ಹಾಗೂ ದಲಿತರ ಆ 60 ಎಕರೆ ಭೂಮಿ ಕಿತ್ತುಕೊಳ್ಳಲು ಯತ್ನಿಸುತ್ತಿದ್ದರು. ಸರ್ಕಾರ ಈ ಪ್ರಶ್ನೆಯನ್ನು ಸಕಾಲದಲ್ಲಿ ಇತ್ಯರ್ಥ ಪಡಿಸಲು ಅಗತ್ಯವಾದ ಮುತುವರ್ಜಿ ವಹಿಸಲಿಲ್ಲ.

ಸುಮಾರು 3 ತಿಂಗಳ ಹಿಂದೆ ಹೆಚ್ಚುವರಿ ಸಹಾಯಕ ಜಿಲ್ಲಾಧಿಕಾರಿಗಳು ಗ್ರಾಮಕ್ಕೆ ಆಗಮಿಸಿ ಎರಡು ಸಮುದಾಯದ ಜನರ ನಡುವೆ ಮಾತನಾಡಿದ್ದರು. ಮಾತುಕತೆ ವಿಫಲವಾಗಿ ಕೊನೆಗೆ ಈ ಭೂಮಿಯಲ್ಲಿ ಯಾರೂ ಯಾವುದೇ ಕೃಷಿ ಚಟುವಟಿಕೆ ನಡೆಸಬಾರದೆಂದು ನಿಷೇಧ ಹೇರಲಾಗಿತ್ತು. ಹಾಗೂ ಅಹಿತಕರ ಘಟನೆ ನಡೆಯಬಾರದು ಎಂದು ಪೋಲೀಸ್ ಪಡೆಯನ್ನು ಕಾವಲಿಗಾಗಿ ನಿಯೋಜಿಸಲಾಗಿತ್ತು.

ಈ ನಡುವೆ ರಾಜ್ಯದಲ್ಲಿ ಮಧ್ಯಂತರ ಉಪ ಚುನಾವಣೆಗಳ ಸಲುವಾಗಿ ಪೋಲೀಸ್ ಪಡೆಯನ್ನು ಹಿಂದೆ ಕರೆಸಿಕೊಂಡು ಚುನಾವಣೆಗೆ ನಿಯೋಜಿಸಲಾಯಿತು. ಈ



ಸಂದರ್ಭವನ್ನು ಗಮನಿಸಿದ ದುಷ್ಕರ್ಮಿಗಳು ಹೊಂಚುಹಾಕಿ ವ್ಯವಸ್ಥಿತ ರೀತಿಯಲ್ಲಿ ದಲಿತ ಕುಟುಂಬಗಳ ಮೇಲೆ ದಾಳಿ ನಡೆಸಿದ್ದಾರೆ. ಸ್ಥಳದಲ್ಲಿಯೇ ನಾಲ್ಕು ಜನರು ಪ್ರಾಣ ಬಿಟ್ಟಿದಾರೆ. ಒಬ್ಬರು ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮರಣ ಹೊಂದಿದ್ದಾರೆ. ಸುಮಾರು 30 ಜನರ ಮೇಲೆ ಮಾರಣಾಂತಿಕ ದಾಳಿ ನಡೆದಿದೆ.

ಕುಟುಂಬದ ಸದಸ್ಯರ ಕಣ್ಣೆದುರಲ್ಲೇ ಈ ಕೃತ್ಯ ನಡೆದರೂ ಅವರು ಅಸಹಾಯಕರಾಗಿ ನೋಡಬೇಕಾಯಿತು. ಮಹಿಳೆಯರು ಮಕ್ಕಳೆನ್ನದೆ ಎಲ್ಲರ ಮೇಲೆ ದಾಳಿ ಮಾಡಿದ್ದಾರೆ. ಕೊಡಲಿ, ಕತ್ತಿ, ಬೊಂಬು, ಬಡಿಗೆ ಮುಂತಾದ ಮಾರಕಾಸ್ತ್ರಗಳನ್ನು ಬಳಸಿ ಹಲ್ಲೆ ಮಾಡಲಾಗಿದೆ.

ಜೂನ್ 13 ರಂದು ಈ ಹೀನಾಯ ಕಗ್ಗೊಲೆಯನ್ನು ಖಂಡಿಸಿ ಹೈದರಾಬಾದ್‌ನಲ್ಲಿ ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರಾದ ಬಿ.ವಿ.ರಾಘವುಲು ಮತ್ತು ಇತರ ರಾಜ್ಯ ಮುಖಂಡರ ನೇತೃತ್ವದಲ್ಲಿ ಸಿಪಿಐ(ಎಂ) ಪಕ್ಷ ಮತ್ತು ಜಾತಿ ತಾರತಮ್ಯ ವಿರೋಧಿ ಹೋರಾಟ ಸಮಿತಿ-ಕೆ.ವಿ.ಪಿ.ಎಸ್. ಸಂಘಟನೆಗಳು ತೀವ್ರ ಪ್ರತಿಭಟನೆ ನಡೆಸಿ ಸೂಕ್ತ ಕ್ರಮಕ್ಕಾಗಿ ಆಗ್ರಹಿಸಿದವು. ಕ್ರಿಮಿನಲ್‌ಗಳಿಗೆ ಶಿಕ್ಷೆ, ಮೃತರ ಕುಟುಂಬಕ್ಕೆ ತಲಾ 10 ಲಕ್ಷ ರೂ. ಪರಿಹಾರ, ಗಾಯಗೊಂಡವರಿಗೆ 5 ಲಕ್ಷ ಪರಿಹಾರಕ್ಕಾಗಿ ಹಾಗೂ ಭೂಮಿ ವಿತರಣೆಗಾಗಿ ಆಗ್ರಹಿಸಲಾಯಿತು. ಆದರೆ ಮೊದಲು ಸರ್ಕಾರದ ಪರವಾಗಿ, ಹತ್ಯೆಯಾದ ದಲಿತರ ಕುಟುಂಬಗಳಿಗೆ ತಲಾ 2 ಲಕ್ಷ ರೂಗಳ ಪರಿಹಾರವನ್ನು ಘೋಷಿಸಲಾಯಿತು. ಪ್ರತಿಭಟನಾಕಾರರು ಅದನ್ನು ಒಪ್ಪದ್ದರಿಂದ ನಂತರ ಪರಿಹಾರವನ್ನು 5 ಲಕ್ಷಕ್ಕೆ ಏರಿಸಲಾಯಿತು.

ಹಗರಣ ಮುಚ್ಚಿಕೊಳ್ಳುವ ....

ಪುಟ 3 ರಿಂದ

ಎಲ್ಲೂ ಹಾಗಾಗಲಿಲ್ಲ. ಸೈಟು ಹಿಂತಿರುಗಿಸಿದಾಕ್ಷಣ ಆರೋಪಮುಕ್ತರಾಗಲು ಹೇಗೆ ಸಾಧ್ಯ? ಇದೇ ತೋರಿಸುವುದಿಲ್ಲವೇ ನಡೆದ ಹಗರಣ ನಿಜವೆಂದು.

ಭಟ್ಟಂಗಿಗಳು

ಇಂದು ಇಡೀ ಬಿಜೆಪಿಯೇ ನೈತಿಕವಾಗಿ, ರಾಜಕೀಯವಾಗಿ ಸರ್ವ ಅಧಃಪತನದ ಕೊಚ್ಚೆಯಲ್ಲಿದೆ. ಇದಕ್ಕೆಲ್ಲಾ ಗೊಬ್ಬರ, ನೀರೆರೆಯುವ 'ಸಂಘ'ದ ಫ್ಯಾಸಿಸ್ಟ್ ಮಾದರಿ ಸಿದ್ಧಾಂತ ಒಪ್ಪಿಕೊಂಡು ಅದರ ಜಾರಿಗೆ ತೊಡಗಿರುವಾಗಲೂ ಅಲ್ಲಿ ಪ್ರಾಮಾಣಿಕರನ್ನು ಹುಡುಕುವುದೇ ಹಾಸ್ಯಾಸ್ಪದವಲ್ಲವೇ? ಇಂತಹ ಗೊಂದಲಗಳು ಕೆಲವು ಪ್ರಗತಿಪರರಲ್ಲಿಯೂ ಇವೆ. ಇನ್ನು ಮಾಧ್ಯಮಗಳೋ ಈ ಪ್ರಕರಣದಲ್ಲಿ ಭಟ್ಟಂಗಿಗಳಂತೆ ತುತ್ತೂರಿ ಊದಿ ತಮ್ಮ ದಿವಾಳಿಯನ್ನು ತೆರೆದಿಟ್ಟವು. ನಿಜಕ್ಕೂ ಅವು ಆರೋಪಿಯನ್ನು ಸಮರ್ಥಿಸುವುದರ ಬದಲಾಗಿ ಆರೋಪಗಳನ್ನು ವಿಶದವಾಗಿ ತೆರೆದಿಡಬೇಕಿತ್ತು. ಆದರೆ ಸತ್ಯ ಹೊರಗಿಟ್ಟಾತನನ್ನು ಖಳ ನಾಯಕನಂತೆ ಚಿತ್ರಿಸಿದ್ದು ದುಷ್ಪತನವೇ. ಈ ಪರಿ ಪ್ರಜಾಪ್ರಭುತ್ವವನ್ನು ಇನ್ನಷ್ಟು ದುರ್ಬಲಗೊಳಿಸುವುದರಲ್ಲಿ ಆಳುವವರ ಜೊತೆ ಮಾಧ್ಯಮಗಳೂ ಕೈಜೋಡಿಸಿದ್ದು ದುರಂತಗಳ ಸರಮಾಲೆಗೆ ಮತ್ತೊಂದು ಸೇರ್ಪಡೆ.

ಬೆಲೆ ಏರಿಕೆ ವಿರೋಧಿಸುವ ಹೈ ಡ್ರಾಮ

ಬೆಲೆ ಏರಿಕೆಯ ವಿರುದ್ಧ ರಾಜ್ಯಾದ್ಯಂತ ಪ್ರತಿಭಟನೆ ಮಾಡಿದ ಬಿಜೆಪಿ ಭಂಡತನಕ್ಕೆ ಭಲೇ ಎಂದು ಹೇಳಬೇಕಾಗಿದೆ. ಸದಾ ಅಧಿಕಾರ ಉಳಿಸಿಕೊಳ್ಳುವ ಕಸರತ್ತಿನಲ್ಲಿರುವ ಅದು ಆಗೀಗ ಇಂತಹ ಜನರ ಪ್ರಶ್ನೆಯ ನಾಟಕವಾಡುತ್ತದೆ. ನಿಜ, ಬೆಲೆ ಏರಿಕೆಗೆ ಮತ್ತು ಇಳಿಸದಿರುವುದಕ್ಕೆ ಕೇಂದ್ರದ ಕಾಂಗ್ರೆಸ್‌ನ ಮೇಲೆ ಪ್ರಧಾನ ಹೊಣೆಯಿದೆ. ಆದರೆ ಇದಕ್ಕೆ ಕಾರಣವಾಗಿರುವ ಪ್ರಮುಖ ನೀತಿಗಳಿಗೆ ಬಿಜೆಪಿಯ ಎನ್.ಡಿ.ಎ. ಪಾಲೂ ಸಹ ಗುರುತರವಾಗಿದೆ.

ಈ ಬಾರಿಯೂ ಅದು ಪೆಟ್ರೋಲ್ ದರ ಹೆಚ್ಚಳದ ಬಗ್ಗೆ ಭಾರಿ ವಿರೋಧವಿರುವುದಾಗಿ ಹೇಳಿತು . ಭಾರತ ಬಂದ್‌ಗೂ ಕರೆ ನೀಡಿತು. ನಂತರದಲ್ಲಿಯೂ ರಾಜ್ಯದಲ್ಲಿ ಕಾರ್ಯಕ್ರಮವನ್ನೂ ಹಾಕಿತು. ಈ ನಡುವೆ ಬೆಲೆ ಏರಿಕೆಯ ಬಾಧೆಯನ್ನು ಕೊಂಚವಾದರೂ ಕಡಿಮೆಗೊಳಿಸುವ ನಿಟ್ಟಿನಲ್ಲಿ ರಾಜ್ಯ ಸರಕಾರ ತನ್ನ ಪಾಲಿನ ತೆರಿಗೆ ಹೆಚ್ಚಳ ಆದಾಯದಲ್ಲಿ ಕಡಿತ ಮಾಡುವುದು ಅತೀ ಅಗತ್ಯವೆಂದು ಒತ್ತಾಯ ಬಂತು. ಅದಕ್ಕೆ ಸಿದ್ಧವಿರುವುದಾಗಿ ಹೇಳಿ ತಿಂಗಳುಗಳೇ ಕಳೆದರೂ ಇನ್ನೂ ಕನಿಷ್ಟ ಪ್ರಮಾಣವನ್ನಾದರೂ ಇಳಿಸಲಿಲ್ಲ. ಆರ್ಥಿಕ ಇಲಾಖೆ ಜೊತೆ ಚರ್ಚಿಸುವುದಾಗಿ ಹೇಳಿದ್ದ ಮುಖ್ಯಮಂತ್ರಿ ಮರೆತೇ ಹೋಗಿದ್ದಾರೆ. ಹಾಗೆ ನೋಡಿದರೆ ರಾಜ್ಯ ಸರಕಾರ ಇದರಲ್ಲಿ ಹೊಸದಾಗಿ ಕಳೆದುಕೊಳ್ಳುವುದೇನೂ ಇಲ್ಲವೆಂಬುದು ಗೊತ್ತಿರುವ ಹಳೇ ವಿಚಾರ. ಆದಾಗ್ಯೂ ಇಳಿಸದಿರುವುದು ಜನರ ಹಣ ಲೂಟಿಗೆ ಅದಕ್ಕಿರುವ ಜನವಿರೋಧಿ ನೀತಿಗಳು ಮತ್ತು ಅವುಗಳ ಜಾರಿಯ ಬಗೆಗಿನ ಉತ್ಸಾಹವೇ ಕಾರಣ.

ಇದು ಒಂದು ಕಡೆ. ಈಗಾಗಲೇ ಜನತೆ ಬೆಲೆ ಏರಿಕೆಯಿಂದ ತತ್ತರಿಸುತ್ತಿರುವಾಗ, ರಾಜ್ಯದ ಜನತೆ ಮಳೆ ಅಭಾವದಿಂದ ಕಂಗಾಲಾಗಿ ತೀವ್ರ ಮುಂದುವರಿದ ಬರಗಾಲದಲ್ಲಿ ಸಿಲುಕಿರುವಾಗ ಆಹಾರ ವಸ್ತುಗಳು ಅಗ್ಗದ ದರದಲ್ಲಿ ಸುಲಭವಾಗಿ ಸಿಗುವಂತೆ ಜೀವ-ಜೀವನ ಉಳಿಸುವ ಏನಾದರೂ ಕ್ರಮ ವಹಿಸಿತೇ? ಸಾರ್ವತ್ರಿಕ ಪಡಿತರ ರೇಷನ್ ನೀಡಿತೇ? ಇಲ್ಲ ಈ ಬಗ್ಗೆ ಕನಿಷ್ಟ ಕಾಳಜಿಯನ್ನೂ ತೋರಲಿಲ್ಲ, ಮಾತ್ರವಲ್ಲ ರೇಷನ್ ಸಿಗದಂತಹ ಪರಿಸ್ಥಿತಿ ನಿರ್ಮಿಸಿದೆ. ಬಿಜೆಪಿ ಆಡಳಿತದಲ್ಲಿ ಕಾಳ ಸಂತೆಕೋರರು, ಭ್ರಷ್ಟ ಹೆಗ್ಗಣಗಳು ನಿರಾತಂಕವಾಗಿ ತಮ್ಮದೇ ಹುಕುಂ ಚಲಾಯಿಸುತ್ತವೆ, ದೋಚುತ್ತವೆ.

ಇಷ್ಟಿರುವಾಗ ಬೆಲೆ ಏರಿಕೆಯ ವಿರುದ್ಧ ಬಿ.ಜೆ.ಪಿ ಹೋರಾಡುವುದು ನಾಟಕವಲ್ಲದೇ ಮತ್ತೇನು?

ಸತತ ಮೂರನೇ ವರ್ಷಕ್ಕೆ ಮುಂದುವರೆದ ಭೀಕರ ಬರಗಾಲ

ಕೃಷಿ ಮತ್ತು ಜನರನ್ನು ಕೊಲ್ಲುವ ಸರ್ಕಾರದ ನೀತಿ–ಸಿಪಿಐ(ಎಂ) ಖಂಡನೆ

ಜೂನ್ 28, 2012 ರಂದು ಬೆಂಗಳೂರಿನ ಮಾಧ್ಯಮ ಗೋಷ್ಠಿಯಲ್ಲಿ ಬಿಡುಗಡೆ ಮಾಡಲಾದ ಹೇಳಿಕೆ

ಈ ಬಾರಿಯು ಇಲ್ಲಿಯ ವರೆಗೆ ಸುರಿಯ ಬೇಕಾದಷ್ಟು ಮಳೆಯು ಬಾರದೇ ಹೋದದ್ದರಿಂದ ರಾಜ್ಯದ ಗ್ರಾಮೀಣ ಜನತೆ ಹಾಗೂ ಕೃಷಿಕರು ತೀವ್ರವಾಗಿ ಕಂಗಾಲಾಗಿದ್ದಾರೆ. ಚಿಂತಿತರಾದ ಗ್ರಾಮೀಣರು ವರುಣ ದೇವನನ್ನು ಒಲಿಸಿಕೊಳ್ಳುವ ಕಪ್ಪೆ, ಕತ್ತೆ ಮದುವೆ, ಮೆರವಣಿಗೆ ಮುಂತಾದ ಪೂಜಾ ಕೈಂಕರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.


ಹೈದ್ರಾಬಾದ್ ಕರ್ನಾಟದ 6 ಜಿಲ್ಲೆಗಳಲ್ಲಿ, ಕಳೆದ 6 ತಿಂಗಳಲ್ಲಿ ಒಟ್ಟಾರೆ ವಾಡಿಕೆಯಂತೆ ಸುರಿಯ ಬೇಕಾದ ಮಳೆಯ ಪ್ರಮಾಣ 618.12 ಮಿ.ಮಿ. ಇದ್ದರೆ ಇಲ್ಲಿಯವರೆಗೆ ಸುರಿದಿರುವುದು ಕೇವಲ 273.10 ಮಿ.ಮಿ. ಮಾತ್ರವೇ ಆಗಿದೆ. ಅಂದರೆ ವಾಡಿಕೆಯ ಅರ್ಧಕ್ಕಿಂತ ಕಡಿಮೆ ಶೇ. 43 ಮಾತ್ರವೇ ಆಗಿದೆ. ಕೊಪ್ಪಳ ಜಿಲ್ಲೆಯಲ್ಲಿ ಅತಿ ಕಡಿಮೆ 10.02 ಮಿ.ಮಿ. ಮಾತ್ರವೇ ಆಗಿದೆ. ಕಳೆದ ವರ್ಷ ಈ ಭಾಗದಲ್ಲಿ ವಾಡಿಕೆಯ ಶೇ. 80 ರಷ್ಟು ಸುರಿದಿತ್ತು. ದಕ್ಷಿಣ ಕರ್ನಾಟಕ 9 ಜಿಲ್ಲೆಗಳಲ್ಲಿ ವಾಡಿಕೆಯಂತೆ ಸರಾಸರಿ 1598.03 ಮಿ.ಮಿ.ವಾಡಿಕೆಯ ಮಳೆಯಾಗಬೇಕಾದ್ದಲ್ಲಿ ಶೇ. 59ರಷ್ಟು ಮಾತ್ರವೇ ಅಂದರೆ 951.02 ಮಿ.ಮಿ. ಸುರಿದಿದೆ.

ಕರಾವಳಿ, ಮಲೆನಾಡು ಪ್ರದೇಶಗಳಲ್ಲಿ ಎಂದಿನಂತೆ ಈ ದಿನಗಳಲ್ಲಿ ಸುರಿಯ ಬೇಕಾದಷ್ಟು ಮಳೆ ಸುರಿದಿಲ್ಲ. ಆದ್ದರಿಂದಾಗಿ ಜಲಾಶಯಗಳಲ್ಲಿ ಸಂಗ್ರಹಗೊಳ್ಳಬೇಕಾದ ನೀರು ಸಂಗ್ರಹವಾಗುತ್ತಿಲ್ಲ. ಇದು ಬಯಲು ಸೀಮೆಯ ನೀರಾವರಿ ಪ್ರದೇಶವನ್ನು, ಕುಡಿಯುವ ನೀರಿನ ಸಮಸ್ಯೆಯನ್ನು ಗಂಭೀರತೆಗೆ ತೆಗೆದುಕೊಂಡು ಹೋಗುವ ಮುನ್ಸೂಚನೆ ನೀಡುತ್ತದೆ.

ಕಳೆದ 6 ತಿಂಗಳಲ್ಲಿ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ವಾಡಿಕೆಯ ಶೇ. 43ರಷ್ಟು ಮಾತ್ರವೇ ಮಳೆ ಸುರಿದಿದೆ. ಈ ಪ್ರದೇಶದ ಒಟ್ಟಾರೆ ವಾಡಿಕೆಯ ಮಳೆ ಸರಾಸರಿ 1990 ಮಿ.ಮಿ ಆಗಿದ್ದು, ಇದುವರೆಗೂ ಕೇವಲ 875 ಮಿ.ಮಿ. ಮಾತ್ರವೇ ಮಳೆ ಆಗಿರುತ್ತದೆ. ಅತಿ ಕಡಿಮೆ ಉತ್ತರ ಕನ್ನಡ ಜಿಲ್ಲೆ(ವಾಡಿಕೆ ಮಳೆ 698 ಮಿ.ಮಿ.)ಯಲ್ಲಿ 229 ಮಿ.ಮಿ. ಮಳೆಯಾಗಿದೆ. ಅದೇ ರೀತಿ ಮಲೆನಾಡಿನ ಮೂರು ಪ್ರಮುಖ ಜಿಲ್ಲೆಗಳಾದ ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಒಟ್ಟಾರೆ ವಾಡಿಕೆಯ ಮಳೆ 3773.09 ಮಿ.ಮಿ ಆಗಿದ್ದು, ಇದುವರೆಗೆ ಇಲ್ಲಿ ಕೇವಲ 837.16 ಮಿ.ಮಿ. ಮಾತ್ರವೇ ಮಳೆಯಾಗಿದೆ. ಅಂದರೆ ವಾಡಿಕೆಯ ಶೇ. 22 ಮಾತ್ರವೇ ಆಗಿದೆ. ಅತಿ ಕಡಿಮೆ ಚಿಕ್ಕಮಗಳೂರು 400 ಮಿ.ಮಿ. ಆಗಿರುತ್ತದೆ.

ಪರಿಣಾಮವಾಗಿ ತುಂಗಭದ್ರಾ ಜಲಾಶಯದಲ್ಲಿ ಕಳೆದ ಬಾರಿ ಈ ದಿನಗಳಲ್ಲಿ 9.55 ಟಿ.ಎಂ.ಸಿ. ನೀರು ಸಂಗ್ರಹವಾಗಿದ್ದರೆ, ಈಗ ಕೇವಲ 4.5 ಟಿ.ಎಂ.ಸಿ. ಮಾತ್ರವೇ ಸಂಗ್ರಹವಾಗಿದೆ ಮತ್ತು ಕೆ.ಆರ್.ಎಸ್.ನಲ್ಲಿ ಕಳೆದ ವರ್ಷ 94.62 ಅಡಿ ನೀರು ಸಂಗ್ರಹವಾಗಿತ್ತು. ಆದರೆ ಈ ಬಾರಿ 72.30 ಅಡಿ ಮಾತ್ರವೇ ಸಂಗ್ರಹವಾಗಿದೆ. ಅದೇ ರೀತಿ ಅಲಮಟ್ಟಿ ಜಲಾಶಯದಲ್ಲಿ ಕಳೆದ ಬಾರಿ 510.11 ಅಡಿ ನೀರು ಇದ್ದ ಜಾಗದಲ್ಲಿ ಈಗ 506.2 ಮಾತ್ರವೇ ಸಂಗ್ರಹವಾಗಿದೆ. ಇದೇ ಪರಿಸ್ಥಿತಿ ಉಳಿದ ಅಣೆಕಟ್ಟೆಗಳಲ್ಲಿಯೂ ಇದೆ ಎಂಬ ವರದಿ ಇದೆ.

ಈಗಾಗಲೇ ಕತ್ತಲೆ ರಾಜ್ಯವೆಂದು 'ಖ್ಯಾತಿ'ಗೆ ಒಳಗಾದ ವಿದ್ಯುತ್ ಅಭಾವದ ಕರ್ನಾಟಕ ರಾಜ್ಯ ಮತ್ತಷ್ಟು ಕತ್ತಲಲ್ಲಿ ಕೊಳೆಯುವಂತೆ ಇಲ್ಲವೇ ದುಬಾರಿ ಬೆಲೆಯ ವಿದ್ಯುತ್ ಖರೀದಿಗೆ ಜನರನ್ನು ಈಡು ಮಾಡುವಂತಾ ಪರಿಸ್ಥಿತಿಗೆ ಮಳೆಯ ಕೊರತೆ ತಳ್ಳಲಿದೆ. ಕೈಗಾರಿಕೆಗಳ ಮೇಲೂ ಆದರ ಉತ್ಪಾದನೆಯ ಮೇಲೂ ಗಂಭೀರವಾದ



ಪರಿಣಾಮಗಳನ್ನು ಬೀರುವ ಸಾಧ್ಯತೆಗಳನ್ನು ಅಲ್ಲಗಳೆಯಲಾಗದು.

ಹವಾಮಾನ ವೈಪರೀತ್ಯದ ಪ್ರಾಕೃತಿಕ ವಿಕೋಪ ಬಹಳ ಆತಂಕಕಾರಿಯಾಗಿದೆ. ಈ ಬರದ ಮುಂದುವರಿಕೆ ಅಪೌಷ್ಠಿಕತೆಯಿಂದ, ಹಸಿವಿನಿಂದ ಬಳಲುವ ಜನತೆಯನ್ನ ಹಾಗೂ ಸಾಲಬಾಧಿತ ರೈತಾಪಿ ಜನತೆಯನ್ನ ಹಸಿವಿನ ಸಾವುಗಳಿಗೆ ಹಾಗೂ ಆತ್ಮಹತ್ಯೆಗಳಿಗೆ ತಳ್ಳುವ ಮತ್ತೊಂದು ಗಧಾ ಪ್ರಹಾರವಾಗಿದೆ.

ನಗರಗಳಲ್ಲೂ ಜಾಗತಿಕ ಆರ್ಥಿಕ ಬಿಕ್ಕಟಿನ ಪರಿಣಾಮವಾಗಿ ಉದ್ಯೋಗ ಅವಕಾಶಗಳ ಕೊರತೆ ಇರುವುದರಿಂದ ಹಾಗೂ ಪಂಚಾಯಿತಿಗಳು ಉದ್ಯೋಗ ನೀಡುವಲ್ಲಿ ಬೇಕಾದಷ್ಟು ಕಾಳಜಿ ವಹಿಸದೆ ಇರುವುದರಿಂದ ತೀವ್ರ ಬಾಧಿತರಾದ ಜನತೆ ಕೊಟ್ಟಷ್ಟು ಕೊಡಿರೆಂದು ದೀನವಾಗಿ ಇರುವಲ್ಲಿ ಅತ್ಯಂತ ಕಡಿಮೆ ಕೂಲಿಗೆ ದುಡಿಯಲು ಮುಂದಾಗುತ್ತಿದೆ.

ಉದಾಹರಣೆಗೆ :– ಕೊಪ್ಪಳದ ಕೂಲಿಕಾರರ ಪರಿಸ್ಥಿತಿ ಪತ್ರಿಕೆಗಳಲ್ಲಿ ಬಂದಿದೆ. ಇದೆ ರೀತಿ ಬಳ್ಳಾರಿಯ ಕೂಲಿಕಾರರು ಉದ್ಯೋಗ ಖಾತರಿಯಲ್ಲಿ 150 ರೂಪಾಯಿಗಳ ದಿನಗೂಲಿ ನಿಗದಿಯಾಗಿದ್ದರೂ, ಕೇವಲ 54 ರೂಪಾಯಿಗಳ ದಿನಗೂಲಿಗೆ ಜಲಾನಯನ ಇಲಾಖೆಯ ಕಾಮಗಾರಿಗಳಲ್ಲಿ ತೊಡಗಿರುತ್ತಾರೆ.

ಕೊಲ್ಲುವ ರಾಜಕೀಯ : ಕಳೆದ ವರ್ಷವೇ, ಗುಳೆ ಅಥವಾ ದುಡಿಮೆಗಾಗಿ ನಗರಗಳಿಗೆ ವಲಸೆ ಹೋದ ಬಡವರಿನ್ನೂ ಗ್ರಾಮಗಳಿಗೆ ತಲುಪಿಲ್ಲ. ಗ್ರಾಮಗಳಲ್ಲಿ ಇರುವ ವೃದ್ಧರಿಗೆ, ವಲಸೆ ಹೋದ ಇವರಿಗೆ ಈ ವರ್ಷವು ತಾವು ಪರಸ್ಪರರನ್ನು ಸೇರಿ ವಾಸಿಸಬಹುದೆಂಬ ಭರವಸೆ ಇಲ್ಲವಾಗಿದೆ. ನೀರಾವರಿ ಪ್ರದೇಶದವರು ಸೇರಿ ಇನ್ನಷ್ಟು ಜನರು ವಲಸೆಗೆ ಸಿದ್ಧರಾಗುತ್ತಿದ್ದಾರೆ.

ಬರದ ವಿರುದ್ಧ ನಡೆಯುತ್ತಿರುವ ಹೋರಾಟಗಳು, ವಲಸೆಗೆ ತೆರಳಿದವರ ಅಪಘಾತಗಳು, ಮಾಧ್ಯಮಗಳ ವರದಿಗಳು ಮುಂತಾಗಿ ಬಂದಾಗ ಮಾತ್ರವೇ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಈ ತೀವ್ರ ಬರದ ಬಗ್ಗೆ ಪತ್ರಿಕೆಗಳಲ್ಲಿ ಕಳಕಳಿಯನ್ನು ತೋರುತ್ತವೆ. ಆದರೆ ಜನತೆಯನ್ನು ವಲಸೆಯಿಂದ ತಡೆಯಲು ಉದ್ಯೋಗ ಖಾತ್ರಿ ಯೋಜನೆಯನ್ನು ಇದಕ್ಕಾಗಿ ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ತಯಾರಿಲ್ಲದಿರುವುದು ತೀವ್ರ ಖಂಡನೀಯವಾಗಿದೆ.

ಬಿಜೆಪಿ ಪಕ್ಷವಂತೂ ಕಳೆದ 3 ವರ್ಷಗಳಿಂದ ಬರವನ್ನು ಎದುರಿಸಲು ತನ್ನೊಳಗಿನ ಅನೈಕ್ಯತೆಯ ಸಮಸ್ಯೆಯನ್ನೇ ಮುಂದೆ ಮಾಡಿ ನಾಗರೀಕರ ಗಮನವನ್ನು ಬೇರೆಡೆ ಸೆಳೆದು ಬರವನ್ನು ಮುಚ್ಚಿಹಾಕುತ್ತಿದೆ. ಬಿಜೆಪಿಯ ಹಾಗೂ ಆರ್.ಎಸ್.ಎಸ್.ನ ಕೇಂದ್ರದ ನಾಯಕತ್ವವಾಗಲಿ, (ಹಿಂದೂ ಜನಗಳ ಬಗ್ಗೆ ಬಾರೀ ಮಾತನಾಡುವ ಇವರು) ಜನಗಳು ತೀವ್ರ ಸಂಕಷ್ಟದಲ್ಲಿರುವಾಗ ತಮ್ಮ ಸರ್ಕಾರಕ್ಕೆ ಅಥವಾ ರಾಜ್ಯ ಘಟಕಗಳಿಗೆ ಬರ ನಿವಾರಣೆಗಾಗಿ ಪರಿಣಾಮಕಾರಿ ಕೆಲಸ ಮಾಡಲು ಅಥವಾ ತನ್ನ ಶಕ್ತಿಯನ್ನು ಬಳಸಿ ಹೋರಾಡಲು ಏನೊಂದು ಹೇಳುತ್ತಿಲ್ಲ.

ಅದೇ ರೀತಿ ಕಾಂಗ್ರೆಸ್ ಹೈಕಮಾಂಡ್ ಆಗಲಿ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರವಾಗಲಿ ಬರಕ್ಕೆ ಮತ್ತಷ್ಟು ಸೂಕ್ತ ಪರಿಹಾರ ನೀಡಿ ತನ್ನದೇ ನರೇಗಾ ಕಾರ್ಯಕ್ರಮವನ್ನು ಬರಪೀಡಿತ ಜನಗಳಿಗೆ ಒದಗಿಸಲು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಮಾತ್ರವಲ್ಲ ತನ್ನ ರಾಜ್ಯ ಘಟಕಕ್ಕೆ ಈ ಕುರಿತು ಹೋರಾಡಲು ಹೇಳುತ್ತಿಲ್ಲ. ಈಗ ಇದು ಕೂಡ ಅಧಿಕಾರದ ಅನೈಕ್ಯತೆಯ ರಾಜಕೀಯದಲ್ಲಿ ತೊಡಗಿ ಜನರ ಗಮನ ಸೆಳೆಯುತ್ತಿದೆ.

ಇದೆಲ್ಲವೂ ಆಕಸ್ಮಿಕವಾಗಿ ಏನೂ ನಡೆಯುತ್ತಿಲ್ಲ, ಬದಲಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮತ್ತು ಬಿಜೆಪಿ–ಕಾಂಗ್ರೆಸ್‌ಗಳು ಅನುಸರಿಸುತ್ತಿರುವ ನವ ಉದಾರೀಕರಣ ನೀತಿಯ ಭಾಗವಾಗಿವೆ. ಬಹುರಾಷ್ಟ್ರೀಯ ಕಂಪನಿಗಳಿಗೆ ವ್ಯಾಪಕವಾದ ಭೂಮಿ ಹಾಗೂ ಕೃಷಿಯನ್ನು ಒದಗಿಸುವ ಕಾರ್ಪೋರೇಟ್ ಕೃಷಿ, ಗುತ್ತಿಗೆ ಕೃಷಿ – ಮುಂಗಡ ವ್ಯಾಪಾರದ ಕೃಷಿಯ ಜಾರಿಗಾಗಿ ತುಂಡು ಭೂಮಿ ಕೃಷಿ ಕೊನೆಗಾಣಿಸಲು ನಡೆಸುವ ಯೋಜನೆಯ ಭಾಗವಾಗಿವೆ. ಬಿಜೆಪಿ ರಾಜ್ಯ ಸರ್ಕಾರದ 'ದೂರದೃಷ್ಟಿ– 2020'ರಲ್ಲಿ ತಿಳಿಸಿದಂತೆ ಕೃಷಿ ರಂಗದ ಮೇಲೆ ಅವಲಂಬಿತರಾದ ಶೇ.61 ಜನರನ್ನು ಶೇ.35ಕ್ಕೆ ಕಡಿತಗೊಳಿಸುವ ಅದರ ಹುನ್ನಾರದ ಭಾಗವಾಗಿದೆ. ಇದರಿಂದಾಗಿಯೇ ಬಿಜೆಪಿ–ಕಾಂಗ್ರೆಸ್ ಪಕ್ಷಗಳು ಮತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜನತೆ ತಾವಾಗಿಯೇ ಗ್ರಾಮ ಬಿಟ್ಟು ತೆರಳಲಿ ಎಂಬ ಧೋರಣೆ ತಳೆದು ಉದ್ದೇಶ ಪೂರ್ವಕವಾಗಿಯೇ ಇನ್ನಷ್ಟು ಕೃತಕವಾದ ಸಂಕಷ್ಟಗಳನ್ನು ಸೃಷ್ಟಿಸುತ್ತಿವೆ.

ಸಿಪಿಐ(ಎಂ) ಇಂತಹ ನಗ್ನ ಬಂಡವಾಳಗಾರರ ಪರವಾದ ಮತ್ತು ಬಡವರು ಮತ್ತು ಕೃಷಿಕರನ್ನು ಕೊಲ್ಲುವ ಕೊಲೆಗಡುಕ ರಾಜಕೀಯ ಹುನ್ನಾರವನ್ನು ಬಲವಾಗಿ ಖಂಡಿಸುತ್ತದೆ. ಇದೇ ಸಂದರ್ಭದಲ್ಲಿ ಭಾರೀ ಬಂಡವಾಳಗಾರರಿಗೆ ಭಕ್ಷಿಸು ನೀಡುವ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ ನಡೆಸುವಾಗ ಬಿಜೆಪಿಯಲ್ಲಿ ಈ ರೀತಿಯ ಕಿತ್ತಾಟ ಇರಲಿಲ್ಲ ಎಂಬುದನ್ನು ರಾಜ್ಯದ ಜನತೆ ಅರಿಯ ಬೇಕೆಂದು ಮನವಿ ಮಾಡಿದೆ. ಅಗ ಇಲ್ಲದ ರಾಜಕೀಯ ಮೇಲಾಟ ಬಡವರಿಗೆ ನೆರವಾಗಲು ಮಾತ್ರವೇ ಅಡ್ಡಿ ಮಾಡುತ್ತದೆ. ಇಂತಹ ಭೀಕರ ಬರದ ಸಂದರ್ಭದಲ್ಲಿ ಜನರನ್ನು ಮರೆತು ಉದಾರೀಕರಣದ ಲಾಭಕ್ಕಾಗಿ ಅಧಿಕಾರದ ಕಚ್ಚಾಟದಲ್ಲಿ ಮುಳುಗಿ ತಮ್ಮ ಪಕ್ಷ ಹಾಗೂ ಸರ್ಕಾರಗಳ ಹುನ್ನಾರದಲ್ಲಿ ತೊಡಗಿರುವ ಶಾಸಕರ ವರ್ತನೆಯನ್ನು ಸಿಪಿಐ(ಎಂ) ಖಂಡಿಸುತ್ತದೆ.

ರಾಜ್ಯದ ಜನತೆಯು, ಈ ಕೊಲೆಗಡುಕ ಮತ್ತು ಅಸಹ್ಯ ಹುಟ್ಟಿಸುವ ಅಧಿಕಾರಕ್ಕಾಗಿನ ಕಚ್ಚಾಟದ ರಾಜಕೀಯವನ್ನು ಅರ್ಥೈಸಿಕೊಂಡು ಬರಗಾಲ ಪರಿಹಾರಕ್ಕಾಗಿ ಮುಂದಿನ ದಿನಗಳಲ್ಲಿ ಸಿಪಿಐ(ಎಂ) ನಡೆಸುವ ಹೋರಾಟದಲ್ಲಿ ಭಾಗವಹಿಸಬೇಕೆಂದು ಕರೆ ನೀಡುತ್ತದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು :

- ಕೂಡಲೇ ಬಡವರ ವಿರೋಧಿ ಹಾಗೂ

ಪುಟ 15 ಕ್ಕೆ

ಮೂಡಬಿದರೆಯಲ್ಲಿ ಮಾರ್ಬಲ್ ಅಂಗಡಿ ವಿರುದ್ಧ ಪ್ರತಿಭಟನೆ

ಒಂದು ಟನ್ ಮಾರ್ಬಲನ್ನು ವಾಹನದಿಂದ ಕೆಳಗಿಳಿಸಿದರೆ ಕೂಲಿಯೊಬ್ಬರಿಗೆ ಮೂಡಬಿದರೆ ಪದ್ಮಾವತಿ ಮಾರ್ಬಲ್ ಅಂಗಡಿ ಮಾಲಕ ಕೂಲಿಯಾಗಿ 100 ರೂಪಾಯಿ ನೀಡುತ್ತಿದ್ದರು. ಹಮಾಲಿ ಕಾರ್ಮಿಕರ ಸಂಘವು ಇದನ್ನು 200ಕ್ಕೆ ಹೆಚ್ಚಿಸಬೇಕೆಂದು ಕೂಲಿಕಾರ್ಮಿಕರ ಬೇಡಿಕೆಯನ್ನು ಮುಂದಿಟ್ಟಿತ್ತು. ಈ ಹಿಂದೆ ಈ ಸಂಬಂಧ ಪ್ರತಿಭಟನೆ ನಡೆದ ಸಂದರ್ಭದಲ್ಲಿ ಮಾಲಿಕ ವೇತನ ಹೆಚ್ಚಳಕ್ಕೆ ಒಪ್ಪಿಕೊಂಡು ಬಳಿಕ ಮಾತಿನಂತೆ ನಡೆದಿರಲಿಲ್ಲ. ಹೀಗಾಗಿ ಎರಡನೆ ಬಾರಿಗೆ ಕಾರ್ಮಿಕರು ಜೂನ್ 21 ರಂದು ಕೂಲಿ ಹೆಚ್ಚಳಕ್ಕೆ ಒತ್ತಾಯಿಸಿ ಹಮಾಲಿ ಕಾರ್ಮಿಕ ಸಂಘದ ವತಿಯಿಂದ ಪ್ರತಿಭಟನೆ ನಡೆಸಿದರು.




ಇದಕ್ಕೂ ಮೊದಲು ಮೂಡಬಿದರೆ ಬಸ್ಸು ನಿಲ್ದಾಣದಿಂದ ಗಾಂಧಿ ನಗರದ ಮಾರ್ಬಲ್ ಅಂಗಡಿಯವರೆಗೆ ಪ್ರತಿಭಟನಾ ಮೆರವಣಿಗೆ ನಡೆಯಿತು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಹಮಾಲಿ ಕಾರ್ಮಿಕರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಾತನಾಡಿದರು. ಕೂಲಿ ಪರಿಷ್ಕರಣೆಗೆ ಅಂಗಡಿ ಮಾಲಕ ಕಾರ್ಮಿಕ ಮುಖಂಡರ ಜೊತೆ ಮಾತುಕತೆಗೆ ಒಪ್ಪಿಕೊಂಡ ಮೇರೆಗೆ ಪ್ರತಿಭಟನೆಯನ್ನು ಹಿಂತೆಗೆಯಲಾಯಿತು. ಪ್ರತಿಭಟನೆಯಲ್ಲಿ ಕಾರ್ಮಿಕ ಮುಖಂಡರಾದ ರಮಣಿ, ಶಂಕರ, ವಾಲ್ಪಾಡಿ, ಗಿರಿಜೆ ಮತ್ತಿತರರು ಭಾಗವಹಿಸಿದ್ದರು.

ಕೊರಗ ಕುಟುಂಬಗಳಿಗೆ ಭೂಮಿ ವಿಳಂಬ ವಿರುದ್ಧ ಪ್ರತಿಭಟನೆ:

ಮಂಗಳೂರು ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ವಿಸ್ತರಣೆ ಸಂದರ್ಭ ಮಂಗಳೂರಿನ ನಂತೂರಿನ 6 ಕೊರಗ ಕುಟುಂಬಗಳನ್ನು ಎತ್ತಂಗಡಿ ಮಾಡಲು ಹೊರಟಾಗ 3 ವರ್ಷಗಳ ಹಿಂದೆ ಸಿಪಿಐ(ಎಂ) ಮಂಗಳೂರು ನಗರ ಸಮಿತಿ ಎರಡು ಬಾರಿ ಪ್ರತಿಭಟನೆ ನಡೆಸಿದ ಬಳಿಕ,. ದ.ಕ.ಜಿಲ್ಲಾಡಳಿತ ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಆ ಕುಟುಂಬಗಳ ಪುನರ್ವಸತಿಯ ಬಗ್ಗೆ ಒಂದು ಒಪ್ಪಂದಕ್ಕೆ ಬರಲಾಗಿತ್ತು.

ಕೊರಗರು ಮೂಲ ನಿವಾಸಿ ಬುಡಕಟ್ಟಿಗೆ ಸೇರಿದವರಾಗಿದ್ದು, ಹೆಚ್ಚಿನವರು ನಿವೇಶನ, ಮನೆ, ರೇಶನ್ ಕಾರ್ಡ್ ಇತ್ಯಾದಿ ದಾಖಲೆಗಳನ್ನೂ ಹೊಂದಿದವರಲ್ಲ. ಸಿಪಿಐ(ಎಂ) ಪಕ್ಷದ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಮಧ್ಯ ಪ್ರವೇಶದಿಂದ, ಮನೆ ಕಳೆದುಕೊಳ್ಳಲಿರುವ ಕೊರಗ ಕುಟುಂಬಗಳಿಗೆ ನಗರದ ಸರಿಪಲ್ಲ ಎಂಬಲ್ಲಿ ತಲಾ 5 ಸೆಂಟ್ಸ್‌ನಂತೆ ನಿವೇಶನವನ್ನು ಗುರುತಿಸಿ, ಅದನ್ನು ರಾಜ್ಯ ಸರ್ಕಾರದಿಂದ ಮಂಜೂರು ಮಾಡಿಸಿಕೊಡುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿದ್ದರು. ಅಲ್ಲಿಯವರೆಗೆ ಆ ಕುಟುಂಬ ವಾಸವಾಗಿರುವ ಮನೆಗಳಿಗೆ ತಿಂಗಳಿಗೆ ತಲಾ ರೂ.2,000 ದಂತೆ ಬಾಡಿಗೆ ನೀಡಲು ರಾಜ್ಯ ಹೆದ್ದಾರಿ ಪ್ರಾಧಿಕಾರ ಪಾವತಿಸಿದ ಬಳಿಕ ಬಾಡಿಗೆ ಪಾವತಿಯನ್ನು ನಿಲ್ಲಿಸಲಾಗಿತ್ತು. ಜಿಲ್ಲಾಡಳಿತಕ್ಕೆ ಈ ಬಗ್ಗೆ ಹಲವು ಬಾರಿ ಮನವಿ ಸಲ್ಲಿಸಿದ್ದರೂ ಏನೊಂದೂ ಕ್ರಮ ಜರಗಿರಲಿಲ್ಲ.



ವರದಿ : ವಾ.ಉ.

ಇನ್ನೊಂದು ಕಡೆ ಭೂಮಿ ಮಂಜೂರಾತಿ ಶೀಘ್ರ ಮಾಡಿಸುವ ಬಗ್ಗೆಯೂ ಜಿಲ್ಲಾಡಳಿತ ಉತ್ಸುಕತೆ ತೋರಿರುವುದಿಲ್ಲ. ಬಾಡಿಗೆ ಸಂಬಂಧ ರಾಷ್ಟ್ರೀಯ ಪರಿಶಿಷ್ಟ ಪಂಗಡದ ಆಯೋಗಕ್ಕೆ ದೂರು ಸಲ್ಲಿಸಲಾಯಿತು. ಬಾಕಿಯಿರುವ ಬಾಡಿಗೆಯನ್ನು ಜಿಲ್ಲಾಡಳಿತ ಪಾವತಿಸುವ ವ್ಯವಸ್ಥೆ ಮಾಡಬೇಕೆಂದು ಆಯೋಗವು ಎರಡು ತಿಂಗಳ ಹಿಂದೆ ಆದೇಶ ನೀಡಿರುತ್ತದೆ. ಎರಡು ತಿಂಗಳು ಕಳೆದರೂ, ಆಯೋಗದ ಆದೇಶವನ್ನು ಜಿಲ್ಲಾಧಿಕಾರಿ ಗಮನಕ್ಕೆ ತಂದರೂ, ಕ್ರಮ ಕೈಗೊಳ್ಳದ ಜಿಲ್ಲಾಡಳಿತದ ನಿಷ್ಕ್ರಿಯತೆಯನ್ನು ವಿರೋಧಿಸಿ ಜೂನ್ 25 ರಂದು ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರು ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಮಂಗಳೂರು ಮತ್ತು ಮಂಗಳೂರು ನಗರ ದಲಿತ ಹಕ್ಕುಗಳ ಸಮಿತಿಗಳ ಆಶ್ರಯದಲ್ಲಿ ಪ್ರತಿಭಟನಾ ಪ್ರದರ್ಶನವನ್ನು ನಡೆಸಲಾಯಿತು.

ಪ್ರತಿಭಟನೆಯನ್ನು ಉದ್ಘಾಟಿಸಿದ ರಾಜ್ಯ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಸಹ ಸಂಚಾಲಕ ಕೃಷ್ಣಪ್ಪ ಕೊಂಚಾಡಿ ಮಾತನಾಡಿ, ರಾಷ್ಟ್ರೀಯ ಪರಿಶಿಷ್ಟ ಪಂಗಡ ಆಯೋಗದ ಆದೇಶವಿದ್ದೂ, ಸಂತ್ರಸ್ತ ಕೊರಗ ಕುಟುಂಬಗಳಿಗೆ ಬಾಡಿಗೆ ಪಾವತಿಸುವಲ್ಲಿ ಹಾಗೂ ಭೂಮಿ ಮಂಜೂರಾತಿ ಮಾಡುವಲ್ಲಿ ವಿಳಂಬ ಮಾಡಿದಲ್ಲಿ ಸಮಿತಿಯು ಇನ್ನಷ್ಟು ತೀವ್ರವಾದ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಿದೆ ಎಂದು ಜಿಲ್ಲಾಡಳಿತಕ್ಕೆ ಎಚ್ಚರಿಕೆ ನೀಡಿದರು.

ಪ್ರತಿಭಟನೆಯ ಬಳಿಕ ಸಮಿತಿಯ ನೇತೃತ್ವದಲ್ಲಿ ಸಂತ್ರಸ್ತ ಕುಟುಂಬಗಳಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯನ್ನು ಬೆಂಬಲಿಸಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ವಸಂತ ಆಚಾರಿ, ಸಮುದಾಯ ಕಾರ್ಯದರ್ಶಿ ವಾಸುದೇವ ಉಚ್ಚಿಲ, ದಲಿತ ಹಕ್ಕುಗಳ ಸಮಿತಿಯ ಉಳ್ಳಾಲ ವಲಯಾಧ್ಯಕ್ಷ ನಾರಾಯಣ ತಲಪಾಡಿ, ಸಿಐಟಿಯು ನಗರ ಮುಖಂಡರಾದ ಭಾರತಿ ಬೋಳಾರ್, ಎಸ್‌ಎಫ್‌ಐನ ಅಬ್ದುಲ್ ರಂಶಾನ್ ಮಾತನಾಡಿದರು. ಪ್ರತಿಭಟನೆಯ ನೇತೃತ್ವವನ್ನು ದಲಿತ ಹಕ್ಕುಗಳ ಸಮಿತಿಯ ನಗರ ಕಾರ್ಯದರ್ಶಿ ಲಿಂಗಪ್ಪ ನಂತೂರು, ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ನಗರ ಕಾರ್ಯದರ್ಶಿ ಜಯಕುಮಾರ್ ಕೋಡಿಕಲ್ ಮತ್ತಿತರರು ವಹಿಸಿದ್ದರು. ನಗರದ ಬೇರೆ ಬೇರೆ ಕಡೆಗಳಿಂದ ಪ್ರತಿಭಟನಾಕಾರರು ಆಗಮಿಸಿ ಭಾಗವಹಿಸಿದ್ದರು. ಲಿಂಗಪ್ಪ ನಂತೂರು ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ಕಿಶೋರ್ ಪೊರ್ಕೋಡಿ ವಂದಿಸಿದರು.



ಗೀಗೀಪದ

ಎಂಥಾ ಕಾಲ ಬಂತು ನೋಡ್ರಿ
ಅಕ್ಕಿ ರೇಟು 40/- ಬ್ಯಾಳಿರೇಟು 100/-
ಆಗ್ಯೆತಿ ನೋಡ್ರಣ್ಣ
ಬಡವರು ತಿನ್ನೊ ಅನ್ನದಾಗ ವ್ಯಾಪಾರ ಮಾಡಿ
ಲಾಭಮಾಡೊ ಹೊಟ್ಟಿ ಬಾಕ ಮಂದಿನೆಲ್ಲ
ಪದವಿ ನೀಡ್ಯಾರ್ರಿ.

/ಗೀಯ//
ಚುನಾವಣೆ ನಡೆದಾಗ 2/- ರೂ ಅಕ್ಕಿ ಅಂತ
ಮಾತು ಕೊಟ್ಟು ಓಟು ಪಡೆದಾವ ಎಲ್ಲಿ
ಹೋಗ್ಯಾನ್ರೀ
ಗುಡ್ಡ ಬಗೆದು ಕೆಬ್ಣ ಕದ್ದು ಕೋಟಿ ಕೋಟಿ
ಲೂಟಿ ಮಾಡಿ
ಕಾರು ಬಾರು ಮಾಡ್ತಾ ಮ್ಯಾಲ ಹಾರುತಾನ್ರಿ

//ಗೀಯ//
ಕಾಳಸಂತೆ ಖದೀಮರಿಗೆ ಲಾಭಕ್ಕಾಗಿ ರೇಷನ್
ಕೊಟ್ಟು
ಬಡವರ ಹೊಟ್ಟಿ ಮ್ಯಾಲ ತಣ್ಣೀರ್ ಬಟ್ಟಿ
ಹಾಕ್ಯಾನ್ರಿ
ಅನ್ನ ಬೆಳೆವ ರೈತನ ಕೈಗೆ ಕೋಳ ತೊಡಸಿ
ಜೈಲಿಗಾಕ್ಸಿ
ಎದಿಮ್ಯಾಲ ಗುಂಡಿಟ್ಟು ಕೊಂದು ಹಾಕ್ಯಾನ್ರಿ

//ಗೀಯ//
ನ್ಯಾಯಬೆಲೆ ಅಂಗಡಿಗಳ ಬಾಗಿಲನ್ನು ಮುಚ್ಚಿ
ಹಾಕಿ
ಕೇಳಿದ ಮಂದಿಗೆಲ್ಲ ರೇಷನ್ ಕಾರ್ಡ
ಕೊಟ್ಟನಂತಾನ್ರಿ
ನಾಲ್ಕು ಕೇಜಿ ಮುಗ್ಗಲ ಅಕ್ಕಿಗಾಗಿ ಸಾಲಿನಲ್ಲಿ
ನಿಂತ್ರು
ನಾಳೆಬರ್ರಿ ಅಂತ ಹೇಳಿ ವಾಪಸ್ ಕಳಿಸ್ಯಾನ್ರಿ

/ಗೀಯ//
ಶ್ರೀಕೃಷ್ಣದೇವರಾಯನ ಕಾಲದಾಗ ಬೆಳ್ಳಿ
ಬಂಗಾರ
ಮುತ್ತು ರತ್ನ ವ್ಯಾಪಾರ ಭಾರಿ ಇತ್ತಂತ್ರಿ
ರಾಮರಾಜ್ಯ ಆಳಿದ್ರೇನು ಕೃಷ್ಣದೇವರಾಯ
ಆಳಿದ್ರೇನು
ಬಡವರ ಕಷ್ಟಮಾತ್ರ ಇಲ್ಲಿ ತಪ್ಪಂಗಿಲ್ಲರೀ.

//ಗೀಯ//
ರೈತರ ಮೇಲೆ ಆಣೆ ಮಾಡಿ ಅಧಿಕಾರ
ನಡೆಸೋ ಸರಕಾರದಾಗ
ಕೂಲಿ ರೈತರ ಗೋಳು
ಕೇಳೋರಿಲ್ದಂಗಾಗ್ಯೆತ್ರಿ
ಚಳುವಳಿ ಮಾಡೋ ಸಂಘ ಇಂಥಾ
ಸರ್ಕಾರ ಕಿತ್ತೊಗೆದು
ಜನರ ಕಾಳಜಿ ಮಾಡೋ ಸರ್ಕಾರ
ತರಬೇಕ್ರಣ್ಣಾ.
//ಗೀಯ//

ಎ.ಕರುಣಾನಿಧಿ, ಹೊಸಪೇಟೆ

(ಈ ಹಾಡಿನ ಚೆಂದ ಏನೆಂದು ಬರೀ ಈ ಕವನ ಓದಿದರೆ ಕೆಲವು ಸಾರಿ ಸರಿಯಾಗಿ ಅರ್ಥವಾಗದೇ ಹೋಗಬಹುದು. ದಯಮಾಡಿ ಹಾಡ ಬಲ್ಲವರಿಂದ ಒಮ್ಮೆ ಹಾಡಿಸಿ ಕೇಳಿ ನೋಡಿ)

ಹುತಾತ್ಮ ಶ್ರೀನಿವಾಸ ಬಜಾಲ್ 10ನೇ ವಾರ್ಷಿಕ ಸಂಸ್ಮರಣೆ

ಈಗ ಮಂಗಳೂರು ಮಹಾನಗರ ಪಾಲಿಕೆಯ ಭಾಗವಾಗಿರುವ ಬಜಾಲು ಗ್ರಾಮವು ನಗರದ ಆಗ್ನೇಯ ದಿಕ್ಕಿನಲ್ಲಿ ನೇತ್ರಾವತಿ ನದಿ ತೀರದಲ್ಲಿದೆ. ಹೆಚ್ಚುಮಂದಿ ಬಡವರೂ ದುಡಿಮೆಗಾರರೂ ಆದ ಈ ಊರಿನ ಜನರಲ್ಲಿ ಬಹುಪಾಲು ಮಂಗಳೂರು ನಗರದಲ್ಲಿ ಒಂದಿಲ್ಲೊಂದು ಕಡೆ ಕಾರ್ಖಾನೆಯಲ್ಲಿಯೋ ಇತರ ಉದ್ದಿಮೆಗಳಲ್ಲಿಯೋ ಕಳೆದ ನೂರು ವರ್ಷಗಳಿಂದಲೂ ದುಡಿಯುತ್ತಿದ್ದಾರೆ. ಬತ್ತದ ಕೃಷಿ ಇತ್ತೀಚೆಗೆ ನಷ್ಟದಾಯಕವಾಗಿದ್ದು, ಮೊದಲು ಅಲ್ಲಿ ಸಾಕಷ್ಟು ಕೃಷಿಕರೂ ಇದ್ದರು. ಮನೆಮನೆಗಳಲ್ಲಿ ನಡೆಯುವ ಬೀಡಿ ಕಟ್ಟುವ ಕೆಲಸ ಜಾತಿಮತಗಳ ಭೇದವಿಲ್ಲದೆ ಬಹಳಷ್ಟು ಕುಟುಂಬಗಳ ಜೀವನಾಧಾರವಾಗಿಯೂ ಇತ್ತು. ಈಗಲೂ ಇದೆ. ಬೃಹದಾಕಾರವಾಗಿ ಬೆಳೆಯುತ್ತಿರುವ ಮಂಗಳೂರು ನಗರದ ನಿರ್ಮಾಣದಲ್ಲಿ ಕಟ್ಟಡ ನಿರ್ಮಾಣ ಹಾಗೂ ಕಾಮಗಾರಿಯಲ್ಲಿ ತೊಡಗಿರುವ ಸಾಕಷ್ಟು ಮಂದಿ ಈ ಊರಲ್ಲಿದ್ದಾರೆ. ಮಂಗಳೂರು ನಗರದಲ್ಲಿ ಕಮ್ಯೂನಿಸ್ಟ್ ಚಳುವಳಿಯು ಕ್ರಿಯಾಶೀಲವಾಗಿರುವ ಪ್ರದೇಶಗಳಲ್ಲಿ ಒಂದು ಬಜಾಲು.

ಕಳೆದ ಎರಡು ದಶಕಗಳಿಂದ ಕರಾವಳಿ ಜಿಲ್ಲೆಗಳಲ್ಲಿ ವಿಷವಾಯುವಾಗಿ ಬೀಸುತ್ತಿರುವ ಹಿಂದೂ ಕೋಮುವಾದವನ್ನು ಭಯೋತ್ಪಾದಕ ಚಟುವಟಿಕೆಯಾಗಿ ನಿರೂಪಿಸಿದ್ದು ಹಿಂದೂ ಯುವಸೇನೆ. ಮೊದಲಿಗೆ ಮಂಗಳೂರಿನಲ್ಲಿ. ಅಲ್ಪಸಂಖ್ಯಾಕರ ಮೇಲೆ ಭಯೋತ್ಪಾದನೆಯ ಪ್ರಯೋಗಗಳನ್ನು ನಡೆಸಿದ್ದಲ್ಲದೆ, ಕೋಮುವಾದ ಹಾಗೂ ಭಯೋತ್ಪಾದನೆಯನ್ನು ವಿರೋಧಿಸುವ ಡಿವೈಎಫ್ಐ ಮತ್ತು ಕಮ್ಯೂನಿಸ್ಟರ ಮೇಲೆ ಎರಗಲು ಅವರು ತೊಡಗಿದ್ದರು. ಕಮ್ಯೂನಿಸ್ಟ್ ಚಳುವಳಿಯ ಪ್ರಭಾವವಿರುವ ಕಂಕನಾಡಿ, ಜಪ್ಪಿನಮೊಗರು, ಬಜಾಲುಗಳಲ್ಲಿ ಯುವಜನರನ್ನು ಹಿಂದೂ ಯುವಸೇನೆ ತಮ್ಮ ಕೃಪಾವಲಯದೊಳಗೆ ಎಳೆದುಕೊಳ್ಳುವ ಮೂಲಕ ಡಿವೈಎಫ್ಐಗೆ ಒಂದು ಸವಾಲಾಗಿ ಮೂಡಿ ಬಂತು. ಈ ಸವಾಲನ್ನು ದಶಕದ ಹಿಂದೆಯೇ ಡಿವೈಎಫ್ಐ ಎತ್ತಿಕೊಂಡರೂ, ಅದಕ್ಕಾಗಿಯೇ ದೇಹವನ್ನು ಬಲಿದಾನ ಇತ್ತವರು ಶ್ರೀನಿವಾಸ್ ಬಜಾಲ್.

ಕೋಮುವಾದಿ ಕೊಲೆಗಡುಕರಿಗೆ ಶ್ರೀನಿವಾಸ್ ಬಲಿಯಾದುದು 2002 ಜೂನ್ 24 ರಂದು. ಆಗ ಅವರಿಗೆ 28 ವರ್ಷ ವಯಸ್ಸು . ಬಜಾಲು ಪ್ರದೇಶದ ಇತರ ಯುವಜನರಂತೆ ಬಡ ಶ್ರಮಿಕರ ಕುಟುಂಬದಿಂದ ಬಂದವರು ಅವರು. ಚಿಕ್ಕ ವಯಸ್ಸಿನಲ್ಲಿಯೇ ಕುಟುಂಬದ ದೊಡ್ಡ ಜವಾಬ್ದಾರಿ. ಶಾಲಾ ವಿದ್ಯಾಭ್ಯಾಸದ ಆನಂತರ ದುಡಿಮೆಗೆ ಹೋಗಬೇಕಾಯಿತು. ಸಂಸ್ಥೆಯೊಂದರಲ್ಲಿ ಗ್ಲಾಸ್ ಕಟ್ಟಿಂಗ್ ಕೆಲಸ. ಕಾಯಿಲೆಪೀಡಿತ ತಾಯಿ, ಕಣ್ಣು ಕಾಣಿಸದ



ಅಕ್ಕ, ಮದುವೆಗೆ ಬಂದಿದ್ದ ತಂಗಿ, ಇನ್ನೊಬ್ಬ ಅಣ್ಣ ಇವರನ್ನೊಳಗೊಂಡ ಸಮಸ್ತ ಕುಟುಂಬವನ್ನು ಸಾಕುವ ಜವಾಬ್ದಾರಿ ಶ್ರೀನಿವಾಸ್‌ಗೆ. ಇಷ್ಟಿದ್ದರೂ ದೇಹದ ತುಂಬಾ ಇರುವ ಚೈತನ್ಯಕ್ಕೆ ಪ್ರಕಟವಾಗಲು ಬೇಕೊಂದು ವೇದಿಕೆ. ಬಜಾಲು ಪಕ್ಕಲಡ್ಕ ಡಿವೈಎಫ್ಐ ಘಟಕದ ಸಾಮಾನ್ಯ ಸದಸ್ಯನಾಗಿ ಬಳಿಕ ಘಟಕದ ಉಪಾಧ್ಯಕ್ಷನಾದ ಶ್ರೀನಿವಾಸ್ ಕ್ರೀಡಾ ಸಂಘಟಕ; ಸ್ವತಃ ನೃತ್ಯ ಕಲಾವಿದ ಹಾಗೂ ರಂಗಕರ್ಮಿ. ನಿರ್ಭಯವಾಗಿ ಮುನ್ನುಗ್ಗುವ ಧೈರ್ಯಶಾಲಿ. ಕ್ರೀಡೆ, ನೃತ್ಯ, ನಾಟಕಗಳನ್ನು ಕಲಿಸುತ್ತಾ ಯುವಜನರನ್ನು ಡಿವೈಎಫ್ಐಯತ್ತ ಆಕರ್ಷಿಸುವುದರೊಂದಿಗೆ, ತನ್ನ ಪ್ರದೇಶದ ಯುವಜನರು ಹಿಂದೂ ಯುವಸೇನೆಗೆ ಸೇರ್ಪಡೆಯಾಗುವುದನ್ನು ತಡೆಯಲು ಶಕ್ತರಾದರು ಶ್ರೀನಿವಾಸ್. ಬಜಾಲು, ಜಪ್ಪಿನಮೊಗರು, ಕಂಕನಾಡಿ ಪ್ರದೇಶದ ಯುವಕರನ್ನು ಹಿಂದೂ ಯುವಸೇನೆಗೆ ಸೆಳೆಯುವಲ್ಲಿ ಆಗಿರುವ ವೈಫಲ್ಯಕ್ಕೆ ಬಜಾಲ್ ಶ್ರೀನಿವಾಸನೇ ಕಾರಣ ಎಂದು ಹಿಂದೂ ಯುವಸೇನೆಯ ಕೊತ್ವಾಲರು ಭಾವಿಸಿದರು. ಶ್ರೀನಿವಾಸನನ್ನೇ ಇಲ್ಲವಾಗಿಸಿದರೆ ತಮಗೆ ಯಾರ ಅಡ್ಡಿಯೂ ಇಲ್ಲ ಎಂದು ತಿಳಿದರು. 2002 ಜೂನ್ 24 ರಂದು ಬೆಳಗ್ಗಿನ ಹೊತ್ತಿಗೆ ಮನೆಗೆ ಬ್ರೆಡ್ಡು ತರಲೆಂದು ಹೊರಟಿದ್ದ ಶ್ರೀನಿವಾಸರನ್ನು ಕೊಲೆಗಡುಕರು ಹಲವರು ತಲವಾರಿನಿಂದ ಕಡಿದು ಕೊಂದೇ ಬಿಟ್ಟರು. ನಾಯಕ ರೂಪದಲ್ಲಿ ಮೂಡಿಬರುತ್ತಿದ್ದ ತರುಣನೊಬ್ಬನ ದೇಹಾಂತ್ಯ ಈ ರೀತಿ ಆಯಿತು.

ಶ್ರೀನಿವಾಸ್ ಬಜಾಲ್ ಹುತಾತ್ಮನಾದಂದಿನಿಂದ ಬಜಾಲಿನಲ್ಲಿ ಹಾಗೂ ಮಂಗಳೂರಿನಲ್ಲಿ ಡಿವೈಎಫ್ಐ ಚಳುವಳಿ ಇನ್ನಷ್ಟು ಬಲಿಷ್ಠವಾಗಿದೆ. ಹಿಂದೂತ್ವ ಸಿದ್ಧಾಂತದ ನೆಪದಲ್ಲಿ ಕೊಲೆ ನಡೆಸಿದವರು ಹಲವಾರು ವರ್ಷ ಜೈಲಿನಲ್ಲಿದ್ದು ವಾಪಾಸಾಗಿದ್ದಾರೆ; ಯಾವ ಸಿದ್ಧಾಂತವೂ ಇಲ್ಲದ ಕ್ರಿಮಿನಲ್‌ಗಳಾಗಿ ಪರಿವರ್ತಿತರಾಗಿರುವ ಇವರು ದುಡ್ಡಿಗಾಗಿ ಅಪರಾಧ ನಡೆಸಿದ ಅನೇಕ ಪ್ರಕರಣಗಳಲ್ಲಿ ಪದೇ ಪದೇ ಜೈಲು ಸೇರುತ್ತಿದ್ದಾರೆ.

ಚತುರ ಸಂಘಟಕ, ಪ್ರತಿಭಾವಂತ ಕಲಾವಿದ, ಪರೋಪಕಾರಿ ಎನಿಸಿದ ಶ್ರೀನಿವಾಸ್ ಬಜಾಲ್ ಜನತೆಯ ಅಚ್ಚುಮೆಚ್ಚಿನ ಒಡನಾಡಿಯಾಗಿದ್ದರು. "ದೇಹ ಛಿದ್ರವಾದರೂ ದೇಶ ಛಿದ್ರವಾಗಲು ಬಿಡಲಾರೆ" ಎಂಬ ಧ್ಯೇಯಕ್ಕೆ ಬದ್ಧರಾಗಿ ಹುತಾತ್ಮ ಭಗತ್‌ಸಿಂಗರ ಪರಂಪರೆಗೆ ಸೇರಿ ಹೋದರು. ಡಿವೈಎಫ್ಐ ಬಜಾಲು ಪಕ್ಕಲಡ್ಕ ಘಟಕವು ಪ್ರತೀ ವರ್ಷ ಶ್ರೀನಿವಾಸ ಬಜಾಲ್ ಹುತಾತ್ಮ ದಿನದಂದು ರಕ್ತದಾನ ಶಿಬಿರವನ್ನು ಏರ್ಪಡಿಸುವುದಲ್ಲದೆ, ಆ ಪ್ರದೇಶದ



ಆಸುಪಾಸಿನ ಮೂರು ಹೈಸ್ಕೂಲುಗಳಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಪ್ರಥಮ ರ‍್ಯಾಂಕ್ ಪಡೆದವರಿಗೆ ಚಿನ್ನ ಹಾಗೂ ಬೆಳ್ಳಿ ಪದಕಗಳನ್ನು ನೀಡುತ್ತಿದೆ. ಶ್ರೀನಿವಾಸ್ ನಿಧನದಿಂದ ಸಂತ್ರಸ್ತವಾಗಿರುವ ಅವರ ಕುಟುಂಬಕ್ಕೆ ನಿಧಿಯೊಂದನ್ನು ಕೂಡಿಸಿಕೊಟ್ಟಿದ್ದು, ಆ ನಿಧಿಯ ಬ್ಯಾಂಕ್ ಬಡ್ಡಿಯಿಂದ ಆ ಕುಟುಂಬಕ್ಕೆ ಆಗೀಗ ಹಣಕಾಸು ದೊರೆಯುವಂತೆ ಮಾಡಿರುತ್ತದೆ. ಅಲ್ಲದೆ ವರ್ಷಕ್ಕೆ ಒಂದೆರಡು ಬಾರಿ ಮನೆಗೆ ಅವಶ್ಯವಿರುವ ಅಕ್ಕಿ, ಧಾನ್ಯಗಳನ್ನು ಒದಗಿಸುತ್ತಿದೆ.

ಶ್ರೀನಿವಾಸ್ ಬಜಾಲ್ ಹುತಾತ್ಮರಾದ 10ನೇ ವಾರ್ಷಿಕ ದಿನವನ್ನು ಗಮನ ಸೆಳೆಯುವಂತೆ 2012 ಜೂನ್ 24 ರಂದು ಬಜಾಲು ಪಕ್ಕಲಡ್ಕ ಡಿವೈಎಫ್ಐ ಘಟಕವು ಏರ್ಪಡಿಸಿರುತ್ತದೆ. ಬೆಳಿಗ್ಗೆ ಪ್ರತೀ ವರ್ಷದಂತೆ ರಕ್ತದಾನ ಶಿಬಿರ ನಡೆಸಿದೆ. ಅಪರಾಹ್ನ ನಡೆದ ಮೆರವಣಿಗೆಯಲ್ಲಿ ಮಂಗಳೂರು ಮಾತ್ರವಲ್ಲ ಜಿಲ್ಲೆಯ ಬೇರೆ ಕಡೆಗಳಿಂದಲೂ ಡಿವೈಎಫ್ಐ ಸಂಗಾತಿಗಳು ಜಪ್ಪಿನಮೊಗರಿನಿಂದ ಪಕ್ಕಲಡ್ಕದ ವರೆಗೆ ನಡೆದ ಮೆರವಣಿಗೆಯಲ್ಲಿ ಭಾಗವಹಿಸಿರುತ್ತಾರೆ. ಶ್ರೀನವಾಸ್ ಬಜಾಲ್ ಹುತಾತ್ಮರಾದ ಸಂದರ್ಭ ಕೋಮುವಾದದ ವಿರುದ್ಧ ವ್ಯಕ್ತವಾಗಿದ್ದ ಆಕ್ರೋಶವನ್ನು 10ನೇ ವಾರ್ಷಿಕದ ಸಂದರ್ಭದಲ್ಲಿಯೂ ಕಾಣುವಂತಾದುದು – ಶ್ರೀನಿವಾಸರು ಹೊತ್ತಿಸಿದ ಕ್ರಾಂತಿಯ ಕಿಡಿ ಇನ್ನೂ ಜಾಜ್ವಲ್ಯಮಾನವಾಗಿರುವುದರ ಸಂಕೇತ.

ಬಜಾಲು ಪಕ್ಕಲಡ್ಕ ಮೈದಾನದಲ್ಲಿ ನಡೆದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ, ಕಾರ್ಯದರ್ಶಿ ದಯಾನಂದ ಶೆಟ್ಟಿ, ಮಂಗಳೂರು ನಗರ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್ ಮಾತನಾಡಿದರು. ಡಿವೈಎಫ್ಐ ಉಳ್ಳಾಲ ವಲಯ ಕಾರ್ಯದರ್ಶಿ ಅಶೋಕ್ ಶೆಟ್ಟಿ, ಎಸ್‌ಎಫ್ಐ ಜಿಲ್ಲಾಧ್ಯಕ್ಷ ನಿತಿನ್ ಕುತ್ತಾರ್, ಪಕ್ಕಲಡ್ಕ ಡಿವೈಎಫ್ಐ ಘಟಕದ ಅಧ್ಯಕ್ಷ ನವೀನ್, ಪಕ್ಕಲಡ್ಕ ಯುವಕ ಮಂಡಲದ ಕಾರ್ಯದರ್ಶಿ ದೀಪಕ್ ಬಜಾಲ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಾರ್ವಜನಿಕ ಸಭೆಯಲ್ಲಿ ಎಸ್‌ಎಸ್‌ಎಲ್‌ಸಿ ರ‍್ಯಾಂಕ್ ವಿಜೇತರಿಗೆ ಪದಕಗಳನ್ನು ವಿತರಿಸಲಾಯಿತು. ಮಂಗಳೂರು ನಗರ ಡಿವೈಎಫ್ಐ ಕಾರ್ಯದರ್ಶಿ ಸಂತೋಷ್ ಕುಮಾರ್ ಬಜಾಲ್ ಸ್ವಾಗತಿಸಿದರು. ಘಟಕ ಕಾರ್ಯದರ್ಶಿ ಜಗದೀಶ್ ಬಜಾಲ್ ವಂದಿಸಿದರು.

ರಾಷ್ಟ್ರಪತಿ ಚುನಾವಣೆ ಇಬ್ಬರು ಅಭ್ಯರ್ಥಿಗಳ ನಡುವಿನ ಸ್ಪರ್ಧೆಯಲ್ಲ. ಸಿಪಿಐ(ಎಂ) ಸದಾ ರಾಷ್ಟ್ರಪತಿ ಚುನಾವಣೆಗಳನ್ನು ಒಂದು ರಾಜಕೀಯ ಪ್ರಶ್ನೆಯಾಗಿ ನೋಡಿದೆ, ಒಂದು ರಾಜಕೀಯ ನಿಲುವನ್ನೇ ತಳೆದಿದೆ. ಈ ಬಾರಿಯೂ ಪಕ್ಷ ರಾಷ್ಟ್ರಪತಿ ಚುನಾವಣೆ ಕುರಿತಂತೆ ತನ್ನ ನಿಲುವನ್ನು ರೂಪಿಸಿದ್ದು ಇತ್ತೀಚಿನ 20ನೇ ಮಹಾಧಿವೇಶನದಲ್ಲಿ ಪಕ್ಷ ನಿರ್ಧರಿಸಿದ ರಾಜಕೀಯ ಕಾರ್ಯತಂತ್ರದ ಚೌಕಟ್ಟಿನೊಳಗೆ. ಇದರಲ್ಲಿ ಯುಪಿಎ ಮತ್ತು ಎನ್‌ಡಿಎ ವರ್ತನೆಗಳು ಅವು ದುರ್ಬಲಗೊಂಡಿರುವುದರ ಪ್ರಕಟ ರೂಪ. ಸಿಪಿಐ(ಎಂ) ಪೊಲಿಟ್‌ಬ್ಯುರೊ ಪ್ರಣಬ್ ಮುಖರ್ಜಿಯವರ ಉಮೇದುವಾರಿಕೆಯನ್ನು ಬೆಂಬಲಿಸಲು ನಿರ್ಧರಿಸಿದೆ. ಈ ನಿರ್ಧಾರದ ಆಧಾರವನ್ನು ಈ ಲೇಖನದಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ವಿವರಿಸಿದ್ದಾರೆ.

ರಾಷ್ಟ್ರಪತಿ ಚುನಾವಣೆ

ಪ್ರಣಬ್ ಮುಖರ್ಜಿಯವರ ಉಮೇದುವಾರಿಕೆಯನ್ನು ಸಿಪಿಐ(ಎಂ) ಬೆಂಬಲಿಸಿರುವುದು ಏಕೆ?

ಪ್ರಕಾಶ್ ಕಾರಟ್

ರಾಷ್ಟ್ರಪತಿ ಚುನಾವಣೆಯಲ್ಲಿ ಇಬ್ಬರು ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದಾರೆ– ಯುಪಿಎ ಪರವಾಗಿ ನಿಂತಿರುವ ಪ್ರಣಬ್ ಮುಖರ್ಜಿ ಮತ್ತು ಬಿಜೆಪಿ ಬೆಂಬಲಿಸಿರುವ (ಮತ್ತು ಆರಂಭದಲ್ಲಿ ಎಐಎಡಿಎಂಕೆ ಮತ್ತು ಬಿಜೆಡಿ ಪ್ರಾಯೋಜಿಸಿದ) ಪಿ.ಎ.ಸಂಗ್ಮ. ಈ ಚುನಾವಣೆಯನ್ನು ಈ ಇಬ್ಬರು ಅಭ್ಯರ್ಥಿಗಳ ನಡುವಿನ ಸ್ಪರ್ಧೆಯಾಗಿ ಕಾಣಲಾಗುತ್ತಿಲ್ಲ. ಇದರ ತಳದಲ್ಲಿ ಒಂದು ರಾಜಕೀಯ ಮರು-ಹೊಂದಾಣಿಕೆಯ ಲಕ್ಷಣಗಳನ್ನು ಸೂಸುವ ಪ್ರಚೋದನೆಗಳು ಮತ್ತು ಮಂಥನ ಪ್ರಕ್ರಿಯೆ ಅಡಗಿದೆ.

ಈ ರಾಷ್ಟ್ರಪತಿ ಚುನಾವಣೆಯ ಹಿನ್ನೆಲೆಯಲ್ಲಿ ಯುಪಿಎ ಸರಕಾರವನ್ನು ಬಾಧಿಸುತ್ತಿರುವ ಹಲವಾರು ತೊಂದರೆಗಳಿವೆ. ಇದರಲ್ಲಿ ದಿವಾಳಿಕೋರ ಧೋರಣೆಗಳಿಂದಾಗಿ ಹದಗೆಡುತ್ತಿರುವ ಆರ್ಥಿಕ ಸನ್ನಿವೇಶ, ಮೈತ್ರಿಕೂಟದಲ್ಲೇ ಸಾಮರಸ್ಯದ ಕೊರತೆ ಮತ್ತು ರಾಜಕೀಯ ಹಾಗೂ ಧೋರಣಾತ್ಮಕ ಹೆಜ್ಜೆಗಳನ್ನಿಡಲಾಗದ ಅಸಮರ್ಥತೆಯೂ ಸೇರಿದೆ. ಬೆಲೆಯೇರಿಕೆ ಮತ್ತು ಭ್ರಷ್ಟಾಚಾರ ಕಾಂಗ್ರೆಸ್ ಮತ್ತು ಯುಪಿಎ ಸರಕಾರದ ಜನಬೆಂಬಲವನ್ನು ಕ್ಷಯಿಸುತ್ತಿವೆ.

ಬಿಜೆಪಿಯ ವಿಶ್ವಾಸಾರ್ಹತೆಗೂ ಭಾರಿ ಹೊಡೆತ ಬಿದ್ದಿದೆ. ಅದರ ಮುಂಬೈ ರಾಷ್ಟ್ರೀಯ ಕಾರ್ಯಕಾರಿಣಿಯ ಸಭೆ ಮುಖಂಡತ್ವದ ಜಗ್ಗಾಟ ಮತ್ತು ನರೇಂದ್ರ ಮೋದಿಯ ಆಕ್ರಮಣಶೀಲ ಉದಯವನ್ನು ಸಾರ್ವಜನಿಕ ಪ್ರದರ್ಶನಕ್ಕೆ ಇಟ್ಟಿದೆ. ಆರೆಸ್ಸೆಸ್‌ನ ಪಾತ್ರ ಸ್ವಯಂವೇದ್ಯ. ಈ ಘಟನೆಗಳು ಎನ್‌ಡಿಎ ಮೇಲೂ ಪರಿಣಾಮ ಬೀರಿವೆ. ಜೆಡಿ(ಯು) ಸ್ಪಂದನೆ ಬಹಳ ಗಟ್ಟಿಯಾಗಿತ್ತು. ಸಂಗ್ಮ ಅಥವ ಬೇರಾವ ಬಿಜೆಪಿ ಪ್ರಾಯೋಜಿತ ಅಭ್ಯರ್ಥಿಯನ್ನು ಬೆಂಬಲಿಸುವುದಿಲ್ಲ ಎಂದು ಒತ್ತಿ ಹೇಳಿರುವುದು ಅದರ ಗೊಂದಲವನ್ನು ಸೂಚಿಸುತ್ತದೆ.

ರಾಷ್ಟ್ರಪತಿ ಚುನಾವಣೆಯ ಪ್ರಶ್ನೆಯನ್ನು ಯುಪಿಎ ಮತ್ತು ಎನ್‌ಡಿಎ ನಿರ್ವಹಿಸಿರುವ ರೀತಿಗಳು ಅವರೆಡೂ ದುರ್ಬಲಗೊಂಡಿರುವುದರ ಪ್ರಕಟ ರೂಪ.

ಯುಪಿಎನಲ್ಲಿ ಅಭ್ಯರ್ಥಿಯ ಪ್ರಸ್ತಾವದ ಮೇಲೆ ಟಿಎಂಸಿ ಮತ್ತು ಕಾಂಗ್ರೆಸ್ ನಡುವೆ ಒಡಕು ಇತ್ತು. ಇದನ್ನು ಪ್ರತ್ಯೇಕಿಸಿ ನೋಡಲು ಸಾಧ್ಯವಿಲ್ಲ. ಹಲವು ವಿಷಯಗಳಲ್ಲಿ ಟಿಎಂಸಿಗೆ ಯುಪಿಎ ಸರಕಾರದೊಂದಿಗೆ ಹೊಂದಾಣಿಕೆ ಇಲ್ಲ. ಹೆಚ್ಚಿನ ಈ ತಿಕ್ಕಾಟಗಳು ನಟನೆಗಳಾಗಿದ್ದರೂ, ಅದಕ್ಕೊಂದು ಆಳವಾದ ಕಾರಣವೂ ಇದೆ. ಪಶ್ಚಿಮ ಬಂಗಾಲದಲ್ಲಿ ಕಾಂಗ್ರೆಸನ್ನು ಅಂಚಿಗೆ ತಳ್ಳಿ ಅದರ ನೆಲೆಯನ್ನು ಕೈವಶ ಮಾಡಿಕೊಳ್ಳಲು ಟಿಎಂಸಿ ಪ್ರಯತ್ನ ನಡೆಸಿದೆ. ಈ ಗುರಿಸಾಧನೆಗೆ ಅದು ಬಲಪ್ರಯೋಗದ ವಿಧಾನಗಳನ್ನು ಬಳಸಲೂ ಸಿದ್ಧವಿದೆ.



ಬಿಜೆಪಿಗೆ ಎನ್‌ಡಿಎಯನ್ನು ವಿಸ್ತರಿಸಬೇಕಾಗಿದೆ. ಆದರೆ, ವಾಸ್ತವದಲ್ಲಿ ಅದು ಅಸ್ತವ್ಯಸ್ತಗೊಂಡಿದೆ. ರಾಷ್ಟ್ರಪತಿ ಚುನಾವಣೆಗಳಲ್ಲಿ ಜೆಡಿ(ಯು) ಮತ್ತು ಶಿವಸೇನೆ ಪ್ರಣಬ್ ಮುಖರ್ಜಿಯವರನ್ನು ಬೆಂಬಲಿಸಲು ನಿರ್ಧರಿಸಿವೆ.

ಕಾಂಗ್ರೆಸ್ ಮತ್ತು ಬಿಜೆಪಿಗೆ ಪ್ರತಿಯಾಗಿ ಪ್ರಾದೇಶಿಕ ಪಕ್ಷಗಳಿಗೆ ಹೆಚ್ಚೆಚ್ಚು ನೆಲೆ ದೊರಕುತ್ತಿದೆ. ಈ ಪಕ್ಷಗಳು ಕಾಂಗ್ರೆಸಿಗೋ, ಬಿಜೆಪಿಗೋ ಅಂಟಿಕೊಂಡಿಲ್ಲ. ಅವು ತಮ್ಮ ಸ್ವಂತ ಹಿತಾಸಕ್ತಿಗಳ ಆಧಾರದಲ್ಲಿ ವರ್ತಿಸುತ್ತಿವೆ. ಕೆಲವೊಮ್ಮೆ ಸಮಯಸಾಧಕತೆಯಿಂದಲೂ ವರ್ತಿಸುತ್ತವೆ. ಆದರೆ ಅವೆಲ್ಲ ತಳೆಯುವ ಒಂದು ಸಾಮಾನ್ಯ ನಿಲುವೆಂದರೆ ಒಕ್ಕೂಟ ತತ್ವವನ್ನು ಎತ್ತಿ ಹಿಡಿಯುವುದು. ಇದೊಂದು ಸಕಾರಾತ್ಮಕ ಪ್ರವೃತ್ತಿ.

ಪ್ರಸಕ್ತ ರಾಷ್ಟ್ರಪತಿ ಚುನಾವಣೆಗಳ ಹಿನ್ನೆಲೆಯಿದು. ಸಿಪಿಐ(ಎಂ) ಸದಾ ರಾಷ್ಟ್ರಪತಿ ಚುನಾವಣೆಗಳನ್ನು ಒಂದು ರಾಜಕೀಯ ಪ್ರಶ್ನೆಯಾಗಿ ನೋಡಿದೆ, ಒಂದು ರಾಜಕೀಯ ನಿಲುವನ್ನೇ ತಳೆದಿದೆ. ಇತ್ತೀಚಿನ 20ನೇ ಮಹಾಧಿವೇಶನದಲ್ಲಿ ಪಕ್ಷ ನಿರ್ಧರಿಸಿದ ರಾಜಕೀಯ ಕಾರ್ಯತಂತ್ರ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರ ಮತ್ತು ಅದರ ಆರ್ಥಿಕ ಧೋರಣೆಗಳ ವಿರುದ್ಧ ಹೋರಾಟ ನಡೆಸಲು ಕರೆ ನೀಡುತ್ತದೆ. ಅದೇ ವೇಳೆಗೆ ಪಕ್ಷ ಬಿಜೆಪಿ ಮತ್ತು ಅದರ ಕೋಮುವಾದಿ ಅಜೆಂಡಾವನ್ನು ವಿರೋಧಿಸುತ್ತದೆ. ನವ-ಉದಾರವಾದಿ ಧೋರಣೆಗಳು, ಕೋಮುವಾದ ಮತ್ತು ಹೆಚ್ಚುತ್ತಿರುವ ಸಾಮ್ರಾಜ್ಯಶಾಹಿ ಪ್ರಭಾವದ ವಿರುದ್ಧ ಪಕ್ಷ ಹೋರಾಡುತ್ತದೆ. ಕಾಂಗ್ರೆಸೇತರ ಜಾತ್ಯಾತೀತ ಪಕ್ಷಗಳೊಂದಿಗೆ ನಿರ್ದಿಷ್ಟ ಪ್ರಶ್ನೆಗಳಲ್ಲಿ ಸಹಕರಿಸಲು ಮತ್ತು ಜನತೆಯ ಪ್ರಶ್ನೆಗಳ ಮೇಲೆ ಜಂಟಿ ಆಂದೋಲನಗಳು ಮತ್ತು ಹೋರಾಟಗಳ ಬಗ್ಗೆ ಪಕ್ಷ ಮುತುವರ್ಜಿ ವಹಿಸುತ್ತದೆ. ಅದು ಒಂದು ಎಡ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯವನ್ನು ಕಟ್ಟಲು ಶ್ರಮಿಸುತ್ತದೆ. ಇದಕ್ಕೆ ಸಿಪಿಐ(ಎಂ) ಮತ್ತು ಎಡ ಶಕ್ತಿಗಳು ಒಂದು ಸ್ವತಂತ್ರ ಶಕ್ತಿಯಾಗಿ ತಮ್ಮ ಬಲ ಹೆಚ್ಚಿಸಿ ಕೊಳ್ಳಬೇಕಾಗಿದೆ. ಸಿಪಿಐ(ಎಂ) ಮತ್ತು ಎಡಶಕ್ತಿಗಳ ಬಲ ಹೆಚ್ಚಿಸುವ ಪ್ರಕ್ರಿಯೆಗೆ ಪಶ್ಚಿಮ ಬಂಗಾಲದಲ್ಲಿ ತೀವ್ರ ದಾಳಿಗೆ ಒಳಗಾಗಿರುವ ಸಿಪಿಐ(ಎಂ) ಮತ್ತು ಎಡಶಕ್ತಿಗಳ ರಕ್ಷಣೆ ಅಗತ್ಯವಾಗಿದೆ.

ಪಕ್ಷ ರಾಷ್ಟ್ರಪತಿ ಚುನಾವಣೆ ಕುರಿತಂತೆ ತನ್ನ ನಿಲುವನ್ನು ರೂಪಿಸಿದ್ದು ಈ ಚೌಕಟ್ಟಿನೊಳಗೆ. ಸಿಪಿಐ(ಎಂ) ಪೊಲಿಟ್‌ಬ್ಯುರೊ ಪ್ರಣಬ್ ಮುಖರ್ಜಿಯವರ ಉಮೇದುವಾರಿಕೆಯನ್ನು ಬೆಂಬಲಿಸಲು ನಿರ್ಧರಿಸಿದೆ. ಈ ನಿರ್ಧಾರದ ಆಧಾರವನ್ನು ವಿವರಿಸಬೇಕಾಗಿದೆ.

1992ರಿಂದ ತಳೆದ ನಿಲುವು

1991ರ ಲೋಕಸಭಾ ಚುನಾವಣೆಗಳ ನಂತರ ಒಬ್ಬ ಬಿಜೆಪಿ ಪ್ರಾಯೋಜಿತ ಅಭ್ಯರ್ಥಿಯನ್ನು ಬೆಂಬಲಿಸುವ ಪ್ರಶ್ನೆಯೇ ಇರಲಿಲ್ಲ. ಏಕೆಂದರೆ, ಬಿಜೆಪಿಯ ಬಲ ಹೆಚ್ಚಿದ ಮೇಲೆ, ಅದು ಹಿಂದುತ್ವ ಶಕ್ತಿಗಳ ಪ್ರಭಾವಕ್ಕೆ ಪಕ್ಕಾಗುವ ಒಬ್ಬ ಸಾಂವಿಧಾನಿಕ ಮುಖ್ಯಸ್ಥರನ್ನು ಪ್ರತಿಷ್ಠಾಪಿಸದಂತೆ ತಡೆಯುವುದು ಒಂದು ಮುಖ್ಯ ಕೆಲಸವಾಗಿತ್ತು. ಹಾಗೆ ತಡೆಯಲಾಗದಿದ್ದರೆ, ಅಂತಹ ಒಂದು ಬೆಳವಣಿಗೆ ಸಂವಿಧಾನದ ಜಾತ್ಯಾತೀತ ಪ್ರಜಾಸತ್ತಾತ್ಮಕ ನೀತಿಗೆ ಹಾನಿಕಾರಕವಾಗುತ್ತದೆ.

ಇಂತಹ ಒಂದು ಪರಿಗಣನೆಯಿಂದಾಗಿ ಪಕ್ಷ 1992ರ ರಾಷ್ಟ್ರಪತಿ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಶಂಕರ ದಯಾಳ್ ಶರ್ಮರನ್ನು ಬೆಂಬಲಿಸಿತು. ಅದೇ ಕಾರಣದಿಂದಲೇ, 1992ರ ನಂತರ ನರಸಿಂಹರಾವ್ ಸರಕಾರ ಆರಂಭಿಸಿದ, ನಂತರ ಬಂದ ಸರಕಾರಗಳು ಅನುಸರಿಸಿದ ಉದಾರೀಕರಣದ ಧೋರಣೆಗಳ ಬಗ್ಗೆ ದೃಢ ವಿರೋಧವಿದ್ದರೂ, ಸಂವಿಧಾನ ಮತ್ತು ರಾಜಕೀಯ ವ್ಯವಸ್ಥೆಯ ಜಾತ್ಯಾತೀತ ಆಧಾರವನ್ನು ಕಾಪಾಡಿಕೊಳ್ಳುವುದಕ್ಕೆ ಆದ್ಯತೆ ನೀಡಲಾಗಿದೆ. ಇಂತಹ ತಿಳುವಳಿಕೆಯೊಂದಿಗೆ ಪಕ್ಷ ಶಂಕರ ದಯಾಳ ಶರ್ಮ, ಕೆ.ಆರ್. ನಾರಾಯಣನ್ ಮತ್ತು ಪ್ರತಿಭಾ ಪಾಟೀಲ್ ಅವರನ್ನು ಬೆಂಬಲಿಸಿತು. ಇದಕ್ಕೆ ಒಂದೇ ಅಪವಾದವೆಂದರೆ, 2002ರಲ್ಲಿ ಎನ್‌ಡಿಎ ಸರಕಾರ ಇದ್ದಾಗ ನಡೆದ ರಾಷ್ಟ್ರಪತಿ ಚುನಾವಣೆ. ಬಿಜೆಪಿ ಎ.ಪಿ.ಜೆ.ಅಬ್ದುಲ್ ಕಲಾಂ ಅವರ ಉಮೇದುವಾರಿಕೆಯನ್ನು ಪ್ರಾಯೋಜಿಸಿತು. ಕಾಂಗ್ರೆಸ್ ಅದನ್ನು ಬೆಂಬಲಿಸಿತು. ಬಿಜೆಪಿಯೇತರ ಪಾಳೆಯದಿಂದ ಬೇರೆ ಯಾರೂ ಸಮರ್ಥ ಅಭ್ಯರ್ಥಿ ಇಲ್ಲದ್ದರಿಂದ ಎಡಪಕ್ಷಗಳು ತಮ್ಮದೇ ಅಭ್ಯರ್ಥಿಯನ್ನು ನಿಲ್ಲಿಸಿದವು.

ಪ್ರಸಕ್ತ ರಾಷ್ಟ್ರಪತಿ ಚುನಾವಣೆಗಳಲ್ಲಿ ಪ್ರಣಬ್ ಮುಖರ್ಜಿಯವರ ಉಮೇದುವಾರಿಕೆಯಿಂದಾಗಿ ಕಾಂಗ್ರೆಸ್ ಮತ್ತು ಟಿಎಂಸಿ ನಡುವಣ ಒಡಕು ಆಳಗೊಂಡಿದೆ. ಟಿಎಂಸಿ ಡಾ. ಕಲಾಂ ಅವರನ್ನು ಒಬ್ಬ ಅಭ್ಯರ್ಥಿಯಾಗಿ ನಿಲ್ಲಿಸಲು ಪ್ರಯತ್ನಿಸಿತು. ಅದಕ್ಕೆ ಬಿಜೆಪಿಯ ಸಂಪೂರ್ಣ ಬೆಂಬಲವಿತ್ತು. ಅದರಲ್ಲಿ ವಿಫಲವಾದಾಗ ಟಿಎಂಸಿ ಮುಂದೆ ಈಗಿರುವ ಆಯ್ಕೆಯೆಂದರೆ, ಗೈರುಹಾಜರಾಗುವುದು, ಇಲ್ಲವೇ, ತನ್ನ ನಿಲುವು

ಪುಟ 10 ಕ್ಕೆ

ಭೂ ಸುಧಾರಣೆಯ ಪ್ರಾಣ ತೆಗೆಯಲು ಹೊರಟ ಬಿಜೆಪಿ ಸರ್ಕಾರ

> ಕೃಷಿ ಕೂಲಿಕಾರರು, ಬಡ ರೈತರು ಉಳಲು ಭೂಮಿ ಕೊಡಿ ಎಂದು ಕೇಳುತ್ತಿದ್ದರೆ, ರಾಜ್ಯ ಬಿಜೆಪಿ ಸರ್ಕಾರ ಭೂ ಸುಧಾರಣಾ ಕಾಯ್ದೆಗೆ ತರಲು ಹೊರಟಿರುವ ತಿದ್ದುಪಡಿಯು ಭೂ ಸುಧಾರಣೆಯ ಮೂಲ ಉದ್ದೇಶಕ್ಕೆ ಕೊಡಲಿ ಪೆಟ್ಟು ನೀಡುವಂಥದ್ದು.

ಜಿ.ಎನ್. ನಾಗರಾಜ್

ಬಿಜೆಪಿ ಸರ್ಕಾರ ಆಗಲೋ ಈಗಲೋ ಯಾವಾಗ ಬೀಳುತ್ತದೆ. ಯಾವಾಗ ಯಾರು ಮುಖ್ಯಮಂತ್ರಿಗಳು. ಯಾರು ಯಾವ ಖಾತೆಯ ಮಂತ್ರಿಗಳು ಎಂದು ಯಾರಿಗೂ ಗೊತ್ತಿಲ್ಲದ ಗೊಂದಲದ ಗೂಡಾಗಿದೆ. ರೆಸಾರ್ಟುಗಳಲ್ಲಿ, ಮನೆಗಳಲ್ಲಿ, ಬೆಂಗಳೂರಿನಲ್ಲಿ, ಹೈದ್ರಾಬಾದಿನಲ್ಲಿ, ಮದ್ರಾಸಿನಲ್ಲಿ, ಗೋವಾದಲ್ಲಿ, ದೆಹಲಿಯಲ್ಲಿ ಒಳಸಂಚು, ಒಳಒಳ ಸಂಚುಗಳಲ್ಲಿ ಮುಳುಗಿದೆ. ಆದರೆ ಭೂಮಿಯ ಲಪಟಾವಣೆ, ಭೂಮಿಯ ಆಕ್ರಮಣ, ರೈತನನ್ನು ಭೂಮಿಯಿಂದ ಓಡಿಸುವುದು, ಕಂಪನಿಗಳನ್ನು ದೇಶದ, ವಿದೇಶದ ದೊಡ್ಡ, ಅತಿದೊಡ್ಡ ಕಂಪನಿಗಳನ್ನು ಮಡಿ ರಾಜಕಾರಣಿಗಳ ಮಡಿ ಕಂಪನಿಗಳನ್ನು ಆ ನೆಲದಲ್ಲಿ - ಹೊಲದಲ್ಲಿ ಕುತಂತ್ರದಲ್ಲಿ ಮಾತ್ರ ಎಳ್ಳಷ್ಟು ಬಿಡುವು ಕೊಡದೇ ನಿರಂತರವಾಗಿ ಕೆಲಸ ಮಾಡುತ್ತಲೇ ಇದೆ.

ದಿನಕ್ಕೊಂದು ಹೇಳಿಕೆ, ಸುದ್ದಿ ಬರುತ್ತಲೇ ಇದೆ.

ಈ ಎಲ್ಲ ಹೇಳಿಕೆ, ಸುದ್ದಿಗಳಲ್ಲಿ ಒಂದು ಘೋರ ಸುದ್ದಿ, ರಾಜ್ಯದ ಕೋಟಿಗಟ್ಟಲೇ ರೈತರಿಗೆ ಬರಸಿಡಿಲಿನಂತಹ ಸುದ್ದಿ ಭೂ ಸುಧಾರಣಾ ಕಾನೂನಿನ ತಿದ್ದುಪಡಿ ಮಾಡುತ್ತೇವೆಂಬ ಸಚಿವ ಸಂಪುಟದ ನಿರ್ಣಯದ ಘೋಷಣೆ. ವಿಧಾನ ಮಂಡಲದ ಬಜೆಟ್ ಅಧಿವೇಶನದಲ್ಲಿ ನಿರಂತರವಾಗಿ ನಡೆಯುತ್ತಿದ್ದ ಅಬ್ಬರ, ಆರ್ಭಟಗಳ ನಡುವೆಯೇ ಸದ್ದುಗದ್ದಲವಿಲ್ಲದೆ ಶಾಸಕರ ಕೈಯಲ್ಲಿದ್ದ ಭೂ ಸುಧಾರಣಾ ತಿದ್ದುಪಡಿಯ ನಂತರ ಹೊಸ ಆಘಾತ.

'ಕೃಷಿಕ' ಎಂಬ ಪದದ ಅರ್ಥವನ್ನೇ ವಿರೂಪ ಮಾಡಿ ಕೃಷಿ ಮಾಡುವ ಕಂಪನಿಗಳನ್ನು, ಕೃಷಿ ಆಧಾರಿತ ಕೈಗಾರಿಕೆಗಳನ್ನು ಕೃಷಿಕರನನ್ನಾಗಿ ಮಾಡುವ ಭೂ ಸುಧಾರಣಾ ಕಾನೂನಿನ ಈ ತಿದ್ದುಪಡಿಯ ಬಗ್ಗೆ



'ಜನಶಕ್ತಿ'ಯಲ್ಲಿ ಪ್ರಕಟವಾದ ಲೇಖನವನ್ನು ತಾವು ಈಗಾಗಲೇ ಓದಿದ್ದೀರಿ.

ಕೃಷಿಕ ಅಥವಾ ರೈತನ ಜಾಗದಲ್ಲಿ ಕಂಪನಿಗಳನ್ನು ಸ್ಥಾಪಿಸುವ ಈ ತಿದ್ದುಪಡಿ ಸಾಲದೆಂಬಂತೆ ಭೂ ಸುಧಾರಣೆಯ ಜೀವವನ್ನೇ ತೆಗೆಯುವ ಕೆಲಸಕ್ಕೆ ಬಿಜೆಪಿ ಕೈಹಾಕಿದೆ.

ಭೂ ಸುಧಾರಣಾ ಕ್ರಮದ ಮುಖ್ಯ ಧ್ಯೇಯ

1) ಉಳುವವನೇ ಹೊಲದೊಡೆಯ ನನ್ನಾಗಿಸಲು ಗೇಣಿದಾರರಿಗೆ ಭೂ ಒಡೆತನ ನೀಡುವ ಗೇಣಿ ನಿಯಂತ್ರಣ ಹಾಗೂ ನಿಷೇಧ ಕಾನೂನು
2) ಹಳ್ಳಿಗಾಡಿನಲ್ಲಿ ಪ್ರಬಲವಾಗಿರುವ ಪ್ರಜಾಪ್ರಭುತ್ವಕ್ಕೆ ಕಂಟಕವಾಗಿರುವ ಪಾಳೆಯಗಾರಿ ವ್ಯವಸ್ಥೆಯನ್ನು ಕೊನೆಗಾಣಿಸಲು ಹಾಗೂ ಭೂ ಹೀನರಿಗೆ ಭೂಮಿ ಹಂಚಲು ಭೂಮಿತಿ ಕಾನೂನು.
3) ರೈತರ ಭೂಮಿಯನ್ನು ಕಪ್ಪುಹಣದ ಹಣ ಹದ್ದುಗಳು, ಬಡ್ಡಿ ಸಾಹುಕಾರರು ಹಾಗೂ ಬಂಡವಾಳ ಶಾಹಿಗಳು ವಶಪಡಿಸಿಕೊಳ್ಳಲಾಗದಂತೆ ಕೃಷಿಯೇತರರಿಗೆ ಕೃಷಿ ಭೂಮಿ ವರ್ಗಾವಣೆ ನಿಷೇಧ ಕಾನೂನು .

ಬಿಜೆಪಿ ಸರ್ಕಾರದ ಈ ಮೂರು ಕ್ರಮಗಳನ್ನು ಏಕಕಾಲಕ್ಕೆ ನಿಷ್ಕ್ರಿಯಗೊಳಿಸ ಹೊರಟಿದೆ. ಹೀಗೆ ಭೂ ಸುಧಾರಣೆಯ ಮೂರು ಪ್ರಾಣಗಳನ್ನು ತೆಗೆಯುವ ಕೆಲಸಕ್ಕೆ ಕೈಹಾಕಿದೆ. ಭೂಸುಧಾರಣೆಗಳಿಗಾಗಿ 1930 ರ ದಶಕದಿಂದ ಆರಂಭವಾಗಿ 1970 ರ ದಶಕದ ವರೆಗೂ 5 ದಶಕಗಳ ಕಾಲ ಸುಧೀರ್ಘವಾಗಿ ನಡೆದ ಹೋರಾಟಗಳ ಫಲಗಳನ್ನು ಏಕಕಾಲಕ್ಕೆ ಧ್ವಂಸ ಮಾಡಲು ಹೊರಟಿದೆ.

ಗೇಣಿ ನಿಯಂತ್ರಣ ಹಾಗೂ ನಿಷೇಧ ಕಾನೂನು

1974 ರ ಸಮಯದಲ್ಲಿ ಕರ್ನಾಟಕದಲ್ಲಿ

ಪುಟ 10 ಕ್ಕೆ

ಬಿಜೆಪಿ ನಾಯಕರ ಭೂಮಿ ಜಪ

"ಬೆಳಗಾಗಿ ನಾನೆದ್ದು ಯಾರ್ಯಾರ
ನೆನೆಯಲಿ
ಎಳ್ಳು ಜೀರಿಗೆ ಬೆಳೆಯೋಳ
ಭೂಮಿತಾಯ
ಎದ್ದೊಂದು ಗಳಿಗೆ ನೆನೆದೇನ"

ಇದು ಸಾವಿರಾರು ವರ್ಷಗಳಿಂದ ನಮ್ಮ ಗ್ರಾಮೀಣ ಜನತೆ ಬೆಳಗಾಗೆದ್ದು ಭೂಮಿತಾಯಿಯನ್ನು ನೆನೆಯುವ ಪರಿ. ನಮ್ಮ ರಾಜ್ಯದ ಬಿಜೆಪಿ ಸರ್ಕಾರವೂ ಕೂಡಾ ಬೆಳಗ್ಗೆ ಮಾತ್ರವಲ್ಲ ಬೆಳಗಿನಿಂದ ಸಂಜೆಯವರೆಗೂ ಭೂಮಿಯನ್ನೇ ನೆನೆಸುತ್ತದೆ. ಭೂಮಿಯದೇ ಜಪ ಮಾಡುತ್ತದೆ.

ಬೆಂಗಳೂರು ಸುತ್ತಮುತ್ತಲಿನ ಭೂಮಿ ದೇವನಹಳ್ಳಿ ವಿಮಾನ ನಿಲ್ದಾಣದ ಸುತ್ತಮುತ್ತ ಮೂರು ಜಿಲ್ಲೆಗಳ ಭೂಮಿ, ಬೆಂಗಳೂರಿನಿಂದ ಮೈಸೂರುವರೆಗಿನ ನೈಸ್ ರಸ್ತೆಯ ಆಚೀಚೆಯ ನಾಲ್ಕು ಜಿಲ್ಲೆಗಳ ನೈಸಾದ ಭೂಮಿ, ಭೂ ಬ್ಯಾಂಕ್ ಎಂಬ ಹೆಸರಿನಲ್ಲಿ ವಶಪಡಿಸಿಕೊಳ್ಳುತ್ತಿರುವ ಭೂಮಿ, ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಬಹುರಾಷ್ಟ್ರೀಯ, ರಾಷ್ಟ್ರೀಯ ಕಂಪನಿಗಳಿಗೆ ಒಪ್ಪಂದ ಮಾಡಿಕೊಟ್ಟ ಭೂಮಿ, ಕೃಷಿ ಬಂಡವಾಳ ಹೂಡಿಕೆದಾರರಿಗೆ ಭರವಸೆ 'ಕೊಟ್ಟ ಭೂಮಿ, ವಿದ್ಯುತ್ ತಯಾರಿಕಾ ಘಟಕಗಳಿಗೆ ನೀಡಲೆಂದು ತವಕಿಸುತ್ತಿರುವ ಭೂಮಿ.

ಅಭಿವೃದ್ಧಿಯ ಹೆಸರಿನಲ್ಲಿ ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಈ ಭೂಮಿಯ ಜೊತೆಗೆ ಗಣಿ ಪರವಾನಗಿ ನೀಡುತ್ತಿರುವ ಭೂಮಿ, ಅರಣ್ಯ ಭೂಮಿ, ಯಡಿಯೂರಪ್ಪನವರು ಸಿಕ್ಕಿಹಾಕಿಕೊಂಡಿರುವ ಹಲವು ಡಿನೋಟಿಫಿಕೇಷನ್ ಪ್ರಕರಣಗಳ ಭೂಮಿ ಯಡಿಯೂರಪ್ಪನವರ ಹತ್ತಿರದ ಸಹಚರರಾದ ಅವರಿಗಿಂತ ಮೊದಲೆ ಜೈಲು ಕಂಡ ಕಟ್ಟಾ ಸುಬ್ರಹ್ಮಣ್ಯನಾಯ್ಡು, ಅವರ ಮಗ, ಪತ್ನಿ ಇವರ ಕಳ್ಳ ವ್ಯವಹಾರದ ಭೂಮಿ, ಇವರಿಗಿಂತ ಮೊದಲೇ ರಾಜಿನಾಮೆ ಸಲ್ಲಿಸಬೇಕಾಗಿ ಬಂದ ಕೃಷ್ಣಯ್ಯ ಶೆಟ್ಟಿಯವರ ದಗಾಕೋರ ವ್ಯವಹಾರದ ಭೂಮಿ, ಇವರ ಜೊತೆಗೆ ಕುಪ್ರಸಿದ್ಧನಾದ ಸುಧಾಕರರೆಡ್ಡಿಯವರ ಕಳ್ಳ ವ್ಯವಹಾರಗಳ ಭೂಮಿ, ಇನ್ನೂ ಅಧಿಕಾರದಲ್ಲಿಯೇ ಉಳಿದಿರುವ ಮಂತ್ರಿ ಅಶೋಕ್ ರವರ ಡಿನೋಟಿಫಿಕೇಷನ್ ವ್ಯವಹಾರದ ಭೂಮಿ, ಜನಾರ್ಧನರೆಡ್ಡಿ, ಕರುಣಾಕರ ರೆಡ್ಡಿ, ಸೋಮಶೇಖರರೆಡ್ಡಿ, ಶ್ರೀರಾಮಲು ಬಳಗ ಕಬಳಿಸಿದ ಗಣಿ ಕಪ್ಪದ ಹೊರತಾಗಿಯು ಆಕ್ರಮಿಸಿಕೊಂಡಿರುವ ಬಳ್ಳಾರಿ ನಗರದ ಎಕರೆಗಟ್ಟಲೇ ಭೂಮಿ, ಹಾಗೂ ಬಳ್ಳಾರಿ ಜಿಲ್ಲೆಯ ಸಾವಿರಾರು ಎಕರೆ ಭೂಮಿ ಕೈಗಾರಿಕೆಗಳ ಸಚಿವ ಮುರುಗೇಶ ನಿರಾಣಿ ಮತ್ತು ಅವರ ಆಪ್ತ ಬಳಗ ಕೈಗಾರಿಕೆಗಳ ಹೆಸರಿನಲ್ಲಿ ಪಡೆದುಕೊಳ್ಳುತ್ತಿರುವ ಭೂಮಿ, ಶಿವಮೊಗ್ಗ- ಭದ್ರಾವತಿನಗರಗಳ ಸುತ್ತ ಹಲವು ನೆವದಲ್ಲಿ ಯಡಿಯೂರಪ್ಪ ಅವರ ಅಪರಿಮಿತ ಕುಟುಂಬ , ಈಶ್ವರಪ್ಪ ಮೊದಲದವರು ಪಡೆದುಕೊಂಡ ಭೂಮಿ, ಮಂಗಳೂರು ನಗರ ಹಾಗೂ ಸುತ್ತಲೂ ಕೃಷ್ಣ ಪಾಲೇಮಾರ್ ರವರು ಸೈಟುಮಾಡಿ ಮಾರುತ್ತಿರುವ ಭೂಮಿ, ರಾಮದಾಸ್ ರವರು ಮೈಸೂರಿನ ಸುತ್ತ ಹೊಲಗೆಡಿಸುತ್ತಿರುವ ಸೈಟುಗಳ ಭೂಮಿ ಹೀಗೆ ಹತ್ತೇ, ಇಪ್ಪತ್ತೇ, ನೂರಾರು ಪ್ರಕರಣಗಳ ಲಕ್ಷಾಂತರ ಎಕರೆ ಭೂಮಿ.

ಭೂಮಿ, ಭೂಮಿ, ಭೂಮಿ ಹಗಲೂ ಇರುಳೂ ಎಚ್ಚರದಲ್ಲಿಯೂ, ಕನಸಿನಲ್ಲಿಯೂ, ಭೂಮಿಯದೇ ಜಪ.

ಭೂಮಿಯ ಬಗ್ಗೆ ಅಪಾರ ಪ್ರೀತಿ, ಪ್ರೇಮ, ಲವ್ವು ಬಿಜೆಪಿಯವರಿಗೆ. ಏಕೆಂದರೆ ಅವರಲ್ಲಿ ಬಹುಭಾಗ ಬೆಳಗ್ಗೆದ್ದು ಚೆಡ್ಡಿ ಧರಿಸಿ 'ಸದಾ ವತ್ಸಲೆ ಮಾತೃ ಭೂಮೇ' ಎಂದು ಮಂತ್ರ ಜಪಿಸುತ್ತಾ ಬಂದವರೇ ಅಲ್ಲವೇ ಆರೆಸ್ಸೆಸ್ ಎಂಬ ಗರಡಿಯಲ್ಲಿ.

ಈಗ ತಮ್ಮನ್ನು ವತ್ಸಲೆಯಾಗಿ ನೂರಾರುಕೋಟಿಗಳ ಅಧಿಪತಿಗಳನ್ನಾಗಿ ಮಾಡಲು ಅಧಿಕಾರ ಸಿಕ್ಕಿರುವಾಗ ಭೂಮಿಯನ್ನು ಹಾಗೇ ಬಿಡುವುದುಂಟೆ? ಆದರೆ ಒಂದು ಪ್ರಮುಖ ವ್ಯತ್ಯಾಸವಿದೆ ನಮ್ಮ ರೈತಾಪಿ ಜನರು ಬೆಳಗ್ಗೆದ್ದು ನೆನೆಯುವ ಭೂಮಿ- ಎಳ್ಳು, ಜೀರಿಗೆ ಆಹಾರ ಬಟ್ಟೆ ಔಷಧಿಯನ್ನು ನೀಡಿ ಪೊರೆಯುವ ತಾಯಿ. ಆದರೆ ಈ ಬಿಜೆಪಿಯ ಹಣ ಹದ್ದುಗಳಿಗೆ ???

ರಾಷ್ಟ್ರಪತಿ ಚುನಾವಣೆ:.........

ಪುಟ 8 ರಿಂದ

ಬದಲಿಸಿ ಪ್ರಣಬ್ ಮುಖರ್ಜಿಯವರನ್ನು ಬೆಂಬಲಿಸುವುದು. ಆಳುವ ಮೈತ್ರಿಕೂಟದೊಳಗಿನ ಒಡಕು ಸಿಪಿಐ(ಎಂ) ತನ್ನ ನಿಲುವು ನಿರ್ಧರಿಸುವಾಗ ಪರಿಗಣನೆಗೆ ತಗೊಂಡ ಒಂದು ಸಂಗತಿ.

ಸಮಾಜವಾದಿ ಪಕ್ಷ, ಬಿಎಸ್‌ಪಿ ಮತ್ತು ಜೆಡಿ(ಯು) ಮುಂತಾದ ಹಲವು ಯುಪಿಯೇತರ ಪಕ್ಷಗಳು ಕೂಡ ಪ್ರಣಬ್ ಮುಖರ್ಜಿಯವರಿಗೆ ಬೆಂಬಲವನ್ನು ಪ್ರಕಟಿಸಿವೆ ಎಂಬ ಸಂಗತಿಯನ್ನೂ ಸಿಪಿಐ(ಎಂ) ಗಣನೆಗೆ ತೆಗೆದುಕೊಂಡಿದೆ. ಇತರ ಜಾತ್ಯಾತೀತ ಪಕ್ಷಗಳು ಬೆಂಬಲಿಸಲು ಸಿದ್ಧವಿದ್ದಿದ್ದರೆ ಸಿಪಿಐ(ಎಂ) ಇನ್ನೊಬ್ಬ ಅಭ್ಯರ್ಥಿಯನ್ನು ಬೆಂಬಲಿಸುವ ಸಾಧ್ಯತೆಯನ್ನು ಪರಿಶೀಲಿಸ ಬಹುದಾಗಿತ್ತು. ಆದರೆ ಸಂಗ್ಮರವರ ಉಮೇದುವಾರಿಕೆಯನ್ನು ಪ್ರಾಯೋಜಿಸಿದ ಎಐಎಡಿಎಂಕೆ ಮತ್ತು ಬಿಜೆಡಿ ಬಿಟ್ಟು ಇತರ ಹೆಚ್ಚಿನ ಪಕ್ಷಗಳು ಯುಪಿಎ ಅಭ್ಯರ್ಥಿಯನ್ನು ಬೆಂಬಲಿಸುವ ನಿಲುವಿನತ್ತ ಸರಿದವು. ಹೀಗೆ ಪ್ರಣಬ್ ಮುಖರ್ಜಿ ಅತಿ ಹೆಚ್ಚು ವ್ಯಾಪಕ ಒಪ್ಪಿಗೆ ಇರುವ ಅಭ್ಯರ್ಥಿಯಾದರು. ಈ ಸಂಗತಿಯನ್ನೂ ಗಣನೆಗೆ ತಗೊಳ್ಳಬೇಕಾಗಿದೆ, ವಿಶೇಷವಾಗಿ, ಡಾ.ಕಲಾಂ ಸ್ಪರ್ಧಿಸುವಂತೆ ಮಾಡಲು ಬಿಜೆಪಿ ಮತ್ತು ಮಮತಾ ಬ್ಯಾನರ್ಜಿ ವಿಪರೀತ ಪ್ರಯತ್ನ ನಡೆಸಿರುವ ಸಂದರ್ಭದಲ್ಲಿ. ಈ ಪ್ರಯತ್ನದಲ್ಲಿ ಭಾಗಿಯಾಗಲು, ಮುಲಾಯಂ ಸಿಂಗ್ ಮತ್ತು ಸಮಾಜವಾದಿ ಪಕ್ಷ, 2002ರಲ್ಲಿ ಕಲಾಂ ತಮ್ಮ ಆಯ್ಕೆಯಾಗಿದ್ದರೂ ಕೂಡ ನಿರಾಕರಿಸಿರುವುದು ಒಂದು ಮಹತ್ವದ ಸಂಗತಿ.

ಯುಪಿಎ ಅಭ್ಯರ್ಥಿಯನ್ನು ಹಲವು ಪಕ್ಷಗಳು ಬೆಂಬಲಿಸಿದ್ದರಿಂದ ಅದನ್ನು ಬಲಿಷ್ಟಗೊಳಿಸಿದಂತೇನೂ ಆಗುವುದಿಲ್ಲ. ಬದಲಾಗಿ, ತನ್ನದೇ ಅಭ್ಯರ್ಥಿಯನ್ನು ಗೆಲ್ಲಿಸಲು ಕಾಂಗ್ರೆಸ್ ಹೊರಗಣ ಶಕ್ತಿಗಳ ಮೇಲೆ ಅವಲಂಬಿಸಬೇಕಾಗಿದೆಯೆಂಬುದು ಎದ್ದು ಕಾಣುವಂತಾಗುತ್ತದೆ. ಅಲ್ಲದೆ ಈ ಶಕ್ತಿಗಳು ಕಾಂಗ್ರೆಸಿನೊಂದಿಗೆ ಸಮಾನ ಸ್ತರದಲ್ಲಿ ವ್ಯವಹರಿಸಬೇಕಾಗುತ್ತದೆ, ಕಾಂಗ್ರೆಸ್ ಅವರ ಮೇಲೆ ಸವಾರಿ ಮಾಡಲಾಗುವುದಿಲ್ಲ ಎಂಬುದನ್ನು ಕೂಡ ಇದು ಸೂಚಿಸುತ್ತದೆ.

ಸಮಾನ ದೂರ ಅಲ್ಲ

ಕಾಂಗ್ರೆಸ್ ಮತ್ತು ಬಿಜೆಪಿಯ ವಿರುದ್ಧ ಹೋರಾಟದ ರಾಜಕೀಯ ಮಾರ್ಗವನ್ನು ಅನುಸರಿಸುವುದೆಂದರೆ ಈ ಎರಡೂ ಪಕ್ಷಗಳಿಂದ ಎಲ್ಲ ವಿಷಯಗಳಲ್ಲೂ ಸಮಾನ ದೂರದಲ್ಲಿ ಇರುವಂತೆ ನೋಡಿಕೊಳ್ಳಬೇಕು ಎಂದು ಅಲ್ಲ. ಉದಾಹರಣೆಗೆ, ರಾಷ್ಟ್ರಪತಿಗಳನ್ನು ಆರಿಸುವ ಪ್ರಶ್ನೆಯಲ್ಲಿ, ಕೇವಲ ಪ್ರಧಾನ ಬೂರ್ಜ್ವಾ ಪಕ್ಷಗಳು ಮಾತ್ರವೇ ಒಬ್ಬ ರಾಷ್ಟ್ರಪತಿಯನ್ನು ಆರಿಸಬಲ್ಲವು. ಹಾಗಿದ್ದಾಗ್ಯೂ ಪ್ರಭುತ್ವದ ಮುಖ್ಯಸ್ಥರು ದೃಢ ಜಾತ್ಯಾತೀತರಾಗಿರಬೇಕು, ಯಾವುದೇ ರೀತಿಯಲ್ಲಿ ಬಿಜೆಪಿಯ ಪ್ರಭಾವಕ್ಕೆ ಒಳಗಾಗುವಂತವರಾಗಿರಬಾರದು ಎಂಬುದು ಮುಖ್ಯ ಅಂಶವಾದ್ದರಿಂದ ಸಿಪಿಐ(ಎಂ)ನ ಒತ್ತು ಒಬ್ಬ ಬಿಜೆಪಿ- ಪ್ರಾಯೋಜಿತ ಅಭ್ಯರ್ಥಿಯ ವಿರುದ್ಧವೇ ಇರಬೇಕಾಗುತ್ತದೆ. ಆರ್ಥಿಕ ಧೋರಣೆಗಳ ವಿರುದ್ಧ ಹೋರಾಟದ ಪ್ರಶ್ನೆ ಬಂದಾಗ ಅದು ಕಾಂಗ್ರೆಸ್ ಮತ್ತು ಯುಪಿಎ ಸರಕಾರದ ವಿರುದ್ಧ ಇರುತ್ತದೆ. 'ಸಮಾನ ದೂರ'ದ ಭಕ್ತರು ರಾಷ್ಟ್ರಪತಿ ಆಯ್ಕೆಯ ಪ್ರಶ್ನೆಯಲ್ಲಿ ಸಿಪಿಐ(ಎಂ) ಕಾಂಗ್ರೆಸ್ ನೇತೃತ್ವದ ಸರಕಾರವನ್ನು ಬೆಂಬಲಿಸುತ್ತಿದೆ ಎಂದು ಆಪಾದಿಸ ಬಲ್ಲರಾದರೆ, ಕಾಂಗ್ರೆಸಿನ ಬೆಲೆಯೇರಿಕೆ ಮತ್ತು ಇತರ ಜನ-ವಿರೋಧಿ ಕ್ರಮಗಳ ವಿರುದ್ಧ ಹೋರಾಡುವಲ್ಲಿ ಮತ್ತು ಸಾಮೂಹಿಕ ಚಳುವಳಿಗಳನ್ನು ಬೆಳೆಸುವಲ್ಲಿ ಬಿಜೆಪಿಯೊಂದಿಗೆ ಸಿಪಿಐ(ಎಂ) ಕೈಜೋಡಿಸಿದೆ ಎಂದೂ ಆಪಾದಿಸಬಹುದು. ಸಿಪಿಐ(ಎಂ)ನ ರಾಜಕೀಯ ಮಾರ್ಗದ ಈ ರೀತಿಯ ವ್ಯಾಖ್ಯೆ ಸರಿಯಲ್ಲ.

ಪ್ರಣಬ್ ಮುಖರ್ಜಿಯವರನ್ನು ಸಂಪುಟದಿಂದ ಮತ್ತು ಹಣಕಾಸು ಇಲಾಖೆಯಿಂದ ತೆಗೆಯುವುದರಿಂದ ಆರ್ಥಿಕ ಧೋರಣೆಗಳ ದಿಕ್ಕೇನೂ ಬದಲಾಗುವುದಿಲ್ಲ. ಪಿ.ಚಿದಂಬರಂ ಇರಲಿ, ಪ್ರಣಬ್ ಮುಖರ್ಜಿಯಿರಲಿ, ಅಥವ ಅವರಿಂದ ಬೇರೆ ಯಾರೇ ಅಧಿಕಾರ ವಹಿಸಿಕೊಳ್ಳಲಿ, ನವ-ಉದಾರವಾದಿ ಧೋರಣೆಗಳಂತೂ ಮುಂದುವರೆಯುತ್ತವೆ, ಏಕೆಂದರೆ ಕಾಂಗ್ರೆಸ್ ಅನುಸರಿಸುತ್ತಿರುವುದು ಆಳುವ ವರ್ಗಗಳ ಧೋರಣೆಗಳನ್ನು. ವಾಸ್ತವವಾಗಿ, ನವ-ಉದಾರವಾದಿ ಸುಧಾರಣೆಗಳನ್ನು ಮುಂದೊತ್ತಲು ಹೊಸ-ಹೊಸ ಪ್ರಯತ್ನಗಳು ನಡೆಯಬಹುದು. ದೊಡ್ಡ ಬಂಡವಾಳಿಗರು ಮತ್ತು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಕೂಗು ಇದೇ ತಾನೇ?

ಬಹುಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಹೂಡಿಕೆಗೆ ಅವಕಾಶ ನೀಡುವುದು ಈ ನವೀಕೃತ ಒತ್ತಿನ ಭಾಗವೇ ಆಗಿದೆ. ಇದು ನಾಲ್ಕು ಕೋಟಿ ಜನಗಳ ಜೀವನಾಧಾರವನ್ನು ತಟ್ಟುವ ಒಂದು ಪ್ರಧಾನ ಪ್ರಶ್ನೆ. ಇದನ್ನು ಪ್ರತಿರೋಧಿಸಿ ಸೋಲಿಸಲೇ ಬೇಕು. ಇದು ಯುಪಿಎ ಹೊರಗಿನ ಎಲ್ಲ ರಾಜಕೀಯ ಪಕ್ಷಗಳನ್ನು ಅಣಿನೆರೆಸುವ ಮೂಲಕ ಮಾತ್ರ ಸಾಧ್ಯ. ಇದರಲ್ಲಿ ಯುಪಿಎಯನ್ನು ಬೆಂಬಲಿಸುವ ಪಕ್ಷಗಳನ್ನೂ ಒಳಗೊಳ್ಳಬೇಕು ಮತ್ತು ಎನ್‌ಡಿಎಗೆ ಸೇರಿದ ಪಕ್ಷಗಳನ್ನೂ ಒಳಗೊಳ್ಳಬೇಕು. ಸಿಪಿಐ(ಎಂ) ಇಲ್ಲಿ ವಾಲ್‌ಮಾರ್ಟ್ ಮತ್ತಿತರರು ತಮ್ಮ ಅಂಗಡಿ ತೆರೆಯದಂತೆ ನಿಲ್ಲಿಸುವ ಒಂದು ಗಟ್ಟಿಯಾದ ಶಕ್ತಿಶಾಲಿ ಆಂದೋಲನವನ್ನು ಬಯಸುತ್ತದೆ, ಎಲ್ಲ ಪ್ರತಿಪಕ್ಷಗಳು ಒಂದು ಐಕ್ಯ ನಿಲುವು ತಳೆಯಬೇಕು ಎಂದು ಬಯಸುತ್ತದೆ. ಆದ್ದರಿಂದ ರಾಷ್ಟ್ರಪತಿ ಅಭ್ಯರ್ಥಿಯನ್ನು ಆರಿಸುವ ಬಗ್ಗೆ ತಳೆವ ನಿಲುವು ಮತ್ತು ನವ-ಉದಾರವಾದದ ವಿರುದ್ಧ ಹೋರಾಟದ ಕಾರ್ಯತಂತ್ರದ ನಡುವೆ ಗೊಂದಲ ಮಾಡಿಕೊಳ್ಳುವುದು ತಪ್ಪಾಗುತ್ತದೆ.

ಗೈರುಹಾಜರಾಗುವ ಬಗ್ಗೆ

ಸಿಪಿಐ(ಎಂ) ರಾಷ್ಟ್ರಪತಿ ಚುನಾವಣೆಗಳಲ್ಲಿ ಗೈರುಹಾಜರಾಗಬಾರದೇಕೆ ಎಂಬ ಪ್ರಶ್ನೆಯನ್ನು ಕೇಳಲಾಗುತ್ತಿದೆ. ಯುಪಿಎ ಮತ್ತು ಬಿಜೆಪಿ ಬೆಂಬಲಿತ ಅಭ್ಯರ್ಥಿ ಇವರಲ್ಲಿ ಯಾರಿಗೂ ಮತ ಹಾಕದೇ ಇರುವ ನಿಲುವನ್ನು ಆಯ್ದುಕೊಳ್ಳಬಹುದಿತ್ತು ಎನ್ನಲಾಗುತ್ತಿದೆ.

ಇಲ್ಲಿ ಗೈರುಹಾಜರಿ ಎಂದರೆ ಪಶ್ಚಿಮ ಬಂಗಾಲದಲ್ಲಿ ಮಮತಾ ಬ್ಯಾನರ್ಜಿ ಮತ್ತು ಟಿಎಂಸಿ ಸಾಲಿನಲ್ಲಿ ನಿಂತಂತಾಗುತ್ತದೆ. ಇದು ರಾಜಕೀಯವಾಗಿ ಹಾನಿಕಾರಕ ಮತ್ತು ಸ್ವೀಕಾರಾರ್ಹವಲ್ಲ. ಟಿಎಂಸಿ ಪಶ್ಚಿಮ ಬಂಗಾಲದಲ್ಲಿ ಸಿಪಿಐ(ಎಂ) ಮೇಲೆ ಒಂದು ಹಿಂಸಾತ್ಮಕ ಭಯೋತ್ಪಾದನೆ ನಡೆಸುತ್ತಿದೆ. ವಿಧಾನಸಭಾ ಚುನಾವಣೆಗಳ ನಂತರ ನಮ್ಮ ಪಕ್ಷದ ಮತ್ತು ಎಡರಂಗದ ಅರವತ್ತೆಂಟು ಸದಸ್ಯರು ಮತ್ತು ಬೆಂಬಲಿಗರನ್ನು ಅವರು ಕೊಂದಿದ್ದಾರೆ. ಪ್ರಜಾಪ್ರಭುತ್ವದ ಮೇಲೆ ದಾಳಿ ಎಲ್ಲ ವಿಭಾಗಗಳಿಗೂ ವಿಸ್ತರಿಸಿದೆ. ಕಾಂಗ್ರೆಸನ್ನೂ ಅದು ಬಿಟ್ಟಿಲ್ಲ. ಟಿಎಂಸಿ ತಳೆದ ನಿಲುವನ್ನೇ ತಳೆಯುವುದು ಪಶ್ಚಿಮ ಬಂಗಾಲದಲ್ಲಿ ಟಿಎಂಸಿ ವಿರುದ್ಧ ಹೋರಾಟಕ್ಕೆ ಮತ್ತು ಎಡಶಕ್ತಿಗಳ ಹಿತಕ್ಕೆ ಮಾರಕವಾಗುತ್ತದಷ್ಟೇ. ಸಿಪಿಐ(ಎಂ) ಅತಿ ದೊಡ್ಡ ಎಡಪಕ್ಷವಾದ್ದರಿಂದ ಪಶ್ಚಿಮ ಬಂಗಾಲದಲ್ಲಿ ದಾಳಿಗೊಳಗಾಗಿರುವ ದುಡಿಯುವ ಜನತೆಯ ಹಕ್ಕುಗಳ ರಕ್ಷಣೆಯಲ್ಲಿ ಪ್ರಧಾನ ಜವಾಬ್ದಾರಿ ಹೊಂದಿದೆ. ಎಡಶಕ್ತಿಗಳ ಅತ್ಯಂತ ಬಲಿಷ್ಟ ನೆಲೆಯನ್ನು ರಕ್ಷಿಸಿಕೊಳ್ಳುವುದು ಪಕ್ಷದ ಮಹತ್ವದ ಕೆಲಸಗಳಲ್ಲಿ ಒಂದಾಗಿದ್ದು, ಇದು ರಾಷ್ಟ್ರಮಟ್ಟದಲ್ಲಿ ಪಕ್ಷ ಮತ್ತು ಎಡಶಕ್ತಿಗಳ ಮುನ್ನಡೆಗೆ ನೆರವಾಗುತ್ತದೆ.

ಇಷ್ಟೇ ಅಲ್ಲ, ಇದು ಪಶ್ಚಿಮ ಬಂಗಾಲದ ಪ್ರಶ್ನೆ ಮಾತ್ರವೇ ಅಲ್ಲ. ರಾಷ್ಟ್ರೀಯ ಮಟ್ಟದಲ್ಲಿ ಗೈರುಹಾಜರಿಯೆಂದರೆ ಪಕ್ಷ ಕಣದಿಂದ ಹಿಂದೆ ಸರಿದಂತಾಗುತ್ತದೆ. ಇದು ರಾಜಕೀಯ ರಂಗದಲ್ಲಿ ಕಾಣುತ್ತಿರುವ ಬೆಳವಣಿಗೆಗಳಲ್ಲಿ ಪಕ್ಷದ ಮಧ್ಯಪ್ರವೇಶವನ್ನು ಮೊಟಕುಗೊಳಿಸುತ್ತದೆ.

ಆಳುವ ವರ್ಗಗಳು ಎಡಶಕ್ತಿಗಳನ್ನು ಏಕಾಂಗಿಯಾಗಿಸುವ ಉದ್ದೇಶದಿಂದ ಅವುಗಳ ಮೇಲೆ ನಿರಂತರ ದಾಳಿ ನಡೆಸುತ್ತಿವೆ. 2009ರಿಂದೀಚೆಗೆ ಸಿಪಿಐ(ಎಂ) ಮತ್ತು ಎಡಶಕ್ತಿಗಳು ದುರ್ಬಲಗೊಂಡಿವೆ. ಆಳುವ ವರ್ಗಗಳು ತಮ್ಮ ವೈಷಮ್ಯಪೂರ್ಣ ನಿಲುವನ್ನು ನಿಲ್ಲಿಸುತ್ತವೆ ಎಂಬ ಭ್ರಮೆಯನ್ನೇನೂ ಇಟ್ಟುಕೊಳ್ಳದೆ ಮತ್ತು ನವ-ಉದಾರವಾದಿ ಧೋರಣೆಗಳ ವಿರುದ್ಧ ಎಡಶಕ್ತಿಗಳ ಎಂದೂ ಕುಂಠಿತವಾಗದ ವಿರೋಧದ ಹಿನ್ನೆಲೆಯಲ್ಲಿ ಆಳುವ ಮೈತ್ರಿಕೂಟದೊಳಗಿನ ಬೂರ್ಜ್ವಾ ಪಕ್ಷಗಳ ನಡುವಿನ ತಿಕ್ಕಾಟಗಳನ್ನು, ಒಡಕುಗಳನ್ನು ಬಳಸಿಕೊಳ್ಳುವ ಅಗತ್ಯವಿದೆ. ಗೈರುಹಾಜರಿ ಇಲ್ಲಿ ನೆರವಾಗುವುದಿಲ್ಲ.

ಎಡ ಪಕ್ಷಗಳ ನಿಲುವುಗಳು

ರಾಷ್ಟ್ರಪತಿ ಚುನಾವಣೆಯಲ್ಲಿ ಎಡಪಕ್ಷಗಳು ಒಂದು ಸಮಾನ ನಿಲುವು ತಳೆದಿಲ್ಲ. ಸಿಪಿಐ(ಎಂ) ಮತ್ತು ಅಖಿಲ ಭಾರತ ಫಾರ್ವರ್ಡ್ ಬ್ಲಾಕ್ ಪ್ರಣಬ್ ಮುಖರ್ಜಿಯವರ ಉಮೇದುವಾರಿಕೆಯನ್ನು ಬೆಂಬಲಿಸಲು ನಿರ್ಧರಿಸಿದರೆ, ಸಿಪಿಐ ಮತ್ತು ಆರ್‌ಎಸ್‌ಪಿ ಗೈರು ಹಾಜರಾಗಲು ನಿರ್ಧರಿಸಿವೆ. ಈ ಹಿಂದೆಯೂ, ರಾಷ್ಟ್ರಪತಿ ಚುನಾವಣೆಗಳಲ್ಲಿ ಎಡಪಕ್ಷಗಳು ಒಂದು ಸಮಾನ ನಿಲುವಿಗೆ ಬರಲಾಗದ ಸಂದರ್ಭಗಳಿದ್ದವು. ಉದಾಹರಣೆಗೆ, 1992 ರ ಚುನಾವಣೆಗಳ ನಂತರ ಆರ್‌ಎಸ್‌ಪಿ ಆಗಾಗ ಕಾಂಗ್ರೆಸ್ ಅಭ್ಯರ್ಥಿಯನ್ನು ಬೆಂಬಲಿಸಲು ನಿರಾಕರಿಸಿದೆ.

ಈ ಪ್ರಶ್ನೆಯ ಮೇಲೆ ಎಡಪಕ್ಷಗಳು ತಳೆದಿರುವ ಭಿನ್ನ ನಿಲುವುಗಳು ಎಡ ಐಕ್ಯತೆಗೇನೂ ಧಕ್ಕೆ ತರುವುದಿಲ್ಲ. ಪ್ರಮುಖ ರಾಜಕೀಯ ಮತ್ತು ಆರ್ಥಿಕ ಧೋರಣೆಗಳ ವಿಷಯದಲ್ಲಿ ಎಡಪಕ್ಷಗಳ ನಡುವೆ ಒಂದು ಸಮಾನ ತಿಳುವಳಿಕೆ ಇದೆ. ಇದರ ಆಧಾರದಲ್ಲಿಯೇ ಎಡಪಕ್ಷಗಳು ಆಹಾರ ಭದ್ರತೆ ಮತ್ತು ಸಾರ್ವತ್ರಿಕ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸ್ಥಾಪಿಸುವುದಕ್ಕಾಗಿ ಒಂದು ಐಕ್ಯ ಪ್ರಚಾರಾಂದೋಲನ ಮತ್ತು ಚಳುವಳಿಗೆ ಕರೆ ನೀಡಿರುವುದು. ಜುಲೈ 1ರಿಂದ ಇಂತಹ ಬ[illegible] ಪ್ರಚಾರಾಂದೋಲನ ಆರಂಭವಾಗುತ್ತಿದೆ.

...ಪ್ರಾಣ ತೆಗೆಯಲು ಹೊರಟ ಬಿಜೆಪಿ ಸರ್ಕಾರ.

ಪುಟ 9 ಕ್ಕೆ

ಜಾರಿಗೆ ಬಂದ ಭೂಸುಧಾರಣಾ ಕಾನೂನು ಗೇಣಿದಾರರಿಗೆ ರಕ್ಷಣೆ ನೀಡುವ ಗೇಣಿ ಪ್ರಮಾಣವನ್ನು ನಿಯಂತ್ರಣ ಮಾಡುವ ಕಾನೂನಿನ ಜೊತೆಗೆ ಆ ಕಾನೂನು ಜಾರಿಗೆ ಬಂದ ದಿನದಿಂದ ರಾಜ್ಯದಲ್ಲಿ ಭೂಮಿಯನ್ನು ಯಾವುದೇ ರೀತಿಯಲ್ಲಿ ಗುತ್ತಿಗೆ ಅಥವಾ ಲೀಸ್‌ಗೆ ಕೊಡುವುದನ್ನು ನಿಷೇಧಿಸಿತ್ತು. ಆದರೆ ರಾಜ್ಯ ಸರ್ಕಾರ ತರುತ್ತಿರುವ ತಿದ್ದುಪಡಿ ರೈತರಿಂದ ದೊಡ್ಡ ಕಂಪನಿಗಳು ಭೂಮಿಯನ್ನು ಗುತ್ತಿಗೆಗೆ (ಲೀಸ್‌ಗೆ) ಪಡೆದುಕೊಳ್ಳುವುದಕ್ಕೆ ಅವಕಾಶ ನೀಡುತ್ತದೆ.

ಇದು ಗೇಣಿ ಪದ್ಧತಿಯನ್ನು ಪುನಸ್ಥಾಪಿಸುವುದರ ಜೊತೆಗೆ ಇಡೀ ಸಂಬಂಧವನ್ನೇ ತಿರುವು ಮುರುವು ಮಾಡುತ್ತದೆ. ಗೇಣಿ, ಗುತ್ತಿಗೆ ವಾರಪದ್ಧತಿಯೆಂದರೆ ಸಾಮಾನ್ಯವಾಗಿ ಪ್ರಬಲನಾದ ಭೂಮಾಲಕನಿಂದ ಬಡ ರೈತರು ಭೂಮಿಯನ್ನು ಗೇಣಿ, ಗುತ್ತಿಗೆಗಾಗಿ ಪಡೆಯುವುದು ಎಂದು. ಆಗ ದುರ್ಬಲ ಗೇಣಿದಾರರಿಂದ ಅತಿ ಹೆಚ್ಚು ಗೇಣಿಯನ್ನು ವಸೂಲಿ ಮಾಡುವುದು ಪ್ರಬಲ ಭೂಮಾಲಕರ ನಿತ್ಯದ ಕ್ರಮವಾಗಿತ್ತು. ಈಗ ಬಿಜೆಪಿಯ ಚಿಂತನೆಯೆಂದರೆ ನೂರಾರು ಬಡ ರೈತರಿಂದ ಸಾವಿರಾರು ಪಟ್ಟು ಶ್ರೀಮಂತರಾದ ಕಂಪನಿಗಳು ಭೂಮಿಯನ್ನು ಗುತ್ತಿಗೆಗೆ ಪಡೆಯುವುದು, ಕಂಪನಿಗಳೇ ಬೇಸಾಯ ಮಾಡುವುದು ಹಾಗೂ ಸಾಧ್ಯವಾದಷ್ಟು ಕಡಿಮೆ ಗುತ್ತಿಗೆ ನೀಡುವುದು, ಗುತ್ತಿಗೆ ನೀಡುವುದನ್ನು ವಂಚಿಸುವುದು ಇತ್ಯಾದಿ ಹೀಗಾಗಿ ರಕ್ಷಣೆ ಯಾರಿಗೆ ಭಕ್ಷಣೆ ಯಾರದ್ದು?.

ಬಿಜೆಪಿ ಮತ್ತು ಸರ್ಕಾರದ ಜನವಿರೋಧಿತನಕ್ಕೆ ಎಷ್ಟೊಂದು ಮುಖಗಳು !!



ಬಿಜೆಪಿ ದರ್ಬಾರ್

ಆರ್.ರಾಮಕೃಷ್ಣ

ಈ ಅಂಕಣದಲ್ಲಿ ಕಾಣಿಸಿಕೊಂಡಿರುವ ನಾಲ್ಕು ಬೇರೆ ಬೇರೆ ವರದಿ-ಬರಹಗಳನ್ನು ನೋಡಿ. ನೀವು ಅವುಗಳನ್ನು ನೋಡಿದಾಗ ಅವು ಒಂದೊಂದು ಬಿಡಿ ಬಿಡಿ ಬರಹ ಎನಿಸಬಹುದು. ಆದರೆ ಆ ಎಲ್ಲ ಬರಹಗಳು ಒಂದಕ್ಕೊಂದು ಸಂಬಂಧಿಸಿದ ವಿಷಯಗಳಾಗಿವೆ. ಅವೆಲ್ಲವೂ ಒಟ್ಟು ಸೇರಿ ಕರ್ನಾಟಕ ರಾಜ್ಯದಲ್ಲಿ ಬಿಜೆಪಿ ಸರ್ಕಾರದ ಆಡಳಿತ-ನೇಮಕಾತಿ ಹೇಗೆ ನಡೆಯುತ್ತಿದೆ. ಜನರ ಸಂಕಟಗಳನ್ನು ಪರಿಹರಿಸಬೇಕಾದ ಬಿಜೆಪಿ ಸರ್ಕಾರ ಏನು ಮಾಡುತ್ತಿದೆ, ಈ ಯಾವ ಮುಖ್ಯಮಂತ್ರಿ ಬಂದರೂ, ಯಾವ ಮಂತ್ರಿ ಜೈಲಿಗೆ ಹೋದರೂ ಯಾವ ಮಂತ್ರಿ ಮನೆಗೆ ಹೋದರೂ ಈ ಸರ್ಕಾರದ 'ಹಣೆ ಬರಹ' ಏನು ? ಕರ್ನಾಟಕ ರಾಜ್ಯದ ಜನಗಳ ದೌರ್ಭಾಗ್ಯದ ಕತೆ ಏನು ? ಎಂದು ಅದು ಸಾರಿ ಸಾರಿ ಹೇಳುತ್ತಿದೆ.

ಮೇವು ಕಿತ್ತುಕೊಳ್ಳುವ ತಹಸೀಲ್ದಾರ
ಬರ ನಿರ್ವಹಣೆಯ ಸೊಗಸೇ ಸೊಗಸು

ರಾಜ್ಯದಲ್ಲಿ ಈ ವರ್ಷವೂ ಬರ ಮುಂದುವರೆಯುವ ಎಲ್ಲ ಲಕ್ಷಣಗಳು ಕಾಣಿಸಿಕೊಳ್ಳುತ್ತಿವೆ. ಆದರೆ ಇದು ಈ ವರ್ಷದ ಬರ ನಿರ್ವಹಣೆ ಸಂಬಂಧದ ಪ್ರಶ್ನೆ ಅಲ್ಲ. ಕಳೆದ ವರ್ಷಕ್ಕೆ ಸಂಬಂಧಿಸಿದ್ದು.

ಉತ್ತರ ಕರ್ನಾಟಕದ ರಾಯಚೂರು ಜಿಲ್ಲೆಯ ರಾಯಚೂರು ತಾಲ್ಲೂಕಿನ ಯರಗೇರದಲ್ಲಿ ಕಳೆದ ವರ್ಷ ಬರವನ್ನು ಎದುರಿಸುವ ಹೆಸರಿನಲ್ಲಿ ಸರ್ಕಾರದಿಂದ ಭತ್ತದ ಹುಲ್ಲನ್ನು ಸಂಗ್ರಹಿಸಿಡಲಾಗಿತ್ತು. ಆದರೆ ಸಂಗ್ರಹಿಸಿ ಆರು ತಿಂಗಳಾದರೂ ಕೂಡ ದನಕರುಗಳು, ಜನರು ಬರದ ಬೇಗೆಯಲ್ಲಿ ಬೆಂದರೂ ಕೂಡ ಆಡಳಿತ ಹುಲ್ಲನ್ನು ವಿತರಣೆ ಮಾಡಲೇ ಇಲ್ಲ. ಜೂನ್ ತಿಂಗಳೂ ಸಾಕಷ್ಟು ಸುರಿದು ಮತ್ತೆ ಮುಂಗಾರು ಮೋಡ ದಟ್ಟೈಸ ತೊಡಗಿದಾಗ ಬಯಲಿನಲ್ಲಿ ಸಂಗ್ರಹಿಸಲಾಗಿದ್ದ ಆ ಮೇವು ಹಾಳಾಗುತ್ತದೆಂದು ಆತಂಕಗೊಂಡ ರೈತರು ಎತ್ತಿನ ಬಂಡಿಗಳನ್ನು ತಂದು ಇತ್ತೀಚೆಗೆ ಪ್ರತಿಭಟನಾರ್ಥವಾಗಿ ಆ ಹುಲ್ಲನ್ನು ತುಂಬಿಕೊಂಡು ಹೋಗಲು ಮುಂದಾದರು.

ಇದುವರೆಗೂ ಇಲ್ಲದ ಆಡಳಿತ ಬಂದು ವಕ್ಕರಿಸಿತು ನೋಡಿ. ಸ್ವತಃ ತಹಸೀಲ್ದಾರರೇ ಲಾಠಿ ಹಿಡಿದು ರೈತರ ಜೊತೆ ಕುಸ್ತಿಗೆ ಬಿದ್ದು ರೈತರ ಕೈಯಿಂದ ಹುಲ್ಲಿನ ಹೊರೆ ಕಸಿದುಕೊಂಡರು.

ಇದೇನು ಬಂದು ಮೆಟ್ಟಿಕೊಂಡಿದೆಯೋ ಈ ಸರ್ಕಾರಕ್ಕೆ ? ಇಂಥಾ ಬರಗಾಲದಲ್ಲಿ ಅಮೂಲ್ಯ ಹುಲ್ಲು ಹಾಳಾದರೆ ಎಂಥಾ ನಷ್ಟ ಎಂಬ ಪ್ರಜ್ಞೆಯಾದರೂ ಈ ಸರ್ಕಾರಕ್ಕೆ ಉಂಟೆ ? ಅಯ್ಯೋ ಏನಾಗಿದೆ ಈ ಸರ್ಕಾರಕ್ಕೆ !!!

★

ಶಿಕ್ಷಣ ಇಲಾಖೆ ಮುಂಬಡ್ತಿ
ಸಾಮಾಜಿಕ ನ್ಯಾಯಕ್ಕೆ ಎಳ್ಳು ನೀರು

ಬರ ಎಂಬುದು ಎಷ್ಟೋ ಜನರಿಗೆ ವರ. ಈ ಬಿಜೆಪಿ ಸರ್ಕಾರದಲ್ಲಿ ಆಳುವವರಿಗೆ ಬರವೇ ಒಂದು ಬಗೆಯ ಸುಗ್ಗಿ. ಇರಲಿ. ಅದನ್ನು ಬಿಟ್ಟು ಶಿಕ್ಷಣ ಇಲಾಖೆಯಲ್ಲಿನ ಈ ಬಿಜೆಪಿ ಸರ್ಕಾರದ ಮುಂಬಡ್ತಿ ನೀತಿಯನ್ನು ಸ್ವಲ್ಪ ನೋಡೋಣ. ನಮ್ಮ ಸಂವಿಧಾನ ಪ್ರತಿಪಾದಿಸುವ ಸಾಮಾಜಿಕ ನ್ಯಾಯವನ್ನು ಕಾಪಾಡುವುದರಲ್ಲಿ ಈ ಬಿಜೆಪಿ ಸರ್ಕಾರಕ್ಕೆ ಎಷ್ಟೊಂದು ಕಾಳಜಿ ಎಂದು ತಿಳಿಯೋಣ.

ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ
ಇಲಾಖೆಯಲ್ಲಿ ಶಿಕ್ಷಣಾಧಿಕಾರಿ ಹುದ್ದೆಯ

ರೋಸ್ಟರ್ ರಿಜಿಸ್ಟರ್- ಅಂದರೆ ಯಾವ ಯಾವ ಸಾಮಾಜಿಕ ಹಿನ್ನೆಲೆಯುವರಿಗೆ ಅದರಲ್ಲಿಯೂ ಶೋಷಿತ, ದಮನಿತ ವಿಭಾಗದ ಜನರಿಗೆ ಯಾವ ಬಗೆಯ ಆದ್ಯತೆ ಸಿಗಬೇಕೆಂಬದಕ್ಕೆ ಆಧಾರ ಭೂತವಾದ ಮಾಹಿತಿ-ದಾಖಲೆ ಹಾಗೂ ಬ್ಯಾಕ್ ಲಾಗ್- ಅಂದರೆ ಈ ಹಿಂದೆ ಅವಕಾಶ ವಂಚಿತ ವಿಭಾಗದ ಅಭ್ಯರ್ಥಿಗಳಿಗೆ ನಿಯಮದಂತೆ ಮೀಸಲಾತಿ ನೀಡದೇ ಆ ಹೊಣೆಯನ್ನು ಹಾಗೆ ಬಾಕಿ ನಿಲ್ಲಿಸಿ ಇಟ್ಟಿರುವಂತದ್ದು- ಅಡಿಯಲ್ಲಿ ಶಿಕ್ಷಣಾಧಿಕಾರಿ ಹುದ್ದೆಗೆ ಮುಂಬಡ್ತಿ ನೀಡುವಲ್ಲಿ ಇಲಾಖೆಯು ಸುಪ್ರೀಂಕೋರ್ಟ್, ಕೆಎಟಿ, ಹಾಗೂ ಸರ್ಕಾರಿ ಆದೇಶಗಳನ್ನು ಉಲ್ಲಂಘಿಸಿದೆ. ಮಾತ್ರವಲ್ಲ ಕರ್ನಾಟಕ ರಾಜ್ಯ ಅನುಸೂಚಿತ ಬುಡಕಟ್ಟುಗಳ ಆಯೋಗ ಮುಂಬಡ್ತಿಗೆ ನೀಡಿದ್ದ ತಾತ್ಕಾಲಿಕ ತಡೆಯಾಜ್ಞೆಯನ್ನು ಸಹ ಗಾಳಿಗೆ ತೂರಿ ನಡೆದುಕೊಂಡಿದೆ ಎಂದು ವರದಿಯಾಗಿದೆ.

ಪರಿಶಿಷ್ಟ ಜಾತಿ-ಪಂಗಡಗಳ ಜನರಿಗೆ ನ್ಯಾಯಬದ್ಧವಾಗಿ ಸಿಗಬೇಕಾದ ಅವಕಾಶಗಳನ್ನು ಏನೇನೋ ಕುಂಟು ನೆಪಗಳನ್ನು ಹೇಳುತ್ತಾ ಸಿಗದಂತೆ ಮಾಡುತ್ತಾ ತಮತಮಗೆ ಬೇಕಾದ ಜಾತಿಯವರಿಗೆ -ಮೇಲ್ಜಾತಿಯ ಜನರಿಗೆ ಅವಕಾಶ ಸೃಷ್ಟಿಸಿ ಕೊಡುತ್ತಾ ಪರಿಸ್ಥಿತಿಯನ್ನು ಹೇಗೋ ತಾತ್ಕಾಲಿಕವಾಗಿ ನಿಭಾಯಿಸುತ್ತಾ-ನಿರ್ವಹಿಸುತ್ತಾ ಹೋಗುವುದು, ಸಾಧ್ಯವಾದರೆ ಅದನ್ನೇ ಶಾಶ್ವತಗೊಳಿಸಲು ಪ್ರಯತ್ನಿಸುವುದು ಶಿಕ್ಷಣ ಸಂಸ್ಥೆಗಳಲ್ಲಿ, ಶಿಕ್ಷಣ ಇಲಾಖೆಯಲ್ಲಿ ವ್ಯಾಪಕವಾಗಿ ನಡೆಯುವ ಒಂದು ಜಾತಿವಾದಿ ದಂಧೆ. ಹೇಳಿ ಕೇಳಿ ಬಿಜೆಪಿಯು "ಉತ್ತಮ ಜಾತಿ'ಯವರ ಸ್ವಂತ ಪಕ್ಷ". ಸಂಘ ಪರಿವಾರದ ಕೃಪಾ ಕಟಾಕ್ಷದಲ್ಲಿ ಮಾರ್ಗದರ್ಶನದಲ್ಲಿ ನಡೆಯುವ ಪಕ್ಷ. ನಮ್ಮ ಕಾಗೇರಿಯವರೋ ಸಂಘ ಪರಿವಾರದ ಗರಡಿಯಲ್ಲಿ ಹುರಿಗೊಂಡು, ಹದಗೊಂಡು ಬಂದ ಸಂಘದ ಕಟ್ಟಾಳು. ಇನ್ನೇನು ಬೇಕು ಮತ್ತೆ. ನಿಯಮಾವಳಿ ಪಾಲಿಸದೇ 22 ಜನ ಡಿಡಿಪಿಐ (ಉಪ ನಿರ್ದೇಶಕರು- ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ)ಹುದ್ದೆಗೆ ಮುಂಬಡ್ತಿ ನೀಡಲಾಗಿದೆ. ಸಚಿವ ಕಾಗೇರಿಯವರು "ಇದು ನನ್ನ ಗಮನಕ್ಕೆ ಇಲ್ಲ " ಎಂದಿದ್ದಾರೆಂದು ವರದಿಯಾಗಿದೆ. ಸಚಿವ ಕಾಗೇರಿಯವರ ವಿಶೇಷಾಧಿಕಾರಿ ಗಣಪತಿ ಭಟ್ ಅವರು ಈ ಮುಂಬಡ್ತಿಯ ವಿಷಯದಲ್ಲಿ ನೇರವಾಗಿ ಕಾರ್ಯ ಕೈಗೊಂಡಿದ್ದಾರೆ ಎಂದು ಚರ್ಚೆಗಳು ನಡೆದಿವೆ. ಡಿಡಿಪಿಐ ಹುದ್ದೆಗೆ ಬಡ್ತಿಯಂತಹ ಉನ್ನತ ಹಂತದ ಪ್ರಶ್ನೆಗಳ ವಿಚಾರದಲ್ಲಿ ಸಚಿವರ ಗಮನಕ್ಕೆ ಬರದೇ ಇವೆಲ್ಲ ನಡೆಯುತ್ತವೇ ಎಂದರೆ ಏನರ್ಥ? ಹಾಗಿದ್ದರೆ ಕಾಗೇರಿಯವರ ವಿಶೇಷಾಧಿಕಾರಿಯನ್ನು ನಿಯಂತ್ರಿಸುತ್ತಿರುವವರು ಯಾರು ?

★

ಬಿಜೆಪಿ ಮುಖಂಡರ ಕೆಲಸವೇನು !!

ಬೆಂಗಳೂರು ಜಿಲ್ಲೆಯಲ್ಲಿ ಯಶವಂತಪುರ ಅನ್ನುವ ಕ್ಷೇತ್ರವೊಂದು ಇದೆ, ಅಲ್ಲಿ ಬಿಜೆಪಿ ಪಕ್ಷದ ಪ್ರಭಾವಿ ಸಚಿವೆ ಶೋಭಾ ಕರಂದ್ಲಾಜೆಯವರು ಶಾಸಕಿಯಾಗಿದ್ದಾರೆ ಎಂಬುದೆಲ್ಲ ಬಹುತೇಕ ಜನರಿಗೆ ಗೊತ್ತಿರುವ ವಿಚಾರ. ಆದರೆ ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಅಲ್ಲಿನ ಬಿಜೆಪಿ ಮುಖಂಡರು ನಡೆಸಿದ ಒಂದು ವಿಶಿಷ್ಟ ಪ್ರತಿಭಟನೆ ಬಗೆಗೆ ನಿಮಗೆ ಗೊತ್ತಿರಲಿಕ್ಕಿಲ್ಲ.

ಅವರ ಹೆಸರು ರಾಣಿ ಅಂತ. ಹೆಮ್ಮಿಗೆಪುರ ಬಿಜೆಪಿ ವಾರ್ಡ್ ಅಧ್ಯಕ್ಷೆ. ಮತ್ತು ಪ್ರೇಮಾ ನಾಗಯ್ಯ ಅಂತ. ಅವರು ಕೂಡ ಈ ಭಾಗದ ಬಿಜೆಪಿ ನಾಯಕಿ. ಈ ಇಬ್ಬರ ನೇತೃತ್ವದಲ್ಲಿ ಇತ್ತೀಚಿಗೆ ಒಂದು ಪ್ರತಿಭಟನೆ ನಡೆದಿದೆ. ಈ ಕ್ಷೇತ್ರದ ಆಶ್ರಯ ಸಮಿತಿಗೆ ಅಧ್ಯಕ್ಷರು ರೇಣುಕಪ್ಪ ಅಂತ. ಅವರ ಮನೆಯ ಮುಂದೆ ಪ್ರತಿಭಟನೆ. ಕಾರಣ ಏನೆಂದರೆ ಈ ಬಿಜೆಪಿ ಮುಖಂಡರೆಲ್ಲ ಸೇರಿ ಯಶವಂತಪುರ, ಹೆಮ್ಮಿಗೆಪುರ, ತಾವರೆಕೆರೆ ಮುಂತಾದ ಪ್ರದೇಶದ ಜನರಿಂದ-ಒಟ್ಟು 85 ಜನರಿಂದ ತಲಾ 10 ಸಾವಿರದಂತೆ 8.5 ಲಕ್ಷ. ರೂಪಾಯಿ ಕೊಡಿಸಿದರಂತೆ. ಯಾಕೆ ಗೊತ್ತೆ ? ಆಶ್ರಯ ಮನೆ ಮಂಜೂರು ಮಾಡಲು. ರೇಣುಕಪ್ಪ ಹಣ ಕೊಟ್ಟವರಿಗೆ ಸೈಟು ಮಂಜೂರು ಮಾಡಿಸಲಿಲ್ಲವಂತೆ. ಅದಕ್ಕೆ ಕೊಟ್ಟ ಹಣವನ್ನು 'ನ್ಯಾಯವಾಗಿ' ವಾಪಸ್ಸು ಕೊಡಿ ಅಂತ ಪ್ರತಿಭಟನೆ, ಮನೆ ಮುಂದೆ. ಆಹಾ !! ಬಿಜೆಪಿ ಮುಖಂಡರಾಗಿ ಆಶ್ರಯ ಸಮಿತಿ ನಿಜವಾದ ಬಡವರಿಗೆ ಸೈಟು ಮಂಜೂರು ಮಾಡಬೇಕು ಅಂತ ಹೋರಾಟ ಮಾಡುವುದು ಬಿಟ್ಟು ಎಂತಹ ದಳ್ಳಾಳಿ ಕೆಲಸ ಹಚ್ಚಿಕೊಂಡಿದ್ದಾರೆ !!! ಒಂದು ರಾಜಕೀಯ ಸಂಘಟನೆಯಾಗಿ ಒಂದು ರಾಜಕೀಯ ಪಕ್ಷವಾಗಿ ಬಿಜೆಪಿ ತಾನು ತಲುಪಿರುವ (ಕ್ಷಮಿಸಿ.....ತಲುಪಿರುವ ಅಲ್ಲ, ಯಾವತ್ತು ಇರುವ) ಅಧಃಪತನ ಎಂತಹದ್ದು ಎಂಬುದಕ್ಕೆ ತಳ ಹಂತದ ಒಂದು ನಿದರ್ಶನ ಈ ಘಟನೆ. ಈ ಪ್ರಕರಣದಲ್ಲಿ ಇನ್ನೂ ಏನೇನೋ ಇದೆ. ರೇಣುಕಪ್ಪ ರೌಡಿಗಳನ್ನು ಬಳಿಸಿ ಈ ಬಿಜೆಪಿ ಮುಖಂಡರು ಆ ಹಣವನ್ನು ತಾವೇ ಬಳಸಿಕೊಂಡಿದ್ದೇವೆಂದು ಹೇಳುವಂತೆ ಮುಚ್ಚಳಿಕೆ ಬರೆಸಿಕೊಂಡಿದ್ದಾರಂತೆ. ಇನ್ನೂ ಏನೇನೋ ಗೋಜಲುಗಳು. ಇರಲಿ. ಈ ಪ್ರತಿಭಟನೆ, ಪ್ರಕರಣದ ಬಗೆಗೆ ಇದಕ್ಕಿಂತ ಹೆಚ್ಚಿನ ವಿವರಣೆ ಬೇಕೆ ?

★

ಅಬಕಾರಿ ಸಚಿವರ ವಸೂಲಿ ವ್ಯವಹಾರ ?

ಯಶವಂತ ಪುರದ್ದು ತಳ ಹಂತದ ಸಂಘಟನೆ ಬಗೆಗೆ ಸಾಕ್ಷಿ. ಇನ್ನು ಬಿಜೆಪಿಯ ನಾಯಕತ್ವ ಉನ್ನತ ಹಂತದಲ್ಲಿ ರಾಜ್ಯಾಡಳಿತವನ್ನು ಹೇಗೆ ನಿರ್ವಹಣೆ ಮಾಡುತ್ತಿದೆ ಎಂಬುದಕ್ಕೆ ಇಲ್ಲೊಂದು ಘಟನೆಯನ್ನು ನೋಡಿ. ಕರ್ನಾಟಕ ರಾಜ್ಯದ ಅಬಕಾರಿ ಸಚಿವ ರೇಣುಕಾರ್ಯ ಯಾರಿಗೆ ಗೊತ್ತಿಲ್ಲ. ಅವರು ಈಗ ಜಗದ್ ವಿಖ್ಯಾತರು. ಅವರ ಮೇಲೆ ಈಗ ಒಂದು ದೂರು ದಾಖಲಾಗಿ ಮುಖ್ಯಮಂತ್ರಿಗಳು ಆ ಬಗೆಗೆ ತನಿಖೆಗೆ ಆದೇಶವನ್ನು ನೀಡಿದ್ದಾರೆ.

ಅದೇನೆಂದರೆ ರಾಜ್ಯದ ವಿವಿಧ ಬಾರ್‌ಗಳಿಂದ ಲೈಸೆನ್ಸ್ ನವೀಕರಣದಂತಹ ಕಾರಣದ ಹೆಸರಿನಲ್ಲಿ ವ್ಯವಸ್ಥಿತವಾಗಿ ವಸೂಲಿ ಕಾರ್ಯ ನಡೆದಿದೆಯಂತೆ. ಹಾಗಂತ ದಕ್ಷಿಣ ಕನ್ನಡ ಜಿಲ್ಲೆಯ ಬಾರ್ ಮಾಲೀಕರೊಬ್ಬರು ಮುಖ್ಯಮಂತ್ರಿಗೆ ದೂರು ನೀಡಿದ್ದಾರೆ. ಸದಾನಂದಗೌಡರು ಆ ಬಗೆಗೆ ತನಿಖೆಗೆ ಆದೇಶಿಸಿದ್ದಾರೆ. ವಸೂಲಿಗಾರರು ಅಬಕಾರಿ ಸಚಿವರವರೆಗೆ 'ಪಾಲು' ಹೋಗ ಬೇಕಿರುವುದರಿಂದ ಅದನ್ನು 'ಸರಿಯಾಗಿಯೇ' ಕೊಡಿ ಅಂತ ಕೇಳುತ್ತಾ ಹೊರಟಿರುವುದು ಮಾತ್ರ ತುಂಬಾ ಸ್ವಾರಸ್ಯಕರವೂ ಬಿಜೆಪಿ ಸರ್ಕಾರದ ಆಡಳಿತ ವೈಖರಿಗೆ ಒಂದು ನಿದರ್ಶನವೂ ಆಗಿದೆ ಅಂತ ಜನ ಅಂದುಕೊಂಡರೆ ಅವರಲ್ಲಿ ತಪ್ಪೇನು ಇಲ್ಲ, ಅಲ್ಲವೇ ?

'ಆಹಾರದ ಭದ್ರತೆಗಾಗಿ ಎಡಪಕ್ಷಗಳ ರಾಜ್ಯವ್ಯಾಪಿ ಚಳವಳಿ ಯಶಸ್ವಿಗೊಳಿಸಿ'

ಸಿಪಿಐ(ಎಂ) ರಾಜ್ಯ ಸಮಿತಿ ಕರೆ

ರಾಜ್ಯ ಕಾರ್ಯದರ್ಶಿ ಮಂಡಳಿಯ ಆಯ್ಕೆ :

ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿಯು12 ಸದಸ್ಯರ ನೂತನ ಕಾರ್ಯದರ್ಶಿ ಮಂಡಳಿಯನ್ನು ಆಯ್ಕೆ ಮಾಡಿತು – ವಿವರ

1. ಜಿ.ವಿ ಶ್ರೀರಾಮರೆಡ್ಡಿ – ಕಾರ್ಯದರ್ಶಿ (ರಾಜ್ಯ ಸಮ್ಮೇಳನದ ಸಂದರ್ಭದಲ್ಲೇ ಆಯ್ಕೆ ಆಗಿದ್ದರು.) 2. ವಿ.ಜೆ.ಕೆ ನಾಯರ್, 3. ಕೆ.ಆರ್. ಶ್ರೀಯಾನ್ 4. ಜಿ.ಎನ್. ನಾಗರಾಜ್ 5. ಬಿ. ಮಾಧವ 6. ಮಾರುತಿ ಮಾನ್ಪಡೆ 7. ಕೆ. ಶಂಕರ್ 8. ಎಸ್. ಪ್ರಸನ್ನಕುಮಾರ್ 9. ಜಿ.ಸಿ ಬಯ್ಯಾರೆಡ್ಡಿ 10. ನಿತ್ಯಾನಂದಸ್ವಾಮಿ 11. ಯು. ಬಸವರಾಜ 12. ಎಸ್. ವರಲಕ್ಷ್ಮಿ

ಆಹಾರದ ಭದ್ರತೆಗಾಗಿ ಎಡಪಕ್ಷಗಳ ದೇಶವ್ಯಾಪಿ ಚಳವಳಿ :

ನಾಲ್ಕು ಎಡಪಕ್ಷಗಳು, ಅಂದರೆ ಸಿಪಿಐ(ಎಂ), ಸಿಪಿಐ, ಎಐಎಫ್‌ಬಿ ಮತ್ತು ಆರ್.ಎಸ್.ಪಿ ಜಂಟಿಯಾಗಿ ಆಹಾರದ ಭದ್ರತೆಯ ಪ್ರಶ್ನೆಯನ್ನು ಮುಂದಿಟ್ಟುಕೊಂಡು ದೇಶವ್ಯಾಪಿ ಪ್ರಚಾರ–ಪ್ರಕ್ಷೋಭೆ ಹಾಗೂ ಚಳುವಳಿಯನ್ನು ನಡೆಸಲು ನಿರ್ಧರಿಸಿವೆ. ಸಂಸತ್ತಿನ ಮಳೆಗಾಲದ ಅಧಿವೇಶನದಲ್ಲಿ "ಆಹಾರ ಭದ್ರತಾ ಮಸೂದೆ" ತರಲಾಗುತ್ತಿರುವ ಹಿನ್ನೆಲೆಯಲ್ಲಿ ಈ ಚಳುವಳಿಯನ್ನು ಹಮ್ಮಿಕೊಳ್ಳಲಾಗಿದೆ. ಪ್ರಸ್ತಾಪಿತ ಆಹಾರ ಭದ್ರತಾ ಮಸೂದೆ ಜನತೆಗೆ ಆಹಾರದ ಭದ್ರತೆಯನ್ನು ಒದಗಿಸುವ ಬದಲು ಆಹಾರದ ಅಭದ್ರತೆಯನ್ನೇ ಹೆಚ್ಚಿಸಲಿರುವುದರಿಂದ, ತೀವ್ರ ಬೆಲೆ ಏರಿಕೆಯ ಹಿನ್ನೆಲೆಯಲ್ಲಿ ಇದೊಂದು ಅತ್ಯಂತ ಮಹತ್ವದ ಚಳುವಳಿಯಾಗಿದೆ.

ಪ್ರಚಾರದ ಮುಖ್ಯ ಘೋಷಣೆಗಳು ಈ ಕೆಳಗಿನಂತಿವೆ :

1. ಬಿ.ಪಿ.ಎಲ್, ಎ.ಪಿ.ಎಲ್. ಎಂಬ ತಾರತಮ್ಯ ಇರಕೂಡದು, ಸಾರ್ವತ್ರಿಕ ಸಾರ್ವಜನಿಕ ವಿತರಣಾ ವ್ಯವಸ್ಥೆ ಜಾರಿಗೆ ತರಬೇಕು.
2. ಪ್ರತಿಯೊಂದು ಕುಟುಂಬಕ್ಕೆ ಪ್ರತಿಯೊಂದು ತಿಂಗಳಿಗೆ 35 ಕೆ.ಜಿ ಆಹಾರ ಧಾನ್ಯಗಳನ್ನು ಕೆ.ಜಿ.ಗೆ 2ರೂ. ಮೀರದ ದರದಲ್ಲಿ ಒದಗಿಸಬೇಕು.
3. ಕಲ್ಯಾಣ ಕ್ರಮಗಳ ಅರ್ಹತೆಯ ಆಧಾರವಾಗಿ ಯೋಜನಾ ಆಯೋಗವು ನೀಡಿರುವ ಬಡತನದ ಬೋಗಸ್ ಅಂದಾಜುಗಳನ್ನು ತಿರಸ್ಕರಿಸಬೇಕು.
4. ಗ್ರಾಹಕರಿಗೆ ನ್ಯಾಯವಾದ ಬೆಲೆ ಮತ್ತು ರೈತರಿಗೆ ಲಾಭದ ಮಾರ್ಜಿನ್ ಖಚಿತಪಡಿಸುವ ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನು ಜಾರಿಮಾಡಬೇಕು.

ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿಯ ಎರಡು ದಿನಗಳ ಸಭೆ ಜೂನ್ 23 ಮತ್ತು 24, 2012 ರಂದು ಇ.ಎಂ.ಎಸ್. ಭವನದಲ್ಲಿ ನಡೆಯಿತು. ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಸಂಗಾತಿ ಎಸ್. ರಾಮಚಂದ್ರನ್ ಪಿಳ್ಳೆ, ಸಂಗಾತಿ ಕೆ. ವರದರಾಜನ್ ಮತ್ತು ಸಂಗಾತಿ ಎಂ.ಎ ಬೇಬಿ ಅವರು ಹಾಜರಿದ್ದು ಮಾರ್ಗದರ್ಶನ ಮಾಡಿದರು. ಸಂಗಾತಿ ಕೆ.ಆರ್ ಶ್ರೀಯಾನ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯ ಕೆಲವು ಪ್ರಮುಖ ತೀರ್ಮಾನಗಳು ಈ ಕೆಳಗಿನಂತಿವೆ.

ಆಹಾರದ ಹಕ್ಕಿಗಾಗಿ ಎಡಪಕ್ಷಗಳು ಜಂಟಿಯಾಗಿ ಜುಲೈ ಇಡೀ ತಿಂಗಳು ಎಲ್ಲಾ ರಾಜ್ಯಗಳಲ್ಲಿ ತಳಮಟ್ಟದಲ್ಲಿ ವ್ಯಾಪಕವಾದ ಪ್ರಚಾರಾಂದೋಲನ ನಡೆಸಬೇಕೆಂದೂ ಎಲ್ಲಾ ಬಡ ಕುಟುಂಬಗಳಿಗೆ ಬಿಪಿಎಲ್ ರೇಷನ್ ಕಾರ್ಡುಗಳನ್ನು ವಿತರಿಸಿ, ಆಹಾರ ಧಾನ್ಯಗಳನ್ನು ಮತ್ತು ಇತರ ಅಗತ್ಯ ವಸ್ತುಗಳನ್ನು ಅಗತ್ಯ ಪ್ರಮಾಣದಲ್ಲಿ ಒದಗಿಸಬೇಕೆಂದು ಒತ್ತಾಯಿಸಿ ಸ್ಥಳೀಯವಾಗಿ ಸಮರಶೀಲ ಹೋರಾಟಗಳನ್ನು ನಡೆಸಬೇಕೆಂದು ಕರೆ ನೀಡಿವೆ. ಸರ್ಕಾರಿ ಕಛೇರಿಗಳಿಗೆ ಪಿಕೆಟಿಂಗ್ ಮಾಡುವುದು, ಆಹಾರ ಧಾನ್ಯಗಳ ಉಗ್ರಾಣಗಳಿಗೆ ಮುತ್ತಿಗೆ ಹಾಕುವುದು ಮೊದಲಾದ ರೀತಿಯ ಹೋರಾಟಗಳಿಗೆ ಜನರನ್ನು ಅಣಿನೆರೆಸಲು ಸಾಧ್ಯವಾಗಬೇಕು.

ಸಂಸತ್ತಿನ ಮಳೆಗಾಲ ಅಧಿವೇಶನದ ಸಮಯದಲ್ಲಿ ಜುಲೈ 30 ರಿಂದ ಆಗಸ್ಟ್ 3ರವರೆಗೆ ದೆಹಲಿ ಜಂತರ್–ಮಂತರ್‌ನಲ್ಲಿ ಸಾಮೂಹಿಕ ಧರಣಿಯನ್ನು ನಡೆಸಲು ಎಡಪಕ್ಷಗಳು ನಿರ್ಧರಿಸಿವೆ. ಹತ್ತಿರದ ರಾಜ್ಯಗಳಿಂದ ಸಾವಿರಾರು ಜನರು ಪ್ರತಿದಿನ ಧರಣಿಯಲ್ಲಿ ಪಾಲ್ಗೊಳ್ಳಲಿದ್ದಾರೆ. ರಾಜಧಾನಿಯಲ್ಲಿ ನಡೆಯುವ ಧರಣಿಯ ಆರಂಭದ ಅಥವ ಕೊನೆಯ ದಿನ ರಾಜ್ಯ ಕೇಂದ್ರಗಳಲ್ಲಿಯೂ ಇದೇ ರೀತಿಯ ಧರಣಿಗಳನ್ನು ನಡೆಸಬೇಕೆಂದು ಎಡಪಕ್ಷಗಳು ಕರೆ ನೀಡಿವೆ.

ಎಡಪಕ್ಷಗಳ ಈ ಚಳುವಳಿಯ ಕಾರ್ಯಕ್ರಮವನ್ನು ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಜಾರಿ ಮಾಡುವ ಬಗ್ಗೆ ಸಿಪಿಐ(ಎಂ) ರಾಜ್ಯ ಸಮಿತಿಯು ವಿವರವಾಗಿ ಚರ್ಚೆಮಾಡಿತು.

1. ರೇಷನ್ ಕಾರ್ಡ್, ರೇಷನ್ ವಿತರಣೆ ಹಾಗೂ ಬರಗಾಲ, ಬೆಲೆ ಏರಿಕೆಯ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ತಾಲ್ಲೂಕು/ ಜಿಲ್ಲಾ ಕೇಂದ್ರಗಳಲ್ಲಿ ಪಿಕೆಟಿಂಗ್, ಆಹಾರ ನಿಗಮದ ಉಗ್ರಾಣಗಳ ಮುತ್ತಿಗೆ, ಹೆದ್ದಾರಿಗಳ ಅನಿರ್ದಿಷ್ಟ ರಸ್ತೆ ತಡೆಯಂತಹ ಸಮರಶೀಲ ಹೋರಾಟದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
2. ಆಧ್ಯತಾ ತಾಲ್ಲೂಕುಗಳಲ್ಲಿ ಹಾಗೂ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಗುರುತಿಸಲಾದ ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರತಿಯೊಂದು ಗ್ರಾಮ/ವಾರ್ಡ್‌ಗಳಿಗೆ ತಲುಪುವಂತೆ ಪ್ರಚಾರಾಂದೋಲನ ನಡೆಸಬೇಕು.
3. ಎಲ್ಲಾ ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳಲ್ಲಿ ವ್ಯಾಪಕ ಪ್ರಚಾರ ಮಾಡಲು ಕಾರ್ಯಕ್ರಮ ರೂಪಿಸಬೇಕು.
4. ಪ್ರಚಾರಾಂದೋಲನ ಮತ್ತು ಹೋರಾಟದ ಕಾರ್ಯಕ್ರಮಗಳನ್ನು ಜುಲೈ ತಿಂಗಳಲ್ಲಿ ನಡೆಸಬೇಕು. ಮಳೆ ಇದ್ದರೂ ಕಾರ್ಯಕ್ರಮ ನಡೆಯಬೇಕು.



5. ರಾಜ್ಯ ಮಟ್ಟದ ಒಂದು ದಿನದ ಬೃಹತ್ ಧರಣಿಯನ್ನು ಅಗಸ್ಟ್ ತಿಂಗಳ ಮೊದಲ ವಾರದಲ್ಲಿ ನಡೆಸುವುದು (ದಿನಾಂಕ ನಿಗದಿಪಡಿಸಿ ತಿಳಿಸಲಾಗುವುದು)
6. ಆಹಾರದ ವಿಷಯದಲ್ಲಿ ಕೇಂದ್ರ ಸರ್ಕಾರದ ಜನ ವಿರೋಧಿ ನೀತಿಯನ್ನು ವಿರೋಧಿಸುವಾಗಲೇ, ರಾಜ್ಯದಲ್ಲಿ ಬಿಜೆಪಿ ಸರ್ಕಾರದ ಪ್ರತಿಗಾಮಿ ಕ್ರಮಗಳನ್ನು ಸಹ ವಿರೋಧಿಸುವುದು ಅಗತ್ಯವಾಗಿದೆ.

ಈ ಕುರಿತು ಜಂಟಿ ಕರಪತ್ರಗಳನ್ನು ಒದಗಿಸಲಾಗುವುದು, ಸ್ಥಳೀಯವಾಗಿಯೂ ಕರಪತ್ರಗಳನ್ನು ಮುದ್ರಿಸಿ ವಿತರಣೆ ಮಾಡಬೇಕು. ಸ್ಥಳೀಯ ಮಟ್ಟದಲ್ಲಿ ಜಾಥಗಳನ್ನು ಏರ್ಪಡಿಸಿ ಪ್ರಚಾರ ನಡೆಸಲು ಸಾಧ್ಯವಾಗಬೇಕು.

ಎಲ್ಲಾ ಜಿಲ್ಲಾ ಸಮಿತಿಗಳು ಹಾಗೂ ಜಿಲ್ಲಾ ಸಂಘಟನಾ ಸಮಿತಿಗಳು ಈ ವಿಷಯವನ್ನು ವಿವರವಾಗಿ ಚರ್ಚಿಸಿ ಜವಾಬ್ದಾರಿಗಳನ್ನು ನಿಗದಿಪಡಿಸಬೇಕು.

ಭೂ ಸುಧಾರಣಾ ಕಾಯ್ದೆ ತಿದ್ದುಪಡಿ ವಿರೋಧಿಸಿ ಸಮಾವೇಶ :

ರಾಜ್ಯ ಸರ್ಕಾರವು ಬಂಡವಾಳ ಹೂಡಿಕೆದಾರರ ಅನುಕೂಲಕ್ಕಾಗಿ 1961ರ ಭೂಸುಧಾರಣೆಗಳ ಕಾಯ್ದೆಗೆ ಪ್ರತಿಗಾಮಿ ತಿದ್ದುಪಡಿಗಳನ್ನು ತರಲು ಹೊರಟಿದೆ. ಈ ತಿದ್ದುಪಡಿಗಳು ಜಾರಿಗೆ ಬಂದರೆ "ಬೇಸಾಯ" ಎಂಬ ಪರಿಭಾಷೆಯ ವ್ಯಾಪ್ತಿಗೆ ಬೇಸಾಯ ಆಧಾರಿತ ಕೈಗಾರಿಕೆಗಳನ್ನು ಸೇರಿಸಲಾಗುತ್ತಿರುವುದು ಮಾತ್ರವಲ್ಲ ರೈತರ ಭೂಮಿಯನ್ನು ದೀರ್ಘಾವಧಿ ಗೇಣಿ ಆಧಾರದ ಮೇಲೆ ಕೃಷಿ ವಾಣಿಜ್ಯದಲ್ಲಿ ತೊಡಗಿರುವ ಕಂಪೆನಿಗಳಿಗೆ ನೀಡಲು ಅವಕಾಶ ದೊರೆಯಲಿದೆ. ಇದರಿಂದಾಗಿ ಕರ್ನಾಟಕದಲ್ಲಿ ಕಂಪೆನಿ ಬೇಸಾಯ ಆರಂಭವಾಗಲಿದ್ದು ರೈತರು ಬೀದಿಪಾಲಾಗುವುದು ಖಚಿತ. ಈ ಕುರಿತು ನಮ್ಮ ಕಾರ್ಷಿಕ ರಂಗದ ಸಂಘಟನೆಗಳ ಕಾರ್ಯಕರ್ತರಿಗೆ ತಿಳುವಳಿಕೆ ನೀಡಲು ಜುಲೈ 7ರಂದು ಬೆಂಗಳೂರಿನಲ್ಲಿ ಒಂದು ದಿನದ ಸಮಾವೇಶ ನಡೆಸಲು ಉದ್ದೇಶಿಸಲಾಗಿದೆ. ಪಶ್ಚಿಮ ಬಂಗಾಳದಿಂದ ಕಾಂ. ಸೂರ್ಯಕಾಂತ ಮಿಶ್ರಾ ಭಾಗವಹಿಸಲಿದ್ದಾರೆ. ಅದೇ ರೀತಿಯಲ್ಲಿ ಈ ತಿದ್ದುಪಡಿ ರಾಜ್ಯ ವಿಧಾನಸಭೆಯಲ್ಲಿ ಚರ್ಚೆಗೆ ಬರುವ ಎರಡು ದಿನಗಳ ಮೊದಲೇ ಎಲ್ಲಾ ಜಿಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಕರಡು ತಿದ್ದುಪಡಿಯ ಪ್ರತಿಗಳನ್ನು ಬಹಿರಂಗವಾಗಿ ಸುಟ್ಟುಹಾಕಿ ಪ್ರತಿಭಟಿಸಲು ನಿರ್ಧರಿಸಲಾಗಿದೆ. ರಾಜ್ಯ ಮಟ್ಟದ ಸಮಾವೇಶಕ್ಕೆ ನಿಗದಿತ ಪ್ರತಿನಿಧಿಗಳು ತಪ್ಪದೆ ಹಾಜರಾಗುವಂತೆ ಮಾಡಲು ಮತ್ತು ತಿದ್ದುಪಡಿ ಪ್ರತಿಗಳನ್ನು ಬೆಂಕಿಗೆ ಹಾಕುವ ಪ್ರತಿಭಟನೆಯನ್ನು ಯಶಸ್ವಿಗೊಳಿಸಲು ಪಕ್ಷದ ಸಮಿತಿಗಳು ಗಮನ ನೀಡಬೇಕು.

'ಜನಶಕ್ತಿ' ಸಂಪಾದಕರು

'ಜನಶಕ್ತಿ ಕನ್ನಡ ವಾರ ಪತ್ರಿಕೆ'ಗೆ ನೂತನ ಸಂಪಾದಕರಾಗಿ ನಿತ್ಯಾನಂದ ಸ್ವಾಮಿಯವರು ಆಯ್ಕೆಗೊಂಡಿದ್ದಾರೆ.

ಹಣಕಾಸು ಮಂತ್ರಿಗಳೂ ಆದ ಪ್ರಧಾನಮಂತ್ರಿಗಳು



ವೇದರಾಜ ಎನ್.ಕೆ.

ರಾಷ್ಟ್ರಪತಿ ಸ್ಥಾನದ ಚುನಾವಣೆಗೆ ಯುಪಿಎ ಅಭ್ಯರ್ಥಿಯಾಗಿರುವ ಪ್ರಣಬ್ ಮುಖರ್ಜಿಯವರು ಯುಪಿಎ-2 ಹಣಕಾಸು ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ ಈಗ ಸ್ವತಃ ಪ್ರಧಾನ ಮಂತ್ರಿಗಳೇ ಹಣಕಾಸು ಇಲಾಖೆಯ ಉಸ್ತುವಾರಿಯನ್ನು ವಹಿಸಿಕೊಂಡಿದ್ದಾರೆ. ಈ ಮೂಲಕ ಆ ಮಹತ್ವದ ಸ್ಥಾನಕ್ಕೆ ಯಾರು ಬರುತ್ತಾರೆ, 2ಜಿ ಹಗರಣದಲ್ಲಿ ಆಗಾಗ ಸುದ್ದಿಗೆ ಬಂದು ಹೋಗುತ್ತಿರುವ, ಹಿಂದೆ ಹಣಕಾಸು ಮಂತ್ರಿಯಾಗಿದ್ದ ಹಾಲಿ ಗೃಹಮಂತ್ರಿಗಳೋ ಅಥವ ಜೀವನ ಸಾಗಿಸಲು ದಿನಕ್ಕೆ 22.50ರೂ. ಬೇಕಾದಷ್ಟಾಯಿತು ಎನ್ನುತ್ತಲೇ, ಕಳೆದ ವರ್ಷ ಮೇನಿಂದ ಅಕ್ಟೋಬರ್‌ವರೆಗಿನ ಆರು ತಿಂಗಳಲ್ಲಿಯೇ ವಿದೇಶಿ ಪ್ರಯಾಣಕ್ಕೆಂದೇ ದಿನಕ್ಕೆ 2.02 ಲಕ್ಷ ರೂ.ನಂತೆ ಖರ್ಚು ಮಾಡಿರುದ್ದಿಯಲ್ಲಿದ್ದ, ಇತ್ತೀಚೆಗೆ ಎರಡು ಶೌಚಾಲಯಗಳ ನವೀಕರಣಕ್ಕೆ 35 ಲಕ್ಷ ರೂ.ಖರ್ಚನ್ನು ಸಮರ್ಥಿಸಿಕೊಂಡಿರುವ ಹಾಲಿ ಯೋಜನಾ ಆಯೋಗದ ಉಪಾಧ್ಯಕ್ಷರು ವಹಿಸಿಕೊಳ್ಳುತ್ತಾರೋ ಎಂಬ ಊಹಾಪೋಹಗಳು ಸದ್ಯಕ್ಕೆ ತಣ್ಣಗಾಗಿವೆ.

ಉಸ್ತುವಾರಿ ವಹಿಸಿಕೊಂಡ ಮೊದಲ ದಿನವೇ ಪ್ರಧಾನ ಮಂತ್ರಿಗಳು ಆರ್ಥಿಕದಲ್ಲಿ, ಅದರಲ್ಲೂ ಉದ್ಯಮಿಗಳಲ್ಲಿ 'ಅನಿಮಲ್ ಸ್ಪಿರಿಟ್' ಅಂದರೆ ಪಶು ಚೈತನ್ಯ'ವನ್ನು ಪುನರುಜ್ಜೀವನಗೊಳಿಸುವ ಮಾತಾಡಿದರು. ಏನಿದು 'ಪಶು ಚೈತನ್ಯ'? ಜನಸಾಮಾನ್ಯರನ್ನು ಪಶುಗಳಿಗಿಂತಲೂ ಕೀಳಾಗಿ ಕಾಣುವುದೇ? ಅದರಲ್ಲಿ ಹೊಸತೇನಿದೆ? ಈ ಪದವನ್ನು 1936ರಲ್ಲಿ ಪ್ರಖ್ಯಾತ ಬೂರ್ಜ್ವಾ ಆರ್ಥಿಕ ತಜ್ಞ ಕೀನ್ಸ್ ಮೊದಲು ಬಳಸಿದ್ದಂತೆ. ಬಳಕೆದಾರರಲ್ಲಿ ವಿಶ್ವಾಸವನ್ನು ಬಡಿದೆಬ್ಬಿಸುವ ಮಾನವ ಭಾವುಕತೆಯನ್ನು ವರ್ಣಿಸಲು ಅವರು ಈ ಪದವನ್ನು ಬಳಸಿದರಂತೆ. ಅವರ ಪ್ರಕಾರ ಈ ಪಶು ಚೈತನ್ಯ ಮಾನವರಲ್ಲಿ ನೆಚ್ಚಿಕೆಯನ್ನು ಕೂಡ ಉಂಟುಮಾಡಬಲ್ಲದು, ಜನ ಸಕಾರಾತ್ಮಕ ಕ್ರಿಯೆಗಿಳಿಯಲು ಇದು ಅಗತ್ಯವಂತೆ. ಪ್ರಧಾನ ಮಂತ್ರಿಗಳು ಈ ಅರ್ಥದಲ್ಲಿ ಆ ಪದ ಬಳಸಿದ್ದಾರೆ.

ಆದರೆ ನಮ್ಮ ಉದ್ಯಮಿಗಳ 'ಪಶು ಚೈತನ್ಯ' ತಾನಾಗಿಯೇ ಕ್ರಿಯೆಗಿಳಿಯುವುದಿಲ್ಲ, ಅದಕ್ಕೆ ಸರಕಾರದ 'ಉತ್ತೇಜನೆ' ಬೇಕು, ಅದನ್ನು ಜನ ಸಾಮಾನ್ಯರಿಗೆ ಮಾಡಬೇಕಾದ ಖರ್ಚಿನಲ್ಲಿ ಕಡಿತ ತಂದೇ ಮಾಡಬೇಕು. ಅಂದರೆ ಅವರ ಪಶು ಚೈತನ್ಯ ಜಾಗೃತಗೊಳಿಸಬೇಕಾದರೆ ಜನಸಾಮಾನ್ಯರ ಮೇಲೆ ಇನ್ನಷ್ಟು ಹೊರೆಗಳನ್ನು ಹಾಕುವ ಬಗ್ಗೆ ಯೋಚಿಸಬೇಕು. ಪ್ರಧಾನ ಮಂತ್ರಿಗಳು ಹಣಕಾಸು ಇಲಾಖೆಯ ಅಧಿಕಾರಿಗಳಿಗೆ ಆ ನಿಟ್ಟಿನಲ್ಲಿ ಮುಂದುವರೆಯುವಂತೆ ತಾಕೀತು ಮಾಡಿದ್ದಾರಂತೆ.



ಹಿಂದಿನ ಹಣಕಾಸು ಮಂತ್ರಿಗಳು ಈ ವರ್ಷದ ಬಜೆಟಿನಲ್ಲಿ ತೆರಿಗೆ ತಪ್ಪಿಸುವುದನ್ನು ತಪ್ಪಿಸುವ ಕ್ರಮಗಳನ್ನು ಸೂಚಿಸಿದ್ದು ಈ ದೇಶಿ-ವಿದೇಶಿ ಉದ್ಯಮಿಗಳ ಭಾವನೆಗಳನ್ನು ಘಾಸಿಗೊಳಿಸಿರುವುದು ಈಗ ಭಾರತದ ಆರ್ಥಿಕ ಎದುರಿಸುತ್ತಿರುವ ಮುಗ್ಗಟ್ಟಿಗೆ ಒಂದು ಮುಖ್ಯ ಕಾರಣ ಎಂದು ಹೇಳಲಾಗುತ್ತಿದೆ. ಅದು ಪ್ರಸ್ತಾವವಾಗಿಯೇ ಉಳಿದು ಕಾರ್ಯರೂಪಕ್ಕೆ ಬರದಿದ್ದರೂ ಇಷ್ಟೊಂದು ಪರಿಣಾಮ ! ಅವನ್ನೆಲ್ಲ ಈಗ ಸರಿಪಡಿಸಬೇಕಾಗಿದೆಯಂತೆ. ಹಣಕಾಸು ಮಂತ್ರಿಗಳಾಗಿ ಪ್ರಧಾನ ಮಂತ್ರಿಗಳು ಮ್ಯುಚುವಲ್ ಫಂಡ್‌ಗಳು, ವಿಮಾವಲಯದಲ್ಲಿನ ಪರಿಸ್ಥಿತಿಯತ್ತ ಕೂಡ ಗಮನ ಹರಿಸಬೇಕಾಗಿದೆ ಎಂದು ತಾಕೀತು ಮಾಡಿದ್ದಾರಂತೆ. ಆದರೆ ಮತ್ತೆ ಎರಡಂಕಿಯತ್ತ ಧಾವಿಸುತ್ತಿರುವ ಹಣದುಬ್ಬರದ ಬಗ್ಗೆ ಏನೂ ಮಾತಿಲ್ಲ. ಅಲ್ಲದೆ ಇಪ್ಪತ್ತೆರಡೂವರೆ ರೂಪಾಯಿ ಬಡತನದ ರೇಖೆಯ (ಕು)ಖ್ಯಾತಿಯ ಯೋಜನಾ ಆಯೋಗದ ಉಪಾಧ್ಯಕ್ಷರು ಹಣಕಾಸು ಮಂತ್ರಿಗಳಾಗದಿದ್ದರೂ ದೇಶದ ಆರ್ಥಿಕದ ನಿರ್ವಹಣೆಯಲ್ಲಿ ಅವರ ಪಾತ್ರದ ಮಹತ್ವ ಏರಲಿದೆಯಂತೆ, ಅಂದರೆ 'ಮಿತವ್ಯಯ'ದ ಈ ಮಾದರಿಯ ಪ್ರಭಾವ ಹೆಚ್ಚಲಿದೆಯಂತೆ.

★

ಭ್ರಷ್ಟಾಚಾರಕ್ಕೆ ಮತ್ತೊಂದು ಯುಪಿಎ-2 ಮಂತ್ರಿಯ ವಿಕೆಟ್ ಪತನ

ಯುಪಿಎ-2 ಸರಕಾರದ ಸಣ್ಣ, ಪುಟ್ಟ ಮತ್ತು ಮಧ್ಯಮ ಕೈಗಾರಿಕೆಗಳ ಮಂತ್ರಿ ಹಾಗೂ ಐದು ಬಾರಿ ಹಿಮಾಚಲ ಪ್ರದೇಶದ ಮುಖ್ಯಮಂತ್ರಿಯಾಗಿದ್ದ ವೀರಭದ್ರ ಸಿಂಗ್ ರಾಜೀನಾಮೆ ಕೊಟ್ಟಿದ್ದಾರೆ. ಈ ಮೂಲಕ ಅವರು ಭ್ರಷ್ಟಾಚಾರದ ಆಪಾದನೆಯ ಮೇಲೆ ರಾಜೀನಾಮೆ ಕೊಟ್ಟಿರುವ ಮೂರನೇ ಯುಪಿಎ-2 ಮಂತ್ರಿಗಳಾಗಿದ್ದಾರೆ.

ಹಿಮಾಚಲ ಪ್ರದೇಶದ ನ್ಯಾಯಾಲಯ ಅವರ ಮೇಲೆ ಮತ್ತು ಹಿಂದೆ ಸಂಸತ್ ಸದಸ್ಯೆಯಾಗಿದ್ದ ಅವರ ಹೆಂಡತಿಯ ಮೇಲೆ ಭ್ರಷ್ಟಾಚಾರ ತಡೆ ಕಾನೂನಿನ ಅಡಿಯಲ್ಲಿ ಭ್ರಷ್ಟಾಚಾರ ಮತ್ತು ಕ್ರಿಮಿನಲ್ ದುರ್ವರ್ತನೆಯ ಆಪಾದನೆ ಹಾಕಲು ಸಾಕಷ್ಟು ಆಧಾರಗಳಿವೆ ಎಂದು ತೀರ್ಪು ಕೊಟ್ಟಿರುವ ಹಿನ್ನೆಲೆಯಲ್ಲಿ ಅವರು 'ನೈತಿಕ ಹೊಣೆ' ಹೊತ್ತು ರಾಜೀನಾಮೆ ನೀಡಿದ್ದಾರೆ.

ಇವರಿಬ್ಬರು ಪ್ರಮುಖ ಸಿಮೆಂಟ್ ಕಂಪನಿ ಗುಜರಾತ್ ಅಂಬುಜಾಗೆ ಸಿಮೆಂಟ್ ಸ್ಥಾವರ ಕಟ್ಟಲು ಅನುಮತಿ ನೀಡಲು, ಮತ್ತು ಪಾನೀಯ ತಯಾರಿಕಾ ಕಂಪನಿ ಮೋಹನ್ ಮಿಕಿನ್ಸ್‌ಗೆ ಕಾರ್ಖಾನೆ ಹಾಕಲು ಕೊಟ್ಟಿದ್ದ ಕಾಲಮಿತಿಯನ್ನು ವಿಸ್ತರಿಸಲು 1983 ರಲ್ಲಿ 5 ಲಕ್ಷ ರೂ. ಲಂಚ ಪಡೆದಿರುವ ಆಪಾದನೆ ಹಾಕಲಾಗಿದೆ.

ಈ ರಾಜೀನಾಮೆಯ ಅರ್ಥ ತನ್ನ ತಪ್ಪೊಪ್ಪಿಗೆಯೇನೂ ಅಲ್ಲ ಎಂದು ಈಗ ಮಾಜಿಯಾಗಿರುವ ಈ ಮಂತ್ರಿ ಮತ್ತು ಕಾಂಗ್ರೆಸ್ ಪಕ್ಷದ ವಕ್ತಾರರು ಒತ್ತಿ ಹೇಳಿದ್ದಾರೆ. ತಾನು ಕೊನೆಯವರೆಗೂ ಇದರ ವಿರುದ್ಧ ಹೋರಾಡುವುದಾಗಿ ಸಾರಿದ ಈ ಮಾಜಿ ಮಂತ್ರಿ/ಮಾಜಿ ಮುಖ್ಯಮಂತ್ರಿ ಹಿಮಾಚಲ ಪ್ರದೇಶದ ಈಗಿನ ಬಿಜೆಪಿ ಮುಖ್ಯಮಂತ್ರಿ ಹಿಮಾಚಲ ಪ್ರದೇಶದ ಅತ್ಯಂತ ಭ್ರಷ್ಟ ಮತ್ತು ಅತಿ ದೊಡ್ಡ ಸುಳ್ಳುಗ್ಗಾರ ಎಂದು ಪ್ರತಿ-ಆಪಾದನೆ ಮಾಡಿದ್ದಾರೆ.

★

ಹೆದ್ದಾರಿ ಸುಂಕ ಏರಿಕೆಗೆ ಯೋಜನಾ ಆಯೋಗದ ಯೋಜನೆ

ಹೆದ್ದಾರಿ ಸುಂಕಗಳನ್ನು ಕನಿಷ್ಟ 10ಶೇ. ಏರಿಸಬೇಕು, ಎಕ್ಸ್‌ಪ್ರೆಸ್ ಹೆದ್ದಾರಿಗಳಲ್ಲಿ ಇನ್ನೂ ಹೆಚ್ಚಿನ ಸುಂಕ ವಸೂಲಿ ಮಾಡಬೇಕು ಎಂಬ ಯೋಜನಾ ಆಯೋಗದ ಸಲಹೆಯನ್ನು ಕೇಂದ್ರ ಹೆದ್ದಾರಿ ಇಲಾಖೆ ವಿರೋಧಿಸುತ್ತಿದೆಯಂತೆ. ಈ ಪ್ರಸ್ತಾವದ ಹಿಂದಿರುವ ಹಣಕಾಸು ತರ್ಕವನ್ನು ಈ ಇಲಾಖೆಯ ಪ್ರಮುಖ ಅಧಿಕಾರಿಗಳು ಪ್ರಶ್ನಿಸುತ್ತಿದ್ದಾರೆ. ತಮಾಷೆಯೆಂದರೆ ಈ ಇಲಾಖೆಯ ಮಂತ್ರಿ ಮಾತ್ರ ಈ ಹಗ್ಗ ಜಗ್ಗಾಟದಲ್ಲಿ ಯೋಜನಾ ಆಯೋಗದ ಪಕ್ಷ ವಹಿಸಿದ್ದಾರೆ. ಇಲಾಖೆ ಒಂದು ಕಡೆ, ಮಂತ್ರಿ ಇನ್ನೊಂದು ಕಡೆ!

ಹೆದ್ದಾರಿ ಸುಂಕ ನಿರ್ಧಾರದಲ್ಲಿ ಸಗಟು ಬೆಲೆ ಸೂಚ್ಯಂಕಕ್ಕೆ ಹೆಚ್ಚಿನ ಒತ್ತು ನೀಡುವಂತೆ ಮತ್ತು ಎಕ್ಸ್‌ಪ್ರೆಸ್ ಹೆದ್ದಾರಿಗಳಿಗೆ ಹೆದ್ದಾರಿ ಸುಂಕದ ಒಂದೂವರೆ ಪಟ್ಟು ಸುಂಕ ನಿಗದಿ ಮಾಡಲು ಅನುವಾಗುವಂತೆ ರಾಷ್ಟ್ರೀಯ ಹೆದ್ದಾರಿ ಶುಲ್ಕ ನಿಯಮಗಳು, 2008ರಲ್ಲಿ ತಿದ್ದುಪಡಿ ತರಬೇಕೆಂಬುದು ಯೋಜನಾ ಆಯೋಗದ ಯೋಜನೆ.

ಈ ಯೋಜನೆಯನ್ನು ರೂಪಿಸುವಾಗಲಾಗಲೀ, ಅದನ್ನು ಹಣಕಾಸು ಇಲಾಖೆಗೆ ಕಳಿಸುವ ಮೊದಲಾಗಲೀ ಹೆದ್ದಾರಿ ಇಲಾಖೆಯ ವಿಶೇಷ ಕಾರ್ಯದರ್ಶಿ ಮತ್ತು ಹಣಕಾಸು ಸಲಹೆಗಾರರನ್ನು ಬದಿಗೊತ್ತಲಾಗಿದೆಯಂತೆ. ಅಲ್ಲದೆ ಮುಂದಿನ 18 ತಿಂಗಳಲ್ಲಿ ಮಂತ್ರಿಗಳ ಸ್ವಂತ ರಾಜ್ಯವಾದ ರಾಜಸ್ತಾನ ಸೇರಿದಂತೆ 12 ರಾಜ್ಯಗಳಲ್ಲಿ ವಿಧಾನ ಸಭಾ ಚುನಾವಣೆಗಳು ನಡೆಯಲಿರುವ ಸಂದರ್ಭದಲ್ಲಿಯೂ ಈ ಸಲಹೆ ಯೋಜನಾ ಆಯೋಗದಿಂದ ಹಣಕಾಸು ಇಲಾಖೆಗೆ ಹೋಗಿದೆ. ಸದ್ಯಕ್ಕೆ ಇದರ ಅಗತ್ಯವೇನಿಲ್ಲ, ಹೆದ್ದಾರಿಗಳ ಹರಾಜಿನಲ್ಲಿ ಸರಕಾರಕ್ಕೆ ಸಾಕಷ್ಟು ಹೆಚ್ಚಿನ ಆದಾಯ ಬರುತ್ತಿರುವುದರಿಂದ ಅಲ್ಲಿ ಸುಂಕ ಹೆಚ್ಚಿಸುವುದಕ್ಕಾಗಿಯಾಗಲೀ, ಎಕ್ಸ್‌ಪ್ರೆಸ್ ಹೆದ್ದಾರಿಗಳಿಗೆ ಒಂದೂವರೆ ಪಟ್ಟು ಸುಂಕ ಹಾಕಬೇಕೆನ್ನುವುದರಲ್ಲಾಗಲೀ ಯಾವುದೇ ಹಣಕಾಸು ಸಮರ್ಥನೆ ಕಾಣಿಸುತ್ತಿಲ್ಲ ಎಂಬುದು ಈ ಹೆದ್ದಾರಿ ಇಲಾಖೆಯ ಆರ್ಥಿಕ ಸಲಹೆಗಾರರ ವಾದ ಎನ್ನಲಾಗಿದೆ.

ಬರದ ನಿರ್ವಹಣೆಗೆ ಗಮನ ನೀಡುತ್ತಿಲ್ಲ ಪರಿಣತರ ಆತಂಕ

ಈಗ ಭಾರತದ ಹಲವು ರಾಜ್ಯಗಳಲ್ಲಿ ಬರ ಪರಿಸ್ಥಿತಿಯ ಭೀತಿ ಕಾಡುತ್ತಿದೆ. ಆದರೆ ಈ ಬಗ್ಗೆ ಏನೂ ಮಾಡಲಾಗುತ್ತಿಲ್ಲ ಎಂದು ಕೃಷಿ ತಜ್ಞರು ಆತಂಕ ವ್ಯಕ್ತಪಡಿಸಿದ್ದಾರೆ. ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ ಮುಂತಾದೆಡೆಗಳಲ್ಲಿನ ಬರ ಸನ್ನಿವೇಶ ಇದಕ್ಕೆ ಉದಾಹರಣೆ ಎಂದಿದ್ದಾರೆ ಪ್ರಖ್ಯಾತ ಕೃಷಿ ತಜ್ಞ ಡಾ.ಎಂ.ಎಸ್. ಸ್ವಾಮಿನಾಥನ್.

ಮಹಾರಾಷ್ಟ್ರದ ವಿದರ್ಭ ಪ್ರದೇಶದಲ್ಲಿ ಬರ ಪರಿಸ್ಥಿತಿಯಿಂದಾಗಿ 332 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆಂಧ್ರ ಪ್ರದೇಶದಲ್ಲಿ 109 ರೈತರು ಕಳೆದ ಒಂದು ವರ್ಷದಲ್ಲೇ ಬರದ ಪರಿಸ್ಥಿತಿಯಿಂದಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪ್ರತಿವರ್ಷ ಕೆಲವೆಡೆ ಪ್ರವಾಹ, ಇನ್ನು ಕೆಲವೆಡೆ ಬರ ಸಾಮಾನ್ಯವಾಗುತ್ತಿದೆ. ಆದರೂ ಮೊದಲೇ ಇದನ್ನು ಎದುರಿಸುವ ಯೋಜನೆಗಳಿಲ್ಲ, 'ಮರಣೋತ್ತರ' ಎನ್ನ ಬಹುದಾದ ಕ್ರಮಗಳನ್ನಷ್ಟೇ ಕೈಗೊಳ್ಳಲಾಗುತ್ತಿದೆ, ಅದೂ ಸಮರ್ಪಕವಾಗಿ ಅಲ್ಲ. ಪ್ರತಿಬಾರಿಯೂ ಹೀಗೆ ಮರಣೋತ್ತರ ಕ್ರಮಗಳ ಬದಲು, ಮುಂದಾಗಿ ಯೋಜಿಸಿ ಕ್ರಮಗಳನ್ನು ಕೈಗೊಳ್ಳಬೇಕು, ಉದಾಹರಣೆಗೆ, ಮಳೆ ಹೆಚ್ಚಿದ್ದ ವರ್ಷಗಳಲ್ಲಿ ಹೆಚ್ಚುವರಿ ನೀರನ್ನು ಸಂಗ್ರಹಿಸಿಡಲು, ಮಳೆ ಕೊಯ್ಲು ನಡೆಸಲು ಕ್ರಮಗಳನ್ನು ಕೈಗೊಂಡರೆ ಬರದ ವರ್ಷಗಳಲ್ಲಿ ಅದರ ತೀವ್ರತೆ ಕಡಿಮೆಯಾಗಿ ನಿರ್ವಹಣೆ ಸಾಧ್ಯವಾಗುತ್ತದೆ ಎಂದಿದ್ದಾರೆ ಡಾ. ಸ್ವಾಮಿನಾಥನ್.

ಸಾಮಾನ್ಯವಾಗಿ ಮಳೆಗಾಲದ ನಾಲ್ಕು ತಿಂಗಳಲ್ಲಿ ಕಳೆದ 50 ವರ್ಷಗಳಲ್ಲಿ ಬಿದ್ದ ಮಳೆಯ ಸರಾಸರಿಯ 96 ಶೇ.ದಿಂದ 104 ಶೇ.ದ ವರೆಗೆ ಮಳೆ ಬರಬೇಕು. ಇದು ಶೇ. 90ಕ್ಕೆ ಇಳಿದರೆ, ಅದನ್ನು ಬರ ಪರಿಸ್ಥಿತಿಯೆಂದು ಪರಿಣಿತರು ಪರಿಗಣಿಸುತ್ತಾರೆ. ಏಪ್ರಿಲ್‌ನಲ್ಲಿ ಭಾರತದ ಹವಾಮಾನ ಇಲಾಖೆ, ಈ ಬಾರಿ 99 ಶೇ. ಮಳೆಯಿರುತ್ತದೆ ಎಂದಿತು, ಈಗ ಮಳೆಯ ನಿರೀಕ್ಷೆಯನ್ನು 96 ಶೇ.ಕ್ಕೆ ಇಳಿಸಿದೆ. ಜೂನ್ 21- 27ರ ವಾರದಲ್ಲಿ ಮಳೆಯಲ್ಲಿ 18 ಶೇ. ಕೊರತೆ ದಾಖಲಾಗಿದೆಯಂತೆ. ಇದು ಆತಂಕಕಾರಿ ಎಂದು ಪರಿಣಿತರು ಹೇಳುತ್ತಾರೆ.

ಜಗದಗಲ


'ಶರತ್‌ಚಂದ್ರ

ಈಜಿಪ್ಟ್: ಇಸ್ಲಾಂವಾದಿ – ಮಿಲಿಟರಿ ರಾಜಿ ?

ಈಜಿಪ್ಟಿನ ಅಧ್ಯಕ್ಷೀಯ ಚುನಾವಣೆಯ ಎರಡನೇ ಸುತ್ತು ಮುಗಿದಿದ್ದು, ಫ್ರೀಡಂ ಅಂಡ್ ಜಸ್ಟೀಸ್ ಪಾರ್ಟಿ (ಎಫ್.ಜೆ.ಪಿ.)ಯ ಅಭ್ಯರ್ಥಿ ಮೊಹಮದ್ ಮೊರ್ಸಿಯವರ ಆಯ್ಕೆಯನ್ನು ಬಹಳ ವಿಳಂಬದ ನಂತರ ಅಧಿಕೃತವಾಗಿ ಘೋಷಿಸಲಾಗಿದೆ. ಎಫ್.ಜೆ.ಪಿ. ಮುಸ್ಲಿಂ ಬ್ರದರ್ ಹುಡ್ ಎಂಬ ಇಸ್ಲಾಂವಾದಿ ಸಂಘಟನೆಯ ರಾಜಕೀಯ ರಂಗ ಎನ್ನಲಾಗಿದೆ. ಅವರು ಎರಡನೇ ಸುತ್ತಿನಲ್ಲಿ ಶೆ. 51.73 ಮತ ಗಳಿಸಿದ್ದರು. ಅವರು ಶೇ. 48.27 ಮತ ಗಳಿಸಿದ ಮಾಜಿ ಸರ್ವಾಧಿಕಾರಿ ಹುಸ್ನಿ ಮುಬಾರಕ್ ಅವರ ಕೊನೆಯ ಪ್ರಧಾನಿಯಾಗಿದ್ದ ಅಹ್ಮದ್ ಶಫಿಕ್ ಅವರನ್ನು ಸೋಲಿಸಿದ್ದಾರೆ. ಮತದಾನದ ಪ್ರಮಾಣ ಪಾರ್ಲಿಮೆಂಟರಿ (ಸರಾಸರಿ ಶೆ. 61ರಿಂದ) ಚುನಾವಣೆಗಳಿಗೆ ಹೋಲಿಸಿದರೆ, ಅಧ್ಯಕ್ಷೀಯ (ಶೇ. 47ಕ್ಕೆ) ಚುನಾವಣೆಗಳಲ್ಲಿ ಕುಸಿದಿತ್ತು.

ಅಧ್ಯಕ್ಷೀಯ ಚುನಾವಣೆಯ ಮೊದಲ ಮತ್ತು ಎರಡನೇ ಸುತ್ತಿನ ಮತದಾನದ ನಡುವಿನ ರಾಜಕೀಯ ಬೆಳವಣಿಗೆಗಳು, ಈ ಚುನಾವಣೆಯ ಫಲಿತಾಂಶದ ಅರ್ಥವಂತಿಕೆಗೆ ಬಲವಾದ ಹೊಡೆತ ನೀಡಿವೆ. ಈ ಎರಡು ಅಭ್ಯರ್ಥಿಗಳಲ್ಲದೆ, ಈ ನಡುವಿನ ಬೆಳವಣಿಗೆಗಳಿಲ್ಲದೆ ಇದ್ದರೆ ಇದು 'ಅರಬ್ ವಸಂತ'. ಮತ್ತು 'ತಾಹ್ರಿರ್ ಚೌಕ'ದ ಸ್ಫೂರ್ತಿದಾಯಕ ಬೆಳವಣಿಗೆಗಳಿಗೆ ಹರ್ಷದಾಯಕ ಕೊನೆಯಾಗಬಹುದಿತ್ತು. 'ಪ್ರಜಾಪ್ರಭುತ್ವದ ವಿಜಯ' ಎಂದೆಲ್ಲಾ ಹೇಳಬಹುದಿತ್ತು. ಆದರೆ ಗೆದ್ದ ಪಕ್ಷ ಎಫ್.ಜೆ.ಪಿ. ಅಥವಾ ಅಭ್ಯರ್ಥಿ ಮೊರ್ಸಿ ಸಹ ಹೀಗೆ ಹೇಳಿಲ್ಲ. 'ತಾಹ್ರಿರ್ ಚೌಕ' ಚಳುವಳಿಯಲ್ಲಿ ದೊಡ್ಡ ಪಾತ್ರ ವಹಿಸಿದ ಶಕ್ತಿಗಳು ವಿಜಯೋತ್ಸವ ಆಚರಿಸಲಿಲ್ಲ. ಮೊದಲ ಸುತ್ತಿನಲ್ಲಿ ಈ ಎರಡು ಅಭ್ಯರ್ಥಿಗಳು ಪಡೆದ ಒಟ್ಟು ಮತ ಶೆ.50ಕ್ಕಿಂತಲೂ ಕಡಿಮೆ ಇತ್ತು ಎಂದು ಇಲ್ಲಿ ಗಮನಿಸಬಹುದು. ಮೊದಲ ಸುತ್ತಿನಲ್ಲಿ ಎಡ-ಮಧ್ಯಮ ಪಂಥೀಯ ಸೆಕ್ಯುಲರ್ ಅಭ್ಯರ್ಥಿ ಸಬಾಹಿ ಶೇ. 20 ಮತ ಗಳಿಸಿದರೂ ಎರಡನೇ ಸುತ್ತಿಗೆ ಬರಲು ಸಾಧ್ಯವಾಗಲಿಲ್ಲ. ಆದ್ದರಿಂದ ದೊಡ್ಡ ಸಂಖ್ಯೆಯ ಸೆಕ್ಯುಲರ್ ಪ್ರಜಾಪ್ರಭುತ್ವವಾದಿಗಳಿಗೆ ಎರಡನೆ ಸುತ್ತಿನಲ್ಲಿ 'ಅತ್ತ ದರಿ ಇತ್ತ ಪುಲಿ' ಎಂಬ ಸ್ಥಿತಿ ಇದ್ದು ನಿಜವಾದ ಆಯ್ಕೆ ಇರಲಿಲ್ಲ. ನಿಜವಾದ ಮತದಾನ ಬಹಳಷ್ಟು ಕಡಿಮೆ ಆಗಿದ್ದು, ಮತದಾನ ಮಾಡಿದ ಸೆಕ್ಯುಲರ್ ಪ್ರಜಾಪ್ರಭುತ್ವವಾದಿಗಳು ಸರ್ವಾಧಿಕಾರಿ ಶಕ್ತಿಗಳನ್ನು ಹೊರಗಿಡಲು ಇಸ್ಲಾಂವಾದಿಗಳಿಗೆ ಮತ ನೀಡಬೇಕಾಯಿತು.

ಇದಕ್ಕೆ ಮುಖ್ಯ ಕಾರಣ ಎರಡನೆ ಸುತ್ತಿನ ಚುನಾವಣೆಯ ಕೆಲವೇ ದಿನಗಳ ಮೊದಲಿನ ಈಜಿಪ್ಟಿನ ಸಂವೈಧಾನಿಕ ಕೋರ್ಟು ಮತ್ತು ಮಿಲಿಟರಿ ಸುಪ್ರೀಂ ಕೌನ್ಸಿಲಿನ ಹಲವು ನಿರ್ಣಯುಗಳು. ಇವರೆಡನ್ನೂ ಹಿಂದಿನ ಸರ್ವಾಧಿಕಾರಿ ಹುಸ್ನಿ ಮೊಬಾರಕ್ ನೇಮಿಸಿದ್ದು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಕಳೆದ ವರ್ಷ ಚುನಾಯಿತವಾದ ಪಾರ್ಲಿಮೆಂಟನ್ನು 'ಕಾನೂನು-ಬಾಹಿರ' 'ಅಸಂವೈಧಾನಿಕ' ಎಂದು ಘೋಷಿಸಿ ವಿಸರ್ಜಿಸಿದೆ. ಇದರಿಂದ ಪಾರ್ಲಿಮೆಂಟು ಸಂವಿಧಾನ ಬರೆಯಲು ನೇಮಿಸಿದ ಸಂವೈಧಾನಿಕ ಮಂಡಳಿ ಸಹ 'ಕಾನೂನು-ಬಾಹಿರ' 'ಅಸಂವೈಧಾನಿಕ'ವೇ ಎಂಬ ಪ್ರಶ್ನೆ ಎದ್ದಿದೆ. ಸಂವಿಧಾನ ಬರೆಯುವ ಕೆಲಸ ಸ್ಥಗಿತಗೊಳ್ಳಲಿದೆ. ಈ ನಡುವೆ ಆಳುವ ಮಿಲಿಟರಿ ಸುಪ್ರೀಂ ಕೌನ್ಸಿಲ್ ಮುಂಬರುವ – ಪಾರ್ಲಿಮೆಂಟು, ಅಧ್ಯಕ್ಷ ಮತ್ತು ಸಂವಿಧಾನ – ಮಿಲಿಟರಿ ಸುಪ್ರೀಂ ಕೌನ್ಸಿಲಿನ ಪರಮಾಧಿಕಾರವನ್ನು ಪ್ರಶ್ನಿಸುವಂತಿಲ್ಲ ಎಂಬ ಆಜ್ಞೆ ಹೊರಡಿಸಿದೆ. ಪಾರ್ಲಿಮೆಂಟು ಅಥವಾ ಅಧ್ಯಕ್ಷ ಮಾಡಬಹುದಾದ ಸಂವಿಧಾನ, ಕಾನೂನು ಮತ್ತು ನಿರ್ಣಯಗಳನ್ನು ವಿಟೋ ಮಾಡುವ ಅಧಿಕಾರವನ್ನು ತನ್ನಲ್ಲೇ ಇರಿಸಿಕೊಂಡಿದೆ. ಸಾಮಾನ್ಯವಾಗಿ ಚುನಾಯಿತ ಅಧ್ಯಕ್ಷರಿಗೆ ಇರುವ ಮಿಲಿಟರಿ ಮೇಲೆ ನಿಯಂತ್ರಣ ಮತ್ತು ಯುದ್ಧ ಘೋಷಿಸುವ ಅಧಿಕಾರವನ್ನು ಅಧ್ಯಕ್ಷರಿಗೆ ಕೊಡದೆ ಅವರ ಅಧಿಕಾರವನ್ನು ತೀವ್ರವಾಗಿ ಮೊಟಕುಗೊಳಿಸಿದೆ. ನೇರವಾಗಿ ತಾನೇ ಕಾನೂನು ಮಾಡುವ, ಸಾರ್ವಜನಿಕ ಪ್ರಕ್ಷುಬ್ಧತೆ ಉಂಟಾದಾಗ 'ಆಂತರಿಕ ತುರ್ತುಪರಿಸ್ಥಿತಿ' ಘೋಷಿಸಿ ನಾಗರಿಕರನ್ನು ಬೇಕಾಬಿಟ್ಟಿ ಬಂಧಿಸುವ, ಆಂತರಿಕವಾಗಿಯೂ ಬೇಕಾದಾಗ ಮಿಲಿಟರಿ ಬಳಸುವ ಅಧಿಕಾರವನ್ನು ಉಳಿಸಿಕೊಂಡಿದೆ. ಮಿಲಿಟರಿ ಈಜಿಪ್ಟಿನಲ್ಲಿ ರಾಜಕೀಯ ಮಾತ್ರವಲ್ಲ, ದೊಡ್ಡ ಆರ್ಥಿಕ ಶಕ್ತಿಯಾಗಿದ್ದು ಒಟ್ಟು ರಾಷ್ಟ್ರೀಯ ಉತ್ಪನ್ನದ ಶೆ. 40 ಭಾಗ ನೇರವಾಗಿ ಅದರ ನಿಯಂತ್ರಣದಲ್ಲಿದೆ. ಮಿಲಿಟರಿ ಅಮೆರಿಕನ್ ಸರ್ಕಾರದ ಜತೆ ಘನಿಷ್ಟ ಸಂಬಂಧವನ್ನು ಸಹ ಹೊಂದಿದೆ. ಅದು 130 ಕೋಟಿ ಡಾಲರುಗಳ ವಾರ್ಷಿಕ ಸಬ್ಸಿಡಿಯನ್ನು ಪಡೆಯುತ್ತದೆ. ಆದ್ದರಿಂದ ಅದು ತನ್ನ ಅಧಿಕಾರ ಸವಲತ್ತುಗಳನ್ನು ಅಷ್ಟು ಸುಲಭದಲ್ಲಿ ಬಿಟ್ಟು ಕೊಡುವುದಿಲ್ಲ. ಎರಡನೇ ಸುತ್ತಿನಲ್ಲಿ 9 ಲಕ್ಷ ಚುನಾವಣಾ ಕಾರ್ಡುಗಳನ್ನು ಸೈನಿಕರಿಗೆ ವಿತರಿಸಿ ಮತ್ತು ಇತರ ಚುನಾವಣಾ ಅಕ್ರಮಗಳನ್ನು ದೊಡ್ಡ ಪ್ರಮಾಣದಲ್ಲಿ ಮಾಡಿ ಮಿಲಿಟರಿ ಅಭ್ಯರ್ಥಿ ಶಫಿಕ್ ಗೆಲ್ಲಿಸಲು ಪ್ರಯತ್ನ ನಡೆದಿತ್ತು ಎನ್ನಲಾಗಿದೆ.



ಇದಕ್ಕೆ ಮೊದಲೇ ಪಾರ್ಲಿಮೆಂಟರಿ ಚುನಾವಣೆಗಳ ಸಮಯದಲ್ಲೇ 'ಅರಬ್ ವಸಂತ' ಮತ್ತು 'ತಾಹ್ರಿರ್ ಚೌಕ'ದ ಸ್ಫೂರ್ತಿ ಮುಂದಕ್ಕೆ ಹೋಗುವ ಬಗ್ಗೆ ಪ್ರಜಾಪ್ರಭುತ್ವ ಶಕ್ತಿಗಳು ಅನುಮಾನ ವ್ಯಕ್ತಪಡಿಸಿದ್ದವು. ಮಿಲಿಟರಿ ಸುಪ್ರೀಂ ಕೌನ್ಸಿಲ್ ರಾಜೀನಾಮೆ ಕೊಡದೆ ಚುನಾವಣೆಗೆ ಒಪ್ಪಿಕೊಳ್ಳಬಾರದು. ಅಂತಹ ಚುನಾವಣೆಗಳನ್ನು ಬಹಿಷ್ಕರಿಸಬೇಕು ಎಂದು 'ತಾಹ್ರಿರ್ ಚೌಕ'ದ ಚಳುವಳಿ ನಡೆಸುತ್ತಿದ್ದ ಶಕ್ತಿಗಳು ಒತ್ತಾಯಿಸಿದ್ದವು. ಆದರೆ ಮುಸ್ಲಿಂ ಬ್ರದರ್ ಹುಡ್ ಮತ್ತು ಇತರ ಇಸ್ಲಾಂವಾದಿ ಪಕ್ಷಗಳು ಸಂಘಟನೆಗಳು ಚುನಾವಣೆ ಬಗ್ಗೆ ತೋರಿದ ಅತಿ ಆಸಕ್ತಿ ಮತ್ತು ಉತ್ಸಾಹದಿಂದಾಗಿ ಸರ್ವಾಧಿಕಾರಿ-ವಿರೋಧಿ ಚಳುವಳಿ ಒಡೆಯುವುದು ಉಚಿತವಲ್ಲ ಎಂದು ಮಿಲಿಟರಿ ಸುಪ್ರೀಂ ಕೌನ್ಸಿಲ್ ನಡೆಸಿದ ಚುನಾವಣೆಗಳಲ್ಲಿ ಭಾಗವಹಿಸಲು ಒಪ್ಪಿಕೊಂಡಿದ್ದವು. ಈ ಇಸ್ಲಾಂವಾದಿಗಳು ಪ್ರಜಾಪ್ರಭುತ್ವ ಚಳುವಳಿಯಲ್ಲಿ ಅಷ್ಟೇನೂ ದೊಡ್ಡ ಪಾತ್ರ ವಹಿಸಿರಲಿಲ್ಲ. ಆದರೆ ಹುಸ್ನಿ ಮೊಬಾರಕ್ ಸರ್ವಾಧಿಕಾರಿ ಆಡಳಿತ ಕೊನೆಗೊಳ್ಳುವ ಸಾಧ್ಯತೆ ಮನಗಂಡು ಕೊನೆಗಳಿಗೆಯಲ್ಲಿ ಚಳುವಳಿಯಲ್ಲಿ ಧುಮುಕಿದ್ದವು. ಅಲ್ಲದೆ ಕೋರ್ಟಿನ ತೀರ್ಪು ಮತ್ತು ಮಿಲಿಟರಿ ಸುಪ್ರೀಂ ಕೌನ್ಸಿಲಿನ ನಿರ್ಣಯಗಳು ಪ್ರಕಟವಾದಾಗ ತೀವ್ರ ಪ್ರತಿಭಟ[...] ನಡೆಸಬೇಕು. ಅಗತ್ಯ ಬಿದ್ದರೆ ಎರಡನೇ ಸುತ್ತಿ[...] ಅಧ್ಯಕ್ಷೀಯ ಚುನಾವಣೆಗಳನ[...] ಮುಂದೂಡಬೇಕು ಅಥವಾ ಬಹಿಷ್ಕರಿಸಬೇಕ[...] ಎಂಬ ಪ್ರಜಾಪ್ರಭುತ್ವ ಶಕ್ತಿಗಳ ಒತ್ತಾಯವನ್ನು[...] ಎಫ್.ಜೆ.ಪಿ. ನಿರಾಕರಿಸಿತ್ತು ಎಂದು ಇ[...] ನೆನಪಿಸಿಕೊಳ್ಳಬೇಕು.

ಪ್ರಜಾಪ್ರಭುತ್ವದ ಬಗ್ಗೆ ಇಸ್ಲಾಂವಾದಿಗಳ ಆಸ[...] ಕಾಳಜಿ ಅಥವಾ ಅದರ ಕೊರತೆ ಬಗ್ಗೆ ಎಲ್ಲರಿಗ[...] ತಿಳಿದದ್ದೇ. ಮಿಲಿಟರಿ ಸುಪ್ರೀಂ ಕೌನ್ಸಿಲನ್ನು ಮತ[...] ಎಲ್ಲಾ ಹುಸ್ನಿ ಮುಬಾರಕ್ ಚೇಲಾಗಳನ[...] ಅಧಿಕಾರದಿಂದ ಕೆಳಗಿಳಿಸದೆ, ಓಡಿಸ[...] ಈಜಿಪ್ಟಿನಲ್ಲಿ ಪ್ರಜಾಪ್ರಭುತ್ವ ಸ್ಥಾಪಿಸಲು ಸಾಧ್ಯವಿ[...] ಎಂಬ ಪ್ರಜಾಪ್ರಭುತ್ವ ಶಕ್ತಿಗಳ ಅನುಮಾನ ಈ[...] ನಿಜವಾಗಿದೆ. ಹೊಸ ಅಧ್ಯಕ್ಷರಿಗೆ ಯಾವಾ[...] ಎಷ್ಟು ಅಧಿಕಾರ ಹಸ್ತಾಂತರಿಸಲಾಗುವುದು ಈ[...] ಮಿಲಿಟರಿ ಸುಪ್ರೀಂ ಕೌನ್ಸಿಲಿನ ಮರ್ಜಿ ಮೇ[...] ನಿಂತಿದೆ. ಈ ನಡುವೆ ಮಿಲಿಟರಿ ಮತ್ತ[...] ಇಸ್ಲಾಂವಾದಿಗಳ ನಡುವೆ ಅಧಿಕಾ[...] 'ಹಂಚಿಕೊಳ್ಳುವ' ಬಗ್ಗೆ ಒಂದು ಒಪ್ಪಂದವಾಗಿದ[...] ಇಸ್ಲಾಂವಾದಿಗಳು ಮಿಲಿಟರಿಯ 'ಜೂನಿಯರ್[...] ಪಾರ್ಟನರ್' ಆಗಿರಲು ಒಪ್ಪಿದ್ದಾರೆ. ನಿಜವಾ[...] ಅಧಿಕಾರ ಮಿಲಿಟರಿಯಲ್ಲೇ ಇರುತ್ತದೆ. ಈ[...] 'ರಾಜಿ'ಯನ್ನು ಸಂವಿಧಾನದಲ್ಲೂ ಮೂಡಿಸಲ[...] ಇಸ್ಲಾಂವಾದಿಗಳು ಒಪ್ಪಿಕೊಂಡಿದ್ದಾರೆ. ಎಂ[...] ವದಂತಿ ಹರಡಿದೆ.

ಅಧ್ಯಕ್ಷೀಯ ಚುನಾವಣೆಗಳ ಘೋಷಣೆಯ[...] ವಿಳಂಬ, ದೀರ್ಘ ಮಿಲಿಟರಿ-ಇಸ್ಲಾಂವಾ[...] ಮಾತುಕತೆಗಳು ಇದನ್ನೇ ಸೂಚಿಸುತ್ತಿವೆ. ಮುಸ್ಲಿ[...] ಬ್ರದರ್ ಹುಡ್ 'ತಾಹ್ರಿರ್ ಚೌಕ'ದ ಚಳುವ[...] ಸಿಡಿದಾಗಿನಿಂದ ಪ್ರಜಾಪ್ರಭುತ್ವ ಶಕ್ತಿಗಳು ಮ[...] ಮಿಲಿಟರಿ ಸರ್ಕಾರ ಎರಡರ ಜತೆಗೂ ಸಹಕಾ[...] 'ರಾಜಿಯ ಸೂತ್ರ ಅನುಸರಿಸಿ ಅಧಿಕಾರದ ಪಾ[...] ಪಡೆಯುವ ತನ್ನ ಬೇಳೆ ಬೇಯಿಸಿಕೊಳ್ಳುವುದರ[...] ತೊಡಗಿತ್ತು ಎನ್ನಲಾಗಿದೆ. ಅಮೆರಿಕನ್ ಸರ್ಕಾ[...] ಸಹ ಇಸ್ಲಾಂವಾದಿಗಳು ಮತ್ತು ಮಿಲಿ[...] ನಡುವೆ ರಾಜಿ ಒಪ್ಪಂದಕ್ಕೆ ಬರುವುದರಲ್ಲಿ ಒತ್ತ[...] ಆಮಿಷಗಳನ್ನು ಬಳಸಿದೆ. ಇಸ್ಲಾಂವಾದಿಗಳು ಈ[...] ರಾಜಿಗೆ ಒಪ್ಪದಿದ್ದರೆ ಅಹ್ಮದ್ ಶಫಿಕ್ ಅ[...] ವಿಜಯ ಘೋಷಿಸಿ ನೇರ ಮಿಲಿಟರಿ ಆಡಳ[...] ತರಲಾಗುವುದು ಮತ್ತು ಇಸ್ಲಾಂವಾದಿಗಳನ[...] ನಿಷೇಧಿಸಲಾಗುವುದು ಎಂದು ಬೆದರ[...] ಹಾಕಲಾಗಿತ್ತಂತೆ.

'ಅರಬ್ ವಸಂತ'ದ ಪ್ರಜಾಪ್ರಭುತ್ವ ಸವಾ[...] ಎದುರಿಸಲು ಈ ಸೂತ್ರವನ್ನು ಈಜಿಪ[...] ಮಾತ್ರವಲ್ಲ ಎಲ್ಲಾ ಅರಬ್ ದೇಶಗಳ[...] ಬಳಸಲಾಗುವುದು ಎಂಬುದು ಟುನಿಶಿ[...] ನಂತರದ ಎಲ್ಲಾ ಚುನಾವಣೆಗಳಲ್ಲಿ ಸ್ಪಷ್ಟವಾಗ[...]

ಗ್ರೀಸ್: 'ಮಿತವ್ಯಯ'ವಾದಿಗಳ ಸೀಮಿತ ಗೆಲುವು

ಗ್ರೀಸಿನಲ್ಲಿ ನಡೆದ ಮರುಚುನಾವಣೆಗಳಲ್ಲಿ 'ಮಿತವ್ಯಯ' ನೀತಿ ವಿರೋಧಿಗಳಿಗೆ ಬಹುಮತ ಬರಬಹುದು ಎಂಬ ವ್ಯಾಪಕ ನಿರೀಕ್ಷೆ ಸುಳ್ಳಾಗಿದೆ. ನವ-ಉದಾರವಾದ ಮತ್ತು 'ಮಿತವ್ಯಯ' ನೀತಿಗಳ ಬೆಂಬಲಿಗರಾದ ಬಲಪಂಥೀಯ ನ್ಯೂ ಡೆಮೊಕ್ರಸಿ ಮತ್ತು ಪಾಸೊಕ್ (ಸೋಶಲಿಸ್ಟ್) ಪಕ್ಷಗಳು, ಡೆಮೊಕ್ರಾಟಿಕ್ ಲೆಫ್ಟ್ (ದಿಮಾರ್) ಎಂಬ ಸಣ್ಣ ಎಡಪಕ್ಷದ ಬೆಂಬಲದೊಂದಿಗೆ ಸ್ಪಷ್ಟ ಬಹುಮತ ಪಡೆದಿದ್ದು ಸರ್ಕಾರ ರಚಿಸಿವೆ.

ನ್ಯೂ ಡೆಮೊಕ್ರಸಿ ಶೆ.29.7 (ಮೇ ಚುನಾವಣೆಗಿಂತ ಶೇ.11 ಹೆಚ್ಚು) ಮತ ಪಡೆದು ಮೊದಲ ಸ್ಥಾನ ಉಳಿಸಿಕೊಂಡಿತು. ಗ್ರೀಕ್ ಚುನಾವಣಾ ನಿಯಮಗಳ ಪ್ರಕಾರ ಮೊದಲ ಸ್ಥಾನದಲ್ಲಿರುವ ಪಕ್ಷವಾಗಿ 50 'ಬೋನಸ್' ಸೀಟುಗಳ ಜತೆ (21 ಹೆಚ್ಚು ಸೀಟು ಗಳಿಸಿ) 129 ಸೀಟುಗಳನ್ನು ಗಳಿಸಿದೆ. ಪಾಸೊಕ್ ಶೇ. 12.3 (ಮೇ ಚುನಾವಣೆಗಿಂತ ಶೇ.1 ಕಡಿಮೆ) ಮತ ಪಡೆದು, (8 ಸೀಟು ಕಳೆದುಕೊಂಡು) 33 ಸೀಟುಗಳನ್ನು ಗಳಿಸಿ ಮೂರನೇ ಸ್ಥಾನದಲ್ಲೇ ಉಳಿದಿದೆ. ಈ ಎರಡು ಪಕ್ಷಗಳ ಸಮ್ಮಿಶ್ರ ಸರ್ಕಾರಕ್ಕೆ (300 ಸದಸ್ಯರಿರುವ ಪಾರ್ಲಿಮೆಂಟಿನಲ್ಲಿ 162) ಸ್ಪಷ್ಟ ಬಹುಮತ ಇದೆ. ಆದರೆ ಇನ್ನೂ 'ಸುಭದ್ರ' ಸರ್ಕಾರ ರಚಿಸಲು ಡೆಮೊಕ್ರಾಟಿಕ್ ಲೆಫ್ಟ್ (ದಿಮಾರ್) ಎಂಬ ಸಣ್ಣ ಎಡಪಕ್ಷ ಬೆಂಬಲ ಪಡೆಯಲು ಸಫಲವಾಗಿವೆ. ನ್ಯೂ ಡೆಮೊಕ್ರಸಿ ಮತ್ತು ಪಾಸೊಕ್ ಚುನಾವಣೆಯ ಮೊದಲೂ ನಂತರವೂ 'ರಾಷ್ಟ್ರೀಯ ಐಕ್ಯತೆ' ಸರ್ಕಾರ ರಚಿಸಲು ಪ್ರಯತ್ನಿಸಿ ವಿಫಲರಾಗಿದ್ದವು. ದಿಮಾರ್ ಶೇ.6.26 (ಮೇ ಚುನಾವಣೆಗಿಂತ ಸ್ವಲ್ಪ ಹೆಚ್ಚು - ಶೆ.0.15) ಮತ ಪಡೆದು, (2 ಸೀಟು ಕಳೆದುಕೊಂಡು) 17 ಸೀಟುಗಳನ್ನು ಗಳಿಸಿದೆ.

ಮೊದಲ ಸ್ಥಾನದಲ್ಲಿ ಬರಬಹುದು ಎಂದು ನಿರೀಕ್ಷಿಸಲಾಗಿದ್ದ ಎಡೆಪಂಥೀಯ ಪಕ್ಷ ಸಿರಿಝಾ ಹತ್ತಿರದ ಎರಡನೇ ಸ್ಥಾನ ಗಳಿಸಿತು. ಶೇ. 26.9 (ಮೇ ಚುನಾವಣೆಗಿಂತ ಶೆ. 10 ಹೆಚ್ಚು) ಮತ ಪಡೆದು, (19 ಸೀಟು ಹೆಚ್ಚಿಸಿಕೊಂಡು) 71 ಸೀಟುಗಳನ್ನು ಗಳಿಸಿದೆ. ಆದರೆ ಇನ್ನೊಂದು ಎಡ ಪಕ್ಷ ಗ್ರೀಕ್ ಕಮ್ಯುನಿಸ್ಟ್ (ಕೆಕೆಇ) ಪಕ್ಷ ಮಾತ್ರ ತೀವ್ರವಾಗಿ ಮತ ಕಳೆದುಕೊಂಡಿತು. ಕೆಕೆಇ ಶೇ. 4.5 (ಮೇ ಚುನಾವಣೆಗಿಂತ ಶೆ.4 ಕಡಿಮೆ) ಮತ ಪಡೆದು, (14 ಸೀಟು ಕಳೆದುಕೊಂಡು) 12 ಸೀಟುಗಳನ್ನು ಗಳಿಸಿದೆ.



ಗೋಲ್ಡನ್ ಡಾನ್ ಎಂಬ ಅರೆ-ಫ್ಯಾಸಿಸ್ಟ್ ವಲಸಿಗರ-ವಿರೋಧಿ ಪಕ್ಷ ತನ್ನ ಸ್ವಲ್ಪವೇ (3 ಕಳೆದುಕೊಂಡು 18) ಸೀಟು ಮತ್ತು (ಶೇ. 6.97, ಕೇವಲ ಶೇ. 0.05 ಕಳೆದುಕೊಂಡು) ಮತ ಕಳೆದುಕೊಂಡು ತನ್ನ ಸ್ಥಾನ ಉಳಿಸಿಕೊಂಡಿದೆ. ಚುನಾವಣಾ ಪ್ರಚಾರದ ಸಮಯದಲ್ಲಿ ಟಿವಿ ಸ್ಟುಡಿಯೊದಲ್ಲಿ ಈ ಪಕ್ಷದ ಅಭ್ಯರ್ಥಿಯೊಬ್ಬ ಎಡಪಕ್ಷಗಳಾದ ಸಿರಿಝಾ ಮತ್ತು ಕೆಕೆಇ ಮಹಿಳಾ ಅಭ್ಯರ್ಥಿಗಳ ಮೇಲೆ ದಾಳಿಮಾಡಿದ ಕುಖ್ಯಾತಿ ಪಡೆದೂ, ಈ ಪಕ್ಷ ತನ್ನ ಬೆಂಬಲ ಉಳಿಸಿಕೊಂಡಿದೆ ಎಂಬುದು ಆಶ್ಚರ್ಯವೆಂದು ಕಂಡರೂ, ವಲಸಿಗರ-ವಿರೋಧಿ ನೀತಿ ಜತೆಗೆ ಮಿತವ್ಯಯ ಮತ್ತು ಯುರೋ ವಿರುದ್ಧ ಅದರ ಉಗ್ರನೀತಿ ಇದಕ್ಕೆ ಕಾರಣವಾಗಿರಬಹುದು.

ಗ್ರೀಕ್ ಚುನಾವಣಾ ಫಲಿತಾಂಶ ಇತ್ತೀಚಿನ ಬೆಳವಣಿಗೆಗಳ ಬೆಳಕಿನಲ್ಲಿ ಆಶ್ಚರ್ಯ ತರಬಹುದಾದರೂ ತುಸು ಆಳವಾಗಿ ನೋಡಿದರೆ ಅರ್ಥವಾಗುವಂತಹುದೇ. ಮೊದಲನೆಯದಾಗಿ ನವ-ಉದಾರವಾದ ಮತ್ತು 'ಮಿತವ್ಯಯ' ನೀತಿಗಳ ವಿರೋಧಿ ಸರ್ಕಾರ ಬಂದು, ಗ್ರೀಸ್ ಯುರೋ ನಾಣ್ಯ ವ್ಯವಸ್ಥೆ ಮತ್ತು ಯುರೋ ಒಕ್ಕೂಟದಿಂದ ಹೊರ ನಡೆದರೆ ಗ್ರೀಸಿಗೆ ಎಲ್ಲಾ ಸಾಲಗಳನ್ನು ನಿಲ್ಲಿಸಿ ಅದು ದಿವಾಳಿಯಾಗುವುದು ಎಂದು ಹಲವು ಯುರೋ ನಾಯಕರು ಅರ್ಥಶಾಸ್ತ್ರಜ್ಞರು ಬ್ಯಾಂಕರುಗಳು ಬೆದರಿಸಿದ್ದರು. ಮರುಚುನಾವಣೆ ಜತೆಗೆ ಮಿತಯ್ಯಯ ಮತ್ತು ಯುರೋ ಬಗ್ಗೆ ಜನಮತ ಸಂಗ್ರಹ ಸಹ ನಡೆಯಬೇಕು ಎಂಬ ಸಲಹೆಯನ್ನು ಯುರೋ ನಾಯಕರು ತೀವ್ರ ಬೆದರಿಕೆಯಿಂದ ತಿರಸ್ಕರಿಸಿದರು. ಗ್ರೀಸ್ ಮಾತ್ರವಲ್ಲ ಇಡೀ ಯುರೋಪನ್ನು ರಕ್ಷಿಸಲು ಗ್ರೀಕ್ ಜನ 'ಜವಾಬ್ದಾರಿಯುತ'ವಾಗಿ ವರ್ತಿಸಬೇಕು (ಅಂದರೆ ಎಡಪಕ್ಷಗಳಿಗೆ ಮತ ನೀಡಬಾರದು) ಎಂದು ಮಾಧ್ಯಮಗಳು ಪುಂಗಿ ಊದಿದ್ದೇ ಊದಿದ್ದು. ಗ್ರೀಕ್ ಹಣಕಾಸು ಬಿಕ್ಕಟ್ಟಿನಿಂದ ಹೊರ ಬರಲು ನವ-ಉದಾರವಾದ ಮತ್ತು 'ಮಿತವ್ಯಯ' ನೀತಿಗಳಿಗೆ ಸ್ಪಷ್ಟ ಬದಲಿ ಕೊಡುವ, ಎಡಶಕ್ತಿಗಳ ಕೂಟ ಸಹ ಇಲ್ಲದೆ ಹೋದದ್ದು ಜನರ ಆಕ್ರೋಶ ಮತ್ತು ಬದಲಾವಣೆಯ ಹಂಬಲ ಕ್ರೋಢೀಕರಿಸಲು ಸಾಧ್ಯವಾಗಲಿಲ್ಲ. ಈ ಬೆದರಿಕೆ ಮತ್ತು ಅನಿಶ್ಚಿತತೆ ಇದ್ದಾಗ್ಯೂ, ಈಗಿನ ಮಿತವ್ಯಯ ನೀತಿಗಳನ್ನು ಬೆಂಬಲಿಸುವ ಪಕ್ಷಗಳಿಗೆ ಶೇ.50 ಕ್ಕಿಂತಲೂ ಕಡಿಮೆ ಮತ ಬಂದಿದೆ ಮತ್ತು ಅದಕ್ಕೆ ವಿರೋಧವಾಗಿರುವ ಮತಗಳೇ ಬಹುಮತದಲ್ಲಿ ಇದ್ದವು ಎಂದು ಗಮನಿಸಬೇಕು.

ನ್ಯೂ ಡೆಮೊಕ್ರಸಿ ನಾಯಕತ್ವದ ಹೊಸ ಸರ್ಕಾರ ಮೊದಲಿನಿಂದಲೇ ತೀವ್ರ ಸಮಸ್ಯೆಗಳನ್ನು ಎದುರಿಸುತ್ತಿದೆ. ಪ್ರದಾನಿ ತೀವ್ರ ಅನಾರೋಗ್ಯದಿಂದ ಯುರೋ ನಾಯಕರ ಸಭೆಗೆ ಹೋಗಲಾಗಲಿಲ್ಲ. ಮೊದಲು ನೇಮಿಸಲಾದ ಹಣಕಾಸು ಮಂತ್ರಿಗಳು 'ಅನಾರೋಗ್ಯದಿಂದ' ಅಧಿಕಾರ ಗ್ರಹಣ ಮಾಡಲಾಗಲಿಲ್ಲ. ಸಾಲಗಾರರ ಶಿಷ್ಟಮಂಡಳದ ಗ್ರೀಸ್ ಭೇಟಿ ಇದರಿಂದ ವಿಳಂಬವಾಗಿದೆ. ಇನ್ನೊಬ್ಬ ಮಂತ್ರಿ ಆತನ ವ್ಯಾಪಾರ (ವಿದೇಶೀ ತೈಲ ನಿಕ್ಷೇಪ ಕಂಪನಿಯ ಒಡೆತನ) ಮತ್ತು ಮಂತ್ರಿಖಾತೆಯ ಜವಾಬ್ದಾರಿ ಮಧ್ಯೆ ಆಸಕ್ತಿಗಳ ವೈರುಧ್ಯದ ಆಪಾದನೆ ಮೇಲೆ ರಾಜಿನಾಮೆ ಕೊಡಬೇಕಾಯಿತು. ಹೊಸ ಸರ್ಕಾರ ಈಗಾಗಲೇ ಐಎಂಎಫ್ ಸಾಲದ ಷರತ್ತುಗಳನ್ನು 'ಮೆದುಗೊಳಿಸಲು' ಪ್ರಯತ್ನಿಸುತ್ತಿದೆ. ಆದರೆ ಅಂತಹ ಅವಕಾಶವನ್ನು ಸಾಲಗಾರರು ಕೊಡುವುದರ ಬಗ್ಗೆ ತೀವ್ರ ಅನುಮಾನಗಳಿವೆ. ಅದು ಸಾಧ್ಯವಾಗದೆ ಒಪ್ಪಲಾಗಿರುವ ಇನ್ನಷ್ಟು 'ಭೀಕರ ಕಡಿತ'ಗಳನ್ನು ಐಎಂಎಫ್ ಒತ್ತಡಕ್ಕೆ ಒಂದು ಕಡೆ ಕುಸಿದು, ಇನ್ನೊಂದು ಕಡೆ ಸಾಮಾಜಿಕ ಸ್ಫೋಟ ಅಥವಾ ಅದರ ಭೀತಿಯಿಂದಾಗಿ ಜಾರಿ ಮಾಡಲಾಗದೆ ಸರ್ಕಾರ ಪುನಃ ಬೀಳುವ ಸಾಧ್ಯತೆ ಹೆಚ್ಚಾಗಿದೆ. ●

→

ಅಮೆರಿಕನ್-ವಿರೋಧಿ ನಿಲುವು ತೆಗೆದುಕೊಳ್ಳುತ್ತಿದ್ದ ತುರ್ಕಿ ಇಸ್ಲಾಂವಾದಿಗಳು ಈಗ ಸಿರಿಯಾ ವಿರುದ್ಧ ಅಮೆರಿಕನ್ ಯುದ್ಧದ ನೇತೃತ್ವ ವಹಿಸಿರುವುದು ಸಹ ಈ ಸೂತ್ರದ ಭಾಗ. ಅರಬ್ ಜನತೆಯ ಪ್ರಜಾಪ್ರಭುತ್ವ ಹೋರಾಟ ಸೋಲಿಸಲು ಹೀಗೆ ಸಾಮ್ರಾಜ್ಯಶಾಹಿ-ಸ್ಥಳೀಯ ಸರ್ವಾಧಿಕಾರಿ-ಇಸ್ಲಾಂವಾದಿಗಳ ತ್ರಿಪಕ್ಷೀಯ ಕೂಟದ ವ್ಯೂಹ ರಚಿಸಲಾಗುತ್ತಿದೆ. ಇದನ್ನು 10 ವರ್ಷಗಳ ಹಿಂದೆ ತುರ್ಕಿಯಲ್ಲಿ ಯಶಸ್ವಿಯಾಗಿ ಬಳಸಲಾಗಿತ್ತು. ಆದರೆ ಅದೇ ಸಮಯದಲ್ಲಿ ಪ್ರಜಾಪ್ರಭುತ್ವ ಚಳುವಳಿಯ ಪ್ರಭಾವ ಇಸ್ಲಾಂವಾದಿ ಕಾರ್ಯಕರ್ತರು ಮತ್ತು ಬೆಂಬಲಿಗರ ಮೇಲೂ ಆಗಿದೆ. ಅರಬ್ ಪ್ರಜಾಪ್ರಭುತ್ವ ಶಕ್ತಿಗಳು ಈ ಹೊಸ ಸವಾಲನ್ನು ಎದುರಿಸಲು ಸಜ್ಜಾಗುತ್ತಿವೆ. ಜನತೆಯ ರಾಜಕೀಯ ಪ್ರಜ್ಞೆಯ ಮಟ್ಟ ಚಳುವಳಿಯಿಂದ ಮೇಲಕ್ಕೆ ಹೋಗಿದೆ. ಅಧ್ಯಕ್ಷ ಮೊರ್ಸಿ ಮತ್ತು ಮಿಲಿಟರಿ ಆಡಳಿತ ಯಾವ ರೀತಿ ವರ್ತಿಸುವುದು ಎಂಬುದರ ಮೇಲೆ ಪ್ರಜಾಪ್ರಭುತ್ವ ಶಕ್ತಿಗಳ ಪ್ರತಿಕ್ರಿಯೆ ಅವಲಂಬಿಸಿರುತ್ತದೆ. ಪ್ರಜಾಪ್ರಭುತ್ವ ಶಕ್ತಿಗಳಿಗೆ ಸೋಲಾಗಿದೆ ಎಂಬ ನರಾಶಾವಾದ ಬೇಕಾಗಿಲ್ಲ. ಕಳೆದ ಒಂದು ವರ್ಷದಲ್ಲಿ ಕಾರ್ಮಿಕರ ಹೋರಾಟ ಸತತವಾಗಿ ನಡೆಯುತ್ತಾ ಬಂದಿದೆ. 'ತಾಹ್ರಿರ್ ಚೌಕ' ಮಾದರಿಯ ಚಳುವಳಿಯ ಪುನರಾವರ್ತನೆ ಕಷ್ಟವಾದೀತು. ಆದರೆ ಇತರ ರೂಪಗಳಲ್ಲಿ ಹೋರಾಟ ಮುಂದುವರೆಯುವುದು ಖಚಿತ. ●

ಕೃಷಿ ಮತ್ತು ಜನರನ್ನು ಕೊಲ್ಲುವ ಸರ್ಕಾರದ ನೀತಿ.....


ಪುಟ 5 ರಿಂದ

ಕೊಲೆಗಡುಕ ನವ ಉದಾರವಾದಿ ನೀತಿಗಳನ್ನು ಮತ್ತು ರಾಜಕೀಯವನ್ನು ಬಿಟ್ಟು ಬರ ಪರಿಹಾರದಲ್ಲಿ ತೊಡಗುವಂತೆ ಸಿಪಿಐ(ಎಂ) ಒತ್ತಾಯಿಸುತ್ತದೆ. ತಕ್ಷಣವೇ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಎಲ್ಲಾ ಬರ ಪೀಡಿತ ಗ್ರಾಮಗಳಲ್ಲಿ ಉಚಿತ ಆಹಾರ ಧಾನ್ಯಗಳ ಸರಬರಾಜು ಮಾಡಬೇಕು. ಅದೇ ರೀತಿ ಪ್ರತಿಯೊಂದು ಗ್ರಾಮದಲ್ಲಿಯೂ ಉದ್ಯೋಗ ಖಾತ್ರಿ ಕೆಲಸ ಸುಲಭವಾಗಿ ಸಿಗುವಂತೆ, ಭ್ರಷ್ಟಾಚಾರವಾಗದಂತೆ ಸೂಕ್ತ ಕ್ರಮವಹಿಸಬೇಕು. ಆಯಾ ಜಿಲ್ಲೆಗಳಿಂದ ಜನತೆ ವಲಸೆ ಹೋದಲ್ಲಿ ಅಲ್ಲಿನ ಜಿಲ್ಲಾ/ತಾಲ್ಲೂಕ ಪಂಚಾಯಿತಿ ಮುಖ್ಯಸ್ಥ ಅಧಿಕಾರಿಗಳನ್ನು ಹೊಣೆಗಾರರನ್ನಾಗಿಸಿ ಕ್ರಮವಹಿಸಬೇಕು. ಬಡ ಹಾಗೂ ಮಧ್ಯಮ ರೈತರ ಹಾಗೂ ಕೂಲಿಕಾರರ ಎಲ್ಲಾ ರೀತಿಯ ಸಾಲ ಮನ್ನಾ ಮಾಡಬೇಕು. ಎಲ್ಲಾ ಗ್ರಾಮಗಳಲ್ಲಿ ಮೇವಿನ ಬ್ಯಾಂಕ್ ತೆರೆಯಬೇಕು. ಇದೇ ರೀತಿ ಕುಡಿಯುವ ನೀರಿನ ಬಾವಿಗಳು, ಕೊಳವೆ ಬಾವಿಗಳು. ಬತ್ತಿ ಹೋಗುವ ಅಪಾಯವಿದ್ದು ಇದಕ್ಕೆ ಸಮರೋಪಾದಿಯಲ್ಲಿ ಕ್ರಮವಹಿಸಲು ಮತ್ತು ಎಲ್ಲೆಲ್ಲೂ ರಸ್ತೆ ರಿಪೇರಿ, ಕೆರೆ ಹೂಳೆತ್ತುವ ಮತ್ತಿತರೆ ಕಾಮಗಾರಿಗಳಿಗೆ ಮುಂದಾಗಬೇಕೆಂದು ಮತ್ತು ಬರ ಪರಿಹಾರ ನಿರ್ವಹಣೆಗೆ ಸರ್ವ ಪಕ್ಷಗಳ ಉಸ್ತುವಾರಿ ಸಮಿತಿಗಳನ್ನು ರಚಿಸಬೇಕೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಒತ್ತಾಯಿಸುತ್ತದೆ. ಬರ ಪರಿಹಾರ ಕ್ರಮಗಳ ಜಾರಿಗಾಗಿ ಒತ್ತಾಯಿಸಿ ಪಕ್ಷದ ಘಟಕಗಳು ಸ್ಥಳೀಯವಾಗಿ ಹೋರಾಟಗಳನ್ನು ತೀವ್ರಗೊಳಿಸಬೇಕೆಂದೂ, ಬರಪೀಡಿತ ಪ್ರದೇಶಗಳ ಜನತೆ ಸಿಪಿಐ(ಎಂ) ನಡೆಸುವ ಹೋರಾಟಗಳಲ್ಲಿ ಭಾಗವಹಿಸಬೇಕೆಂದೂ ಸಿಪಿಐ(ಎಂ) ರಾಜ್ಯ ಸಮಿತಿ ಮನವಿ ಮಾಡುತ್ತದೆ.

(ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರುಗಳಾದ ನಿತ್ಯಾನಂದ ಸ್ವಾಮಿ, ಯು. ಬಸವರಾಜ ಮಾಧ್ಯಮ ಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.)

ದುಡಿಯುವ ಜನರ ಕಲಾವಿದ ರಾಮಕಿಂಕರ್ ಬೈಜ್

ಒಂದು ಸಿಂಹಾವಲೋಕನ



ವಸಂತ


ಆಧುನಿಕ ಭಾರತೀಯ ಶಿಲ್ಪ ಕಲೆಯ ಆದಿಪುರುಷ ಎಂದು ಕರೆಯಲಾಗುವ ರಾಮಕಿಂಕರ್ ಬೈಜ್ (1906–80) ಅವರ ಕಲೆಯ ಒಂದು ಸಿಂಹಾವಲೋಕನ ಮಾಡುವ ದೊಡ್ಡ ಪ್ರದರ್ಶನ ಬೆಂಗಳೂರಿನ 'ನ್ಯಾಶನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್'ನಲ್ಲಿ ನಡೆಯುತ್ತಿದೆ. ನವದೆಹಲಿ, ಮುಂಬಯಿಗಳ ನಂತರ ಈ ಪ್ರದರ್ಶನ ಬೆಂಗಳೂರಿಗೆ ಬಂದಿದೆ. ಈ ಪ್ರದರ್ಶನದಲ್ಲಿ ಬೈಜ್ ಅವರ ಪ್ರಮುಖ ಶಿಲ್ಪಕಲೆ, ವರ್ಣಚಿತ್ರ, ಚಿತ್ರಗಳ ಮೂಲಕೃತಿ ಅಥವಾ ಅದರ ಬೃಹತ್ ಚಿತ್ರಗಳು ಇವೆ.




ಪಶ್ಚಿಮ ಬಂಗಾಳದ ಬಂಕುರಾ ಜಿಲ್ಲೆಯ ಬಡಕುಟುಂಬದಲ್ಲಿ ಜನಿಸಿ ಕಲೆಯಲ್ಲಿ ಅತೀವ ಆಸಕ್ತಿ ನೈಪುಣ್ಯ ತೋರಿಸಿದ್ದ ರಾಮಕಿಂಕರನ ಪ್ರತಿಭೆ ಗುರುತಿಸಿದ ರಾಷ್ಟ್ರೀಯ ಚಳುವಳಿಯ ನಾಯಕರೊಬ್ಬರು ಅವನನ್ನು ಶಾಂತಿನಿಕೇತನದ ಕಲಾಭವನಕ್ಕೆ ಸೇರಿಸಿದರು. ಅಲ್ಲಿ ರಾಮಕಿಂಕರ್ ಅವರ ಪ್ರತಿಭೆ ಅರಳಿತು. ರಾಷ್ಟ್ರೀಯ ಚಳುವಳಿ ಮತ್ತು ಆ ಮೇಲೆ 'ಇಪ್ಟಾ'ದಂತಹ ಪ್ರಗತಿಪರ ಚಳುವಳಿಯಿಂದ ಪ್ರಭಾವಿತರಾದ ಮತ್ತು ಅದರ ಸಾರವನ್ನು ತಮ್ಮ ಕಲೆಯಲ್ಲಿ ಇಳಿಸಿದ ವಿಶೇಷತೆ ಬೈಜ್ ಅವರದ್ದು. ಯಾವಾಗಲೂ ದುಡಿಯುವ ಜನ ಅವರ ಕಲೆಯ ವಸ್ತು. ದುಡಿಯುವ ಜನ ಬೇರೆ ಯಾವುದೇ ಆಧುನಿಕ ಕಲಾವಿದನ ಕಲೆಯಲ್ಲಿ ಅಷ್ಟು ವ್ಯಾಪಕವಾಗಿ ದಟ್ಟವಾಗಿ ಮೂಡಿಬಂದದ್ದಿಲ್ಲ.



ಬಂಡಾಯ ಸಾಮಾಜಿಕ ಪ್ರಜ್ಞೆ ಮತ್ತು ಸಾಮಾಜಿಕ ಕಳಕಳಿ ಅವರ ಜಾಯಮಾನದ ಭಾಗವಾಗಿತ್ತು. ಫ್ಯಾಸಿಸ್ಟ್–ವಿರೋಧಿ ಚಳುವಳಿಯ ಸಮಯದಲ್ಲಿ 'ಅಜ್ಞಾತ ರಾಜಕೀಯ ಕೈದಿ' ಎಂಬ ಅಂತರ್‍ರಾಷ್ಟ್ರೀಯ ಶಿಲ್ಪಕಲಾ ಸ್ಪರ್ಧೆಗೆ ಅವರು ತಮ್ಮ ರೈತ ಮಹಿಳೆಯ 'ಕೊಯ್ಲು' ಕೃತಿಯನ್ನು ಕಳಿಸಿದ್ದರಂತೆ! ಅಂದರೆ ಒಬ್ಬ ಬಡ ರೈತ ಮಹಿಳೆ 'ಅಜ್ಞಾತ ರಾಜಕೀಯ ಕೈದಿ'ಯಂತೆ ಅಂತ ಗ್ರಹಿಸುವಷ್ಟು ಅವರ ಸಾಮಾಜಿಕ ಪ್ರಜ್ಞೆ ಪ್ರಖರವಾಗಿತ್ತು. ಕಲೆಯ ತಂತ್ರಗಳಲ್ಲೂ ಆಧುನಿಕತೆಯನ್ನು ದೇಸಿ ಪರಂಪರೆಯ ಮೈಗೂಡಿಸಿಕೊಂಡು ತಮ್ಮದೇ ಆದ ಆಗ ಪ್ರಚಲಿತವಿದ್ದ 'ಶಾಂತಿನಿಕೇತನ' ಶೈಲಿಗಿಂತಲೂ ವಿಭಿನ್ನವಾದ ವಿಶಿಷ್ಟ ಶೈಲಿ ರೂಢಿಸಿಕೊಂಡರು. ಇಲ್ಲಿ ಕೊಡಲಾದ ಮತ್ತು ಪ್ರದರ್ಶನದಲ್ಲಿರುವ ಪ್ರಸಿದ್ಧ ಶಿಲ್ಪಕಲಾಕೃತಿಗಳಾದ 'ಸಂತಾಲ್ ಕುಟುಂಬ', 'ಕೊಯ್ಲು', ವರ್ಣಚಿತ್ರಗಳಾದ 'ಓಪನ್ ಟೀ ಶಾಪ್', 'ಬರ' ಅವರ ಕಲೆಯ ಉತ್ತಮ ಸ್ಯಾಂಪಲುಗಳು.





ದುಡಿಯುವ ಜನರ ಕಲಾವಿದರಾದ ರಾಮಕಿಂಕರ್ ಬೈಜ್ ಅವರ ಈ ಪ್ರದರ್ಶನ ಎಲ್ಲರೂ ನೋಡಲೇಬೇಕಾದ ಪ್ರದರ್ಶನ.

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12, 18th Cross, S.R.Nagar, BANGALORE - 560027
Editor: S.Y.GURUSHANTH